# ಲೇಖಕಿ

ಸಂಚಿಕೆ : 140

ಜುಲೈ 2025 –
ಜುಲೈ 2026







## ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ




ಮಂಡ್ಯ ಜಿಲ್ಲಾ ಲೇಖಕಿಯರ ಸಮ್ಮೇಳನದ ಸ್ಮರಣ ಸಂಚಿಕೆ ಧೀಮಂತೆ ಬಿಡುಗಡೆ



ಮೈಸೂರಿನಲ್ಲಿ ನಡೆದ ಕಾವ್ಯ ಕಮ್ಮಟ




ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ದತ್ತಿ
ಪ್ರಶಸ್ತಿ ಪ್ರದಾನ



ಧಾರವಾಡ ವಿವಿಯಲ್ಲಿ ನಡೆದ ಸಾಧಕಿ
ಸಮಾವೇಶದ ಉದ್ಘಾಟನೆ



ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ

# ಕರ್ನಾಟಕ ಲೇಖಕಿಯರ ಸಂಘ (ರಿ.), ಬೆಂಗಳೂರು

206, 2ನೇ ಮಹಡಿ, ವಿಜಯ ಮ್ಯಾನ್‌ಶನ್, 2ನೇ ತಿರುವು,
2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.
Website : www.karnatakalekhakiyarasangha.org,
E-mail : lekhaki2012@gmail.com

## 2025–2026ನೆಯ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ

## ತಿಳಿವಳಿಕೆ ಪತ್ರ

ಮಾನ್ಯ ಸದಸ್ಯರೆ,

ಕರ್ನಾಟಕ ಲೇಖಕಿಯರ ಸಂಘದ 2025–2026ನೆಯ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ 08–08–2026ರ ಶನಿವಾರ ಬೆಳಗ್ಗೆ 10–30 ಕ್ಕೆ** ಸರಿಯಾಗಿ ಕುವೆಂಪು ಸಭಾಂಗಣ (3ನೆಯ ಮಹಡಿ), ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಮಕ್ಕಳ ಕೂಟದ ಹತ್ತಿರ, ಚಾಮರಾಜಪೇಟೆ, ಬೆಂಗಳೂರು–18 ಇಲ್ಲಿ ಕರೆಯಲಾಗಿದೆ. ಸಭೆಯಲ್ಲಿ ಮಂಡಿಸಲಿರುವ ವಿಷಯಗಳ ವಿವರಗಳನ್ನು ಕೆಳಗಡೆ ನೀಡಲಾಗಿದೆ. ತಾವುಗಳು ಸಕಾಲಕ್ಕೆ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ:**

1. 2025–2026ನೆಯ ಸಾಲಿನ ವಾರ್ಷಿಕ ವರದಿ ಮಂಡನೆ, ಅಂಗೀಕಾರ.
2. 2025–2026ನೆಯ ಸಾಲಿನ ಆಯ–ವ್ಯಯ ಮಂಡನೆ, ಅಂಗೀಕಾರ.
3. 2026–2027ನೆಯ ಸಾಲಿನ ಅಂದಾಜು ಆಯವ್ಯಯ ಮಂಡನೆ, ಅಂಗೀಕಾರ.
4. ಇತರೆ ವಿಷಯಗಳು.

ಸಹಿ/–

**ಸುಮಾ ಸತೀಶ್**

ಕಾರ್ಯದರ್ಶಿ

**ವಿಶೇಷ ಸೂಚನೆ:**

1. ಸಂಘದ ಏಳಿಗೆಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು ಇಚ್ಛಿಸುವ ಸದಸ್ಯರು ದಿನಾಂಕ 04–08–2026ರ ಒಳಗಾಗಿ ತಾವು ಪ್ರಸ್ತಾಪಿಸುವ ವಿಷಯವನ್ನು ಲಿಖಿತ ರೂಪದಲ್ಲಿ ಕಾರ್ಯದರ್ಶಿಗಳಿಗೆ ಕಳುಹಿಸಬೇಕಾಗಿ ವಿನಂತಿ.
2. ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿಗಳನ್ನು ಸಂಪರ್ಕಿಸಿ. ಮೊ.: 9481480220

# ಲೇಖಕಿ

**ಸಂಚಿಕೆ 140** **ಜುಲೈ 2025 – ಜುಲೈ 2026**

| ಪ್ರಧಾನ ಸಂಪಾದಕರು | ಸಂಪಾದಕರು | ಸಹಾಯಕ ಸಂಪಾದಕರು |
|---|---|---|
| **ಡಾ. ಆರ್. ಸುನಂದಮ್ಮ** | **ಸುಮಾ ಸತೀಶ್** | **ಸರ್ವಮಂಗಳಾ, ಮಧುರಾ ಕರ್ಣಂ** |


## ಪರಿವಿಡಿ

ಪು.ಸಂ.

1. ಸಂಪಾದಕೀಯ 03
2. ಅಧಿಕಾರ ಸ್ವೀಕಾರ 07
3. ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಪಟ್ಟಿ ಮತ್ತು ಕಿರುಪರಿಚಯ 08
4. ಕಲೇಸಂ ಉಪಸಮಿತಿಗಳು 15
   ಅ) ಬೈಲಾ ತಿದ್ದುಪಡಿ ಸಮಿತಿ
   ಆ) ವೆಬ್‌ಸೈಟ್ ನಿರ್ವಹಣಾ ಸಮಿತಿ
   ಇ) ಮಾಧ್ಯಮ ನಿರ್ವಹಣಾ ಸಮಿತಿ
5. ವಾರ್ಷಿಕ ವರದಿ 16
6. ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಿನಿಸಂವಾದ 20
7. "ಭಾಷೆ ಹಾಗೂ ಅನುವಾದ: ಆಯಾಮ ಮತ್ತು ಸವಾಲುಗಳು" ಒಂದು ದಿನದ ರಾಷ್ಟ್ರಮಟ್ಟದ ಬಹುಭಾಷಾ ಸಮ್ಮೇಳನ 22
8. ಹನ್ನೆರಡನೆಯ ಶತಮಾನದ ಅಪ್ರಚಲಿತ ವಚನಕಾರ್ತಿಯರು – ಕಮ್ಮಟ 24
9. "ಸಾಧಕಿ" ಸಮಾವೇಶ – ಧಾರವಾಡ 29
10. ಕಲೇಸಂ ವಾರ್ಷಿಕ ಪ್ರಶಸ್ತಿಗಳು ಹಾಗೂ ನಳಿನಿಮೂರ್ತಿ ದತ್ತಿ ಪ್ರಶಸ್ತಿ ಪ್ರದಾನ ಹಾಗೂ ವೆಬ್‌ಸೈಟ್ ಉದ್ಘಾಟನೆ 32
11. ವಾರ್ಷಿಕ ಪ್ರಶಸ್ತಿ ಪುರಸ್ಕೃತರ ಪಟ್ಟಿ (2024 ಮತ್ತು 2025) 34
12. ಕಾವ್ಯಕಮ್ಮಟ – 2026 (ಮೈಸೂರು) 38
13. ಮಂಡ್ಯ ಜಿಲ್ಲಾ ಲೇಖಕಿಯರ ಸಂಘ – ಮೊದಲ ಸಮ್ಮೇಳನ 42
14. ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ 51
15. ಜಿಲ್ಲಾ ಘಟಕಗಳ ಕಾರ್ಯಕ್ರಮ ವರದಿಗಳು 53
   ಅ) ಮೈಸೂರು
   ಆ) ಚಿತ್ರದುರ್ಗ
   ಇ) ಬೀದರ್
   ಈ) ಬೆಳಗಾವಿ
   ಉ) ಚಿಕ್ಕಮಗಳೂರು
   ಊ) ತುಮಕೂರು
16. ಅಭಿನಂದನೆಗಳು 61
17. ನುಡಿನಮನ 62
18. ನುಡಿನಮನ ಕಾರ್ಯಕ್ರಮ 63
19. ಲೆಕ್ಕಪತ್ರ (ಏಪ್ರಿಲ್ 2025 – ಮಾರ್ಚ್ 2026) 65

## ಸಂಪಾದಕೀಯ

ಕರ್ನಾಟಕ ಲೇಖಕಿಯರ ಸಂಘದಿಂದ ಹೊರತರುವ 'ಲೇಖಕಿ' ಪತ್ರಿಕೆಯ 140ನೆಯ ಸಂಚಿಕೆಯು ತಮ್ಮ ಕೈ ಸೇರುತ್ತಿರುವುದು ತಡವಾಗಿದೆ. ಹೊಸ ತಂಡ ಡಿಸೆಂಬರ್ 16, 2025 ರಿಂದ ಕಾರ್ಯ ನಿರ್ವಹಿಸುತ್ತಿದೆ. ಹಲವು ಕೆಲಸಗಳು ತುರ್ತಾಗಿ ಮಾಡಬೇಕಾಗಿದ್ದವು. ಆ ಕೆಲಸಗಳ ಕಡೆ ಗಮನ ಹರಿಸಿದ್ದರಿಂದ ಸಂಚಿಕೆ ತರಲು ತಡವಾಗಿದೆ ಎಂದು ಹೇಳಬಯಸುವೆ, ಇದಕ್ಕೆ ತಮ್ಮೆಲ್ಲರ ಕ್ಷಮೆ ಇರುವುದೆಂದು ತಿಳಿಯುವೆ.

ಲೇಖಕಿಯರ ಸಂಘ ಪ್ರಾರಂಭವಾಗಿ 47 ವರ್ಷಗಳನ್ನು ಮುಗಿಸಿರುವುದು ತಮಗೆ ಅರಿವಿರುವ ಸಂಗತಿಯೇ ಆಗಿದೆ. ಈ ಹಿಂದೆ ಸಂಘವು ಪ್ರಾರಂಭಿಸಿದ್ದ ಅಂತರ್ಜಾಲ ತಾಣ (Web Site) ಸ್ಥಗಿತವಾಗಿತ್ತು ಅದನ್ನು ಮತ್ತೆ ಪ್ರಾರಂಭಿಸಲಾಗಿದೆ. ಅದರ ವೆಚ್ಚಕ್ಕಾಗಿ ಡಾ. ಎನ್.ಗಾಯತ್ರಿ, ಡಾ. ಆರ್.ಕೆ. ಸರೋಜ, ಸರ್ವಮಂಗಳ, ಭೂಮಿಕ, ಡಾ. ಸೆಲ್ವಕುಮಾರಿ, ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್, ಮತ್ತು ಡಾ. ಆರ್. ಸುನಂದಮ್ಮ ಅವರು ನೀಡಿದ ಆರ್ಥಿಕ ಸಹಕಾರದಿಂದ ಈ ಕೆಲಸವನ್ನು ಸುಲಲಿತವಾಗಿ ಮುಗಿಸಲಾಗಿದೆ. ಈ ಸಮಿತಿಯ ಮುಖ್ಯಸ್ಥರಾದ ಜಯಲಕ್ಷ್ಮೀ ಪಾಟೀಲ, ಸದಸ್ಯರಾದ ಸರ್ವಮಂಗಳ, ಡಾ. ಮುಕ್ತ ಬಿ. ಕಾಗಲಿ, ಡಾ. ಮಮತ, ಮಾನಸ ಅವರ ಆಸ್ಥೆ ಮೆಚ್ಚುವಂತಹದು. ಎಲ್ಲ ದೃಷ್ಟಿಕೋನಗಳಿಂದ ಪರಿಶೀಲಿಸಿ ಅಂತರ್ಜಾಲ ತಾಣ ರೂಪಿಸಲು ಕೆಲಸ ಮಾಡಿದ್ದಾರೆ. ಕಲೇಸಂ ವತಿಯಿಂದ ಸಮಿತಿಯಲ್ಲಿದ್ದ ಎಲ್ಲರಿಗೂ ಧನ್ಯವಾದಗಳು.

ಕರ್ನಾಟಕ ಲೇಖಕಿಯರ ಸಂಘದ ಉಪಕಾನೂನು (By-law) ಕರಡು ತಿದ್ದುಪಡಿಯನ್ನು ಶ್ರೀಮತಿ ಹೇಮಲತಾ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ಡಾ॥ ವಸುಂಧರಾ ಭೂಪತಿ, ಡಾ. ಎನ್.ಗಾಯತ್ರಿ, ಡಾ. ಸಬಿಹಾ ಭೂಮಿಗೌಡ, ಶ್ರೀಮತಿ ಎಂ.ಎನ್. ಸುಮನ ಸದಸ್ಯರಾಗಿ ಕಾರ್ಯ ನಿರ್ವಹಿಸಿ ಪ್ರತಿ ಸಿದ್ಧಗೊಳಿಸಿ ನೀಡಿದ್ದಾರೆ. ಶ್ರೀಮತಿ ಸುಮಾ ಸತೀಶ ಅವರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ಕಾಲಕಾಲಕ್ಕೆ ಸಭೆ ಸೇರಲು ಮತ್ತು ಕರಡು ತಯಾರಿಸಲು ಕೆಲಸ ಮಾಡಿದ್ದು, ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಕರಡನ್ನು ಮಂಡಿಸಲಾಗುವುದು ಎಂದು ತಿಳಿಸಲು ಸಂತೋಷವಾಗುತ್ತದೆ. ಅನಂತರದಲ್ಲಿ ಸದಸ್ಯರಿಗೆ ಗುರುತಿನ ಚೀಟಿ/ಗುರುತಿನ ದಾಖಲೆ (Identity Card/ Identity Document) ಸಿದ್ಧಪಡಿಸಲು ತಯಾರಿ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅದರ ರೂಪುರೇಷೆ ಸಿದ್ಧವಾದ ತಕ್ಷಣ ಸರ್ವಸದಸ್ಯರ ವಾಟ್ಸ್ಯಾಪ್ (Whats app) ಗ್ರೂಪ್‌ನಲ್ಲಿ ಹಂಚಿಕೊಳ್ಳಲಾಗುವುದು.

ಲೇಖಕಿಯರ ಸಂಘವು ಪ್ರತಿವರ್ಷವೂ ಪ್ರದಾನ ಮಾಡುವ ದತ್ತಿ ಪ್ರಶಸ್ತಿಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ತಮ್ಮೆಲ್ಲರ ಗಮನಕ್ಕೆ ಈಗಾಗಲೇ ಬಂದಿದೆ. ಈ ವರ್ಷದಿಂದ ಸಂಘವು ಪ್ರಶಸ್ತಿ ಪಡೆದವರಿಗೆ ಪ್ರಶಸ್ತಿ ಪತ್ರವನ್ನು ಸಿದ್ಧಗೊಳಿಸಿ ನೀಡಲು

ಪ್ರಾರಂಭಿಸಿದೆ. ಜೊತೆಯಲ್ಲಿ ಈಗಾಗಲೇ ವಾರ್ಷಿಕ ಪ್ರಶಸ್ತಿ ಪುರಸ್ಕೃತರನ್ನು ಕುರಿತು ಪೃಥಾ ಎಂಬ ಪರಿಚಯ ಪುಸ್ತಿಕೆಯನ್ನು ಸಹ ಪ್ರಕಟಿಸಲಾಗಿದೆ. ಇದನ್ನು ಮುಖ್ಯವೆಂದು ಪರಿಗಣಿಸಿ ಆ ಕಾರ್ಯವನ್ನು ನಮ್ಮೆಲ್ಲಾ ಪದಾಧಿಕಾರಿಗಳು ಕಾರ್ಯಕಾರಿಣಿ ಸಮಿತಿ ಅಚ್ಚುಕಟ್ಟಾಗಿ ಸಿದ್ಧಗೊಳಿಸಿ ಸಂಬಂಧಿಸಿದವರಿಗೆ ತಲುಪಿಸಿರುವುದು ಶ್ಲಾಘನೆಯ ವಿಷಯವಾಗಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳ ಲೇಖಕಿಯರಿಗೂ ಪ್ರಶಸ್ತಿ ದೊರೆತಿರುವುದು ಸಂಘಕ್ಕೆ ಹೆಮ್ಮೆಯ ವಿಷಯವಾಗಿದೆ. ಹಿರಿಯರ ಜೊತೆಯಲ್ಲಿ ಹಲವು ಕಿರಿಯ ಲೇಖಕಿಯರು ಪ್ರಶಸ್ತಿ ಪಡೆದಿದ್ದು ಸಂತಸದ ಸಂಗತಿ. ಕಿರಿಯರು ಉತ್ಸಾಹದಿಂದ ಹಿರಿಯರೊಂದಿಗೆ ಕೂಡಿ ಸಂಭ್ರಮಿಸಿದ್ದು ಅತ್ಯಂತ ಖುಷಿ ತಂದಿದೆ. ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಪಾರದರ್ಶಕವಾಗಿ ಕಾರ್ಯಕ್ರಮ ನಡೆಸಲು ಮುಖ್ಯವಾಗಿ ತಮ್ಮೆಲ್ಲರ ಸಹಕಾರ ಮತ್ತು ಸೌಹಾರ್ದ ನೆರವು ದೊರೆತಿರುವುದು ಸಂಘದ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಾಗಿದೆ.

ಡಾ. ನಳಿನಿ ಮೂರ್ತಿ ಅವರ ಹೆಸರಿನಲ್ಲಿ ಅವರ ಪತಿ ಶ್ರೀ ನರಸಿಂಹಮೂರ್ತಿ ಅವರು ಸ್ಥಾಪಿಸಿರುವ ನಳಿನಿ ಮೂರ್ತಿ ವಿಜ್ಞಾನ ಬರಹಗಾರ್ತಿ 2024ರ ಪ್ರಶಸ್ತಿಯು ಡಾ.ಬಿ.ಎಸ್.ಶೈಲಜಾ ಅವರಿಗೂ, 2025ರ ಪ್ರಶಸ್ತಿಯು ಶ್ರೀಮತಿ ನೇಮಿಚಂದ್ರ ಅವರಿಗೂ ಲಭಿಸಿದೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಬ್ಬರು ಲೇಖಕಿಯರೂ ಬಂದು ಪ್ರಶಸ್ತಿ ಸ್ವೀಕರಿಸಿ ಕಿರಿಯರಿಗೆ ಕನ್ನಡದಲ್ಲಿ ವಿಜ್ಞಾನ ಬರಹಗಳನ್ನು ಬರೆಯಲು ಪ್ರೇರೇಪಿಸಿದರು. ಇವರ ಪ್ರಭಾವದಿಂದ ಹಲವಾರು ಲೇಖಕಿಯರು ವಿಜ್ಞಾನ ಬರಹಗಳನ್ನು ಬರೆಯಲು ತೊಡಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

ಲೇಖಕಿಯರಲ್ಲಿ ಸಾಹಿತ್ಯದ ಆಸಕ್ತಿ ಮೂಡಿಸಲು ವಚನಕಾರ್ತಿಯರ ಕುರಿತ ಒಂದು ದಿನದ ಕಮ್ಮಟವನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಿ.ಸೋಮಶೇಖರ್ ಅವರ ನೆರವಿನಿಂದ ನಡೆಸಲಾಯಿತು. ಈ ಕಮ್ಮಟದಲ್ಲಿ 40ಕ್ಕೂ ಹೆಚ್ಚು ಲೇಖಕಿಯರು ಭಾಗವಹಿಸಿದ್ದರು. ಇಂತಹ ಕಮ್ಮಟಗಳ ಆಯೋಜನೆಯಿಂದ ಬರಹಗಾರರು ನಿರಂತರವಾಗಿ ಚಿಂತಿಸಲು, ಯೋಚಿಸಲು ಮತ್ತು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಮತ್ತು ಖಚಿತವಾಗಿ ಮಂಡಿಸಲು ಸಾಧ್ಯವಾಗಿಸುತ್ತದೆ.

ಲೇಖಕಿಯರ ಕೋರಿಕೆಯ ಮೇರೆಗೆ ಮೈಸೂರಿನ ಸಮತಾ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಕಾವ್ಯಕಮ್ಮಟವನ್ನು ಹಮ್ಮಿಕೊಳ್ಳಲಾಯಿತು. ಕಮ್ಮಟದ ನಿರ್ದೇಶಕರಾಗಿ ಶ್ರೀಮತಿ ಪ್ರತಿಭಾ ನಂದಕುಮಾರ್ ಅವರು ಎರಡು ದಿನಗಳ ಕಾಲ ಯುವ ಕವಿಗಳೊಂದಿಗೆ ಬೆರೆತು ಕಾವ್ಯ ಕಟ್ಟುವ ಬಗ್ಗೆ, ಕಾವ್ಯ ವಾಚನದ ಬಗ್ಗೆ ಮಾರ್ಗದರ್ಶನ ನೀಡಿದ್ದು ಹಲವರಲ್ಲಿ ಕಾವ್ಯ ಕಟ್ಟುವ ಹುರುಪನ್ನು ಪ್ರಖರಗೊಳಿಸಿದೆ. ಇಂತಹ ಹಲವು ಕಮ್ಮಟಗಳನ್ನು ಹಮ್ಮಿಕೊಳ್ಳುವ ಉತ್ಸುಕತೆ ನಮಗಿದೆ. ತಾವು ಸ್ಪಂದಿಸುತ್ತಿದ್ದರೆ ನಾವು ಮುಂದೆಯೂ ಮತ್ತಷ್ಟು ಕಮ್ಮಟಗಳನ್ನು ಆಯೋಜಿಸಲು ಉತ್ಸುಕರಾಗಿದ್ದೇವೆ. ಒಟ್ಟಿನಲ್ಲಿ ರಾಜ್ಯದ ಎಲ್ಲ ಭಾಗದ ಲೇಖಕಿಯರು ಆಗಾಗ ಒಂದು ಕಡೆ ಕೂಡುತ್ತಾ, ಯೋಚಿಸುತ್ತಾ ನಮ್ಮ ನಮ್ಮ ಬರಹಗಳನ್ನು, ಚಿಂತನೆಗಳನ್ನು

ಮೊನಚಾಗಿಸಿಕೊಳ್ಳುವ ಕ್ರಿಯೆಗೆ ತೊಡಗುವುದು ನಿಮ್ಮ ಒತ್ತಾಸೆಯಿಂದ ಕಾರ್ಯರೂಪಕ್ಕೆ ಇಳಿದಿದೆ.

ಇದಲ್ಲದೆ ರಾಜ್ಯದ ಬೇರೆ ಬೇರೆ ಸಂಸ್ಥೆ, ಸಂಘಟನೆಗಳೊಂದಿಗೆ ಲೇಖಕಿಯರ ಸಂಘ ಕಾರ್ಯಕ್ರಮಗಳನ್ನು ರೂಪಿಸಲು ಬಯಸುತ್ತದೆ. ಇದರ ಭಾಗವಾಗಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಸಂಶೋಧನಾ ಕೇಂದ್ರ ಮತ್ತು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಸಹಯೋಗದಲ್ಲಿ ವಚನಕಾರ್ತಿಯರು, ಕೀರ್ತನಕಾರ್ತಿಯರು ಮತ್ತು ತತ್ತ್ವಪದಕಾರ್ತಿಯರ ಕುರಿತು ಎರಡು ದಿನಗಳ ಸಾಹಿತ್ಯ ಸಮಾವೇಶವನ್ನು ಮಾರ್ಚ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ 100ಕ್ಕೂ ಹೆಚ್ಚು ಲೇಖಕಿಯರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಇದೊಂದು ಅಪೂರ್ವ ಸಂಗಮವಾಗಿತ್ತು. ನಮ್ಮ ಹಿರಿಯ ಅಕ್ಕಂದಿರ ಅಭಿವ್ಯಕ್ತಿ ವಿಧಾನವನ್ನು ಕುರಿತು ಎರಡು ದಿನ ಚಿಂತನೆಗೆ ತೊಡಗಲು ಅನುವು ಮಾಡಿದ ಅಧ್ಯಕ್ಷರಾದ ಶ್ರೀ ಕಾ. ತ. ಚಿಕ್ಕಣ್ಣ ಅವರ ನೆರವು ಶ್ಲಾಘನೀಯ. ಇಂತಹ ಸಮಾವೇಶಗಳನ್ನು ಮತ್ತಷ್ಟು ಹಮ್ಮಿಕೊಳ್ಳುವ ಧೈರ್ಯವನ್ನು ತಾವೆಲ್ಲ ನೀಡುತ್ತಿರುವುದು, ಸಂಘದ ಚಟುವಟಿಕೆಗಳು ಮತ್ತಷ್ಟು ವಿಸ್ತಾರವಾಗಲು ಅನುವು ಮಾಡಿದೆ.

ಲೇಖಕಿಯರ ಸಂಘದ ಜಿಲ್ಲಾ ಘಟಕಗಳೊಂದಿಗೆ ಸೇರಿ ಕಾರ್ಯಕ್ರಮಗಳನ್ನು ಸಾಧ್ಯವಾಗಿಸುವತ್ತಲೂ ಯೋಜನೆಗಳಿವೆ. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಲೇಖಕಿಯರ ಸಂಘವು ಜಿಲ್ಲಾ ಲೇಖಕಿಯರ ಸಮ್ಮೇಳನವನ್ನು ಆಯೋಜಿಸಿತ್ತು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ. ಟಿ.ಸಿ. ಪೂರ್ಣಿಮಾ ಅವರನ್ನು ಆಯ್ಕೆ ಮಾಡಲಾಗಿತ್ತು. ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಜಿಲ್ಲೆಯ ಲೇಖಕಿಯರ ಶ್ರಮದಿಂದ ವಿಶೇಷ ಸಂಚಿಕೆಯನ್ನು ಹೊರತರಲಾಗಿದೆ. ಈ ಸಂಚಿಕೆಯು 2020ರ ನಂತರ ಬಂದ ಹಲವು ಲೇಖಕಿಯರ 20ಕ್ಕೂ ಹೆಚ್ಚು ಕಾದಂಬರಿಗಳನ್ನು ವಿಮರ್ಶಿಸಿದ ಲೇಖನಗಳನ್ನು ಒಳಗೊಂಡಿರುವುದು ಅತ್ಯಂತ ಶ್ಲಾಘನೀಯ. ಈ ಕೆಲಸಕ್ಕೆ ಸಮಯ ಮತ್ತು ಶಕ್ತಿ ಎರಡನ್ನೂ ನೀಡಿದ ಸಂಪಾದಕ ಮಂಡಳಿಯ ಡಾ.ಸಬಿಹಾ ಭೂಮಿಗೌಡ, ಡಾ. ಕೆಂಪಮ್ಮ ಮುಂತಾದವರಿಗೆ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಜಿಲ್ಲೆಯ ಅಧ್ಯಕ್ಷರಾದ ಶ್ರೀಮತಿ ಮೀರಾ ಶಿವಲಿಂಗಯ್ಯ ಅವರ ಸಹಯೋಗ ಅರ್ಥಪೂರ್ಣವಾಗಿ ಒದಗಿ ಬಂದಿರುವುದು ಸಂತಸ ತಂದಿದೆ. ಈ ಸಮ್ಮೇಳನ ಮುಂದಿನ ದಿನಗಳಲ್ಲಿ ಇತರೆ ಜಿಲ್ಲಾ ಸಮ್ಮೇಳನಗಳಿಗೆ ಪ್ರೇರಣೆಯಾಗಲಿ ಎಂಬ ಆಶಯವಿದೆ.

ವಿಜ್ಞಾನ ಬರಹಗಳಲ್ಲಿ ಲೇಖಕಿಯರನ್ನು ಸಕ್ರಿಯವಾಗಿ ತೊಡಗಿಸುವ ಆಸೆ ನಮಗಿದೆ. ಇದಕ್ಕೆ ನಮ್ಮೊಂದಿಗೆ ಕೈ ಜೋಡಿಸಲು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಉತ್ಸುಕವಾಗಿದ್ದು ಸೆಪ್ಟೆಂಬರ್ ನಲ್ಲಿ ಈ ಕಮ್ಮಟವನ್ನು ಹಮ್ಮಿಕೊಳ್ಳಲಾಗುವುದು. ಯುವ ಲೇಖಕಿಯರು ಈ ಕಮ್ಮಟದಲ್ಲಿ ಭಾಗವಹಿಸಲು ಮುಂದಾಗಬೇಕಾಗಿದೆ. ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡುವ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಛಾಪು ದಾಖಲಿಸಲು ಸಹಾಯವಾಗುತ್ತದೆ ಎಂದು ಭಾವಿಸಿದ್ದೇವೆ. ಶ್ರೀಮತಿ ನಳಿನಿಮೂರ್ತಿ

ಅವರ ಪತಿ ಶ್ರೀ ನರಸಿಂಹಮೂರ್ತಿ ಅವರು, ದತ್ತಿ ಹಣದಲ್ಲಿ ಪ್ರಶಸ್ತಿಗಳ ಜೊತೆಗೆ ಕಮ್ಮಟ, ಕಾರ್ಯಾಗಾರ ಮತ್ತು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಲು ಮಾರ್ಚ್ 2024ರಲ್ಲಿ 20 ಲಕ್ಷ ಹಣ ದತ್ತಿ ಇಟ್ಟಿರುವರು. ಅವರಿಗೆ ಕಲೇಸಂ ಹಾರ್ದಿಕ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಶ್ರೀಮತಿ ಶಂಕರಮ್ಮ ಪ. ಬಳಿಗಾರ್ ಅವರ ಹೆಸರಿನಲ್ಲಿ ಬಳಿಗಾರ್ ಕುಟುಂಬವು ಹಿಂದೆ ಇಟ್ಟಿದ್ದ 7 ಲಕ್ಷ ರೂ. ದತ್ತಿಯ ಜೊತೆಗೆ ಮಾರ್ಚ್ ತಿಂಗಳಲ್ಲಿ ಮತ್ತೆ 3 ಲಕ್ಷಗಳನ್ನು ನೀಡಿ ಒಟ್ಟು 10 ಲಕ್ಷ ದತ್ತಿ ಇಟ್ಟು, ಸಾಹಿತ್ಯ ಮತ್ತು ವಿವಿಧ ಕ್ಷೇತ್ರದ ಮಹಿಳೆಯರನ್ನು ಗುರುತಿಸಿ ಪ್ರೋತ್ಸಾಹಿಸಲು ನೆರವಾಗಿದೆ. ಅವರ ಕುಟುಂಬದವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಕಲೇಸಂ ಸಲ್ಲಿಸುತ್ತದೆ. ಜುಲೈ 11 ರಂದು ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ದತ್ತಿ ಸಮಾರಂಭವು ಯಶಸ್ವಿಯಾಗಿ ನಡೆದಿದೆ. ಸತತವಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ಕಲೇಸಂನ ಕ್ರಿಯಾಶೀಲತೆಯನ್ನು ಮುಂದೆಯೂ ಉಳಿಸಿಕೊಂಡು ಹೋಗುವ ಗುರಿ ನಮ್ಮದು.

ನಮ್ಮೊಂದಿಗೆ ಈ ಕಾರ್ಯ ನಿರ್ವಹಿಸುತ್ತಿರುವ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರ ನೆರವು, ಸಹಕಾರ ಮತ್ತು ಸ್ನೇಹಭಾವ ಸಂಘಕ್ಕೆ ಶಕ್ತಿಯನ್ನು ನೀಡುತ್ತದೆಂದು ಭಾವಿಸುತ್ತೇನೆ. ಇದರ ಜೊತೆಗೆ ಸಂಘದ ಹಿರಿಯರೂ, ಹಿಂದಿನ ಅಧ್ಯಕ್ಷರುಗಳ ಸಹಕಾರ ಲಭಿಸಿರುವುದು ಖುಷಿ ತಂದಿದೆ. ಅವರ ಮಾರ್ಗದರ್ಶನದಿಂದ ಸಂಘದ ಕಾರ್ಯ ಚಟುವಟಿಕೆಗಳನ್ನು ಮತ್ತಷ್ಟು ಹಿರಿದು ಮಾಡೋಣ. ನಿಮ್ಮೆಲ್ಲರ ಬೆಂಬಲವೇ ಸಂಘದ ಬಲ.

**ಡಾ. ಆರ್. ಸುನಂದಮ್ಮ.**
**ಅಧ್ಯಕ್ಷರು, ಕಲೇಸಂ**

# 2. ಅಧಿಕಾರ ಸ್ವೀಕಾರ

2025ರ ಡಿಸೆಂಬರ್ 14 ರಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಶ್ರೀಮತಿ ನಿರ್ಮಲಾ ಎಲಿಗಾರ್ ಮತ್ತು ಡಾ. ಆರ್. ಸುನಂದಮ್ಮ ಅವರು ಸ್ಪರ್ಧಿಸಿದ್ದು, ರಾಜ್ಯಾದ್ಯಂತ ಇರುವ 1600 ಕಲೇಸಂ ಸದಸ್ಯರಲ್ಲಿ 757 ಜನ ಅಂಚೆ ಮತ್ತು ನೇರ ಮತದಾನದ ಮೂಲಕ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ನಿರ್ಮಲಾ ಎಲಿಗಾರ್ ಅವರಿಗೆ 282 ಮತಗಳು ಲಭಿಸಿದರೆ, ಡಾ. ಆರ್. ಸುನಂದಮ್ಮ ಅವರು 471 ಮತಗಳನ್ನು ಪಡೆದು ಚುನಾವಣೆಯಲ್ಲಿ ವಿಜಯಿ ಎಂದು ಘೋಷಿಸಲ್ಪಟ್ಟರು. 4 ಮತಗಳು ಅಸಿಂಧುವಾದವು.

ಡಿಸೆಂಬರ್ 15, 2025ರಂದು ಕಲೇಸಂನ 11ನೆಯ ಅಧ್ಯಕ್ಷರಾಗಿ ಆರ್. ಸುನಂದಮ್ಮ ಅವರು ನಿಕಟಪೂರ್ವ ಅಧ್ಯಕ್ಷರಾದ ಡಾ. ಎಚ್.ಎಲ್. ಪುಷ್ಪ ಅವರಿಂದ ಅಧಿಕಾರ ಸ್ವೀಕರಿಸಿದರು.



**ನೂತನ ಅಧ್ಯಕ್ಷರಾಗಿ ಡಾ. ಆರ್. ಸುನಂದಮ್ಮ ಅವರಿಂದ ಅಧಿಕಾರ ಸ್ವೀಕಾರ**



**ಅಧ್ಯಕ್ಷರು, ಪದಾಧಿಕಾರಿಗಳು, ಮತ್ತು ಕಾರ್ಯಕಾರಿ ಸಮಿತಿ**

# 3. ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಪಟ್ಟಿ ಮತ್ತು ಕಿರುಪರಿಚಯ

2025ರ ಡಿಸೆಂಬರ್ 18 ರಂದು ಕಲೇಸಂ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಅವರು ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯನ್ನು ರಚಿಸಿದರು.

ಉಪಾಧ್ಯಕ್ಷರಾಗಿ ಡಾ॥ ಆರ್. ಕೆ. ಸರೋಜಾ ಮತ್ತು ಸರ್ವಮಂಗಳಾ, ಕಾರ್ಯದರ್ಶಿಯಾಗಿ ಸುಮಾ ಸತೀಶ್, ಸಹ ಕಾರ್ಯದರ್ಶಿಯಾಗಿ ಡಾ. ಅನುರಾಧ ಬಿ.ಟಿ., ಖಜಾಂಚಿಯಾಗಿ ಡಾ. ಲಲಿತಾ ಕೆ. ಹೊಸಪ್ಯಾಟಿ ಅವರನ್ನು ನೇಮಿಸಲಾಯಿತು.

ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೃಷ್ಣಾಬಾಯಿ ಹಾಗಲವಾಡಿ, ಡಾ. ಮುಕ್ತಾ ಬಿ. ಕಾಗಲಿ, ಡಾ. ಅನಸೂಯಾ ಟಿ. ಟಿ. ಹೊಂಬಾಳೆ, ಮಧುರಾ(ಅಲಕಾ) ಕರ್ಣಂ, ಡಾ. ಮಮತಾ ಕೆ. ಎನ್., ಸಿರಿಗೌರಿ, ರೇಣುಕಾ ಕೋಡಗುಂಟಿ (ಪೇರ್ಮಿ), ಜ಼ಾಹಿದಾ ಶಿರೀನ್, ಮಾನಸ ಚಂದ್ರಿಕಾ ವಿ. ಎಂ. ಹಾಗೂ ಎ. ಜ್ಯೋತಿ ಅವರನ್ನು ನೇಮಿಸಲಾಯಿತು.




**ಮಂಡ್ಯ ಜಿಲ್ಲಾ ಲೇಖಕಿಯರ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಟಿ.ಸಿ. ಪೂರ್ಣಿಮಾ ಅವರ ಸನ್ಮಾನ**

# ಪದಾಧಿಕಾರಿಗಳ ಪರಿಚಯ



**ಡಾ. ಆರ್. ಸುನಂದಮ್ಮ,** ಅಧ್ಯಕ್ಷರು

ಡಾ. ಆರ್. ಸುನಂದಮ್ಮನವರು ಕೋಲಾರ ಜಿಲ್ಲೆಯ ವೆಂಕಟಾಪುರದಲ್ಲಿ ರಾಮಯ್ಯ ಮತ್ತು ನಾರಾಯಣಮ್ಮ ದಂಪತಿಗಳ ಮಗಳಾಗಿ 1960ರಲ್ಲಿ ಜನಿಸಿದರು. ಹಳ್ಳಿಯ ತಮ್ಮ ಜನರಲ್ಲಿ 10ನೇ ಕ್ಲಾಸ್ ಪಾಸು ಮಾಡಿದ ಮೊದಲನೇ ಹುಡುಗಿಯಾಗಿದ್ದರು. ಮಹಾರಾಣಿ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. ಕನ್ನಡ ಸಾಹಿತ್ಯದತ್ತ ಆಕರ್ಷಿತರಾಗಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಮತ್ತು ಮೈಸೂರು ವಿಶ್ವವಿದ್ಯಾಲಯದಿಂದ "ದಾಸ ಸಾಹಿತ್ಯದಲ್ಲಿ ಜನಪದ ಅಂಶಗಳು" ಎಂಬ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದರು.

2003 ರಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕಾರ್ಯಕ್ರಮ ಅಧಿಕಾರಿಯಾಗಿ ನಿಯುಕ್ತರಾದವರು ಪ್ರಾಧ್ಯಾಪಕರಾಗಿ, ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ, ಎನ್.ಎಸ್.ಎಸ್. ಕಾರ್ಯಕ್ರಮದ ಸಂಯೋಜಕರಾಗಿ, ವಿದ್ಯಾರ್ಥಿ ಕ್ಷೇಮಪಾಲನೆಯ ನಿರ್ದೇಶಕರಾಗಿ, ಕನಕದಾಸ ಅಧ್ಯಯನ ಪೀಠದ ಸಂಯೋಜಕರಾಗಿ, ದೇಶದ ಮೊಟ್ಟಮೊದಲ ಮಹಿಳಾ ವಸ್ತು ಸಂಗ್ರಹಾಲಯದ ಸ್ಥಾಪಕ ನಿರ್ದೇಶಕರಾಗಿ, ಮಹಿಳಾ ವಿಶ್ವವಿದ್ಯಾಲಯದ ಮೊದಲ ಕುಲಸಚಿವರಾಗಿ ಅನುಪಮ ಸೇವೆ ಸಲ್ಲಿಸಿದ್ದಾರೆ.

ಸಾಹಿತ್ಯದಲ್ಲೂ ಅಪಾರ ಕೃಷಿ ಮಾಡುತ್ತ ಡಾ. ಸುನಂದಮ್ಮನವರು ಲೇಬರ್ ವಾರ್ಡಿನಲ್ಲೊಂದು ದಿನ ಮತ್ತು ನೆತ್ತಿಸುಟ್ಟಕಾಲ ಎಂಬ ಎರಡು ಕವನ ಸಂಕಲನಗಳನ್ನು ರಚಿಸಿದ್ದಾರೆ. ಇವರ ಪರಿವರ್ತನೆ ಕಥೆಗೆ 2001 ರಲ್ಲಿ ಎಚ್.ಎಂ.ಟಿ. ತುಷಾರ ಕಥಾಪ್ರಶಸ್ತಿ ಲಭಿಸಿತ್ತು. 2005 ರಲ್ಲಿ ದ್ವಿತ್ವ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿದೆ. ಇವರ ಭರತಕಲ್ಪ ಕಾದಂಬರಿಯು ದ್ವಾರನಕುಂಟೆ ಪಾತಣ್ಣ ಪ್ರಶಸ್ತಿಗೆ ಪಾತ್ರವಾಗಿದೆ. ಅನೇಕ ಸಂಶೋಧನಾ ಪ್ರಬಂಧಗಳು, ಲೇಖನಗಳು, ವಿಮರ್ಶಾ ಲೇಖನಗಳು, ಸಂಪಾದಿತ ಕೃತಿಗಳು ಪ್ರಕಟವಾಗಿವೆ. ಸ್ತ್ರೀ ಸಂವೇದನೆಯುಳ್ಳ ಬರಹಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಕನಕಶ್ರೀ ಸೇವಾ ಪ್ರಶಸ್ತಿ ಮತ್ತು ಅಕ್ಕಮಹಾದೇವಿ ಪ್ರಶಸ್ತಿಗಳನ್ನು ಪಡೆದ ಡಾ. ಸುನಂದಮ್ಮನವರು 2025 ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಪ್ರಸ್ತುತ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿದ್ದು ಸಂಘವನ್ನು ಕ್ರಿಯಾಶೀಲತೆಯಿಂದ ಮುನ್ನಡೆಸುತ್ತಿದ್ದಾರೆ.

**ಡಾ॥ ಆರ್.ಕೆ. ಸರೋಜ,** ಉಪಾಧ್ಯಕ್ಷರು



ವೈದ್ಯೆ, ಶಿಕ್ಷಣತಜ್ಞೆ, ಸಾಹಿತಿ. ಮುಂಬೈ ಅಣುಶಕ್ತಿ ಕೇಂದ್ರದ ರೇಡಿಯೇಶನ್ ಸೇಫ್ಟಿ ಆಫೀಸರ್ ತರಬೇತಿ ಪಡೆದ ದಕ್ಷಿಣ ಭಾರತದ ಮೊದಲ ಮಹಿಳೆ. ವಿಕ್ಟೋರಿಯಾ ಆಸ್ಪತ್ರೆಯ ರೇಡಿಯೋ ಡಯಾಗ್ನೋಸಿಸ್ ಪ್ರೊಫೆಸರ್ ಹಾಗೂ ನ್ಯೂಕ್ಲಿಯರ್ ಮೆಡಿಸನ್ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ ಅನುಭವ. ಚಕ್ರ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ, ಇದರ ಮೂಲಕ ಅನೇಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಆರೋಗ್ಯ ರಕ್ಷಣೆಗೆ ಹಲವಾರು ದಾರಿ, ವೈದ್ಯ ಲೋಕದ ವಿನೋದ, ವೈದ್ಯ ಲೋಕದ ನಾರಿ ಚೇತನ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರು ಚಿಕ್ಕಬಳ್ಳಾಪುರದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿದ್ದರು. ಇವರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಸೇರಿದಂತೆ ಅನೇಕ ಗೌರವ, ಸಮ್ಮಾನಗಳು ದೊರೆತಿವೆ.

**ಸರ್ವಮಂಗಳ,** ಉಪಾಧ್ಯಕ್ಷರು



ಕರ್ನಾಟಕ ಜಾನಪದ ಪರಿಷತ್ತಿನ ನಾಡೋಜ ಎಚ್ ಎಲ್ ನಾಗೇಗೌಡ ದೃಶ್ಯ ಮತ್ತು ಶ್ರವ್ಯ ಭಂಡಾರದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದು, ಜಾನಪದ ನಿಘಂಟುತಜ್ಞೆಯಾಗಿ ಕನ್ನಡ ಜಾನಪದಕೋಶ, ಕನ್ನಡ ಜಾನಪದ ನಿಘಂಟು ಮತ್ತು ಪದಸಂಸ್ಕೃತಿ ಕೋಶಗಳ ಸಂಪಾದಕತ್ವದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಜಾನಪದ ಜಗತ್ತು, ಬಸವಪಥ, ಮಹಾಮನೆ, ಸಂಯುಕ್ತ ಕರ್ನಾಟಕ, ಮಯೂರ ಮುಂತಾದ ಪತ್ರಿಕೆಗಳಲ್ಲಿ ಕವಿತೆ, ಲೇಖನಗಳು ಪ್ರಕಟಗೊಂಡಿವೆ. ಕಾಗೆಕಾಗೆ ಕವ್ವಾ, ಬ್ರೂಸ್ಪತಿ ರಾಜನ ಬಂಗಾರದ ಕೋಳ್ಮರ, ರತಿಕಲ್ಯಾಣ, ಗಂಗೆಗೌರಿ ಮುಂತಾದ ರಂಗಕೃತಿಗಳು ಹಲವು ಪ್ರದರ್ಶನ ಕಂಡಿವೆ. “ಸಾವಿರ ಸೊಲ್ಲು” ಸಂಪಾದಿತ ಕೃತಿಗೆ ಕಲೇಸಂನ ಬ.ನ. ಸುಂದರರಾವ್ ಪ್ರಶಸ್ತಿ ದೊರೆತಿದೆ.

**ಸುಮಾ ಸತೀಶ್,** ಕಾರ್ಯದರ್ಶಿ



ಲೇಖಕಿ, ಸಂಘಟಕಿ, ನಿರೂಪಕಿ, ವಾಗ್ಮಿಯಾಗಿ ಗುರುತಿಸಿಕೊಂಡಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ. ಒಂದು ವರ್ಷ ಸಂಪಾದಕರಾಗಿ ಅಕಾಡೆಮಿಯ ವಾರ್ತಾಪತ್ರಿಕೆ ಹೊರ ತಂದಿದ್ದಾರೆ. ನಾಟಕ, ವಿಮರ್ಶೆ, ವೈಚಾರಿಕ ಲೇಖನ, ವ್ಯಕ್ತಿ ಚಿತ್ರಣ, ಆಧುನಿಕ ವಚನಗಳು ಪ್ರಕಾರಗಳಲ್ಲಿ ಕೃಷಿ ನಡೆಸಿದ್ದು, ಹಾದಿಯಲ್ಲಿನ ಮುಳ್ಳುಗಳು, ವಚನ ಸಿರಿ, ಅವನಿ, ಮನನ ಮಂಥನ, ನಾಗಮ್ಮ ಕೇಶವಮೂರ್ತಿ (ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಹಿಳಾ ಮುನ್ನಡೆ ಮಾಲಿಕೆಯಲ್ಲಿ) ಇತ್ಯಾದಿ ಕೃತಿಗಳು ಪ್ರಕಟವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ (ವಸುದೇವ ಭೂಪಾಲಂ ದತ್ತಿ), ಕನ್ನಡ ಕೌಸ್ತುಭ, ಅಕ್ಕಮಹಾದೇವಿ, ಆತ್ಮೂರಿ ಲಕ್ಷ್ಮೀನರಸಿಂಹ ಸೋಮಯಾಜುಲು ಪ್ರಶಸ್ತಿ, ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿಗಳು ಸಂದಿವೆ.

**ಡಾ. ಬಿ.ಟಿ. ಅನುರಾಧ,** ಸಹಕಾರ್ಯದರ್ಶಿ



ಡಾ. ಬಿ.ಟಿ. ಅನುರಾಧ ಕನ್ನಡ ಎಂ.ಎ.ಪದವೀಧರರಾಗಿದ್ದು "ವಿಶೇಷ ಕವಿ ಬೇಂದ್ರೆ" ಪತ್ರಿಕೆಯಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಡಾ. ಸಿದ್ಧಲಿಂಗಯ್ಯನವರ ಮಾರ್ಗದರ್ಶನದಲ್ಲಿ ಪಡೆದ ಅವರ ಪಿ.ಎಚ್.ಡಿ. ಪ್ರಬಂಧವು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಪ್ರಕಟವಾಗಿದೆ. ಜಯನಗರದ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ 32ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಹಳಗನ್ನಡದ ಓದು ಅವರ ಆಸಕ್ತಿ.

**ಡಾ. ಲಲಿತಾ ಕೆ. ಹೊಸಪ್ಯಾಟಿ,** ಖಜಾಂಚಿ



ಡಾ. ಲಲಿತಾ ಕೆ. ಹೊಸಪ್ಯಾಟಿ ಬಾಗಲಕೋಟೆ ಜಿಲ್ಲೆ ಹುನಗುಂದದವರು. ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. 34 ಕೃತಿಗಳನ್ನು ಹೊರತಂದಿದ್ದಾರೆ. ಆಕಾಶವಾಣಿ ಚಿಂತನಗಳು ಸಾಕಷ್ಟು ಪ್ರಸಾರವಾಗಿವೆ. ಸಂದ ಪ್ರಶಸ್ತಿಗಳು: ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಧಾರವಾಡದ ಗೌರವ ಪ್ರಶಸ್ತಿ, ಕಾವ್ಯಾನಂದ, ಡಿ.ಎಸ್ ಕರ್ಕಿ, ಸುವರ್ಣ ಕರ್ನಾಟಕ ಸಂಭ್ರಮ ಪುರಸ್ಕಾರ ಇತ್ಯಾದಿಗಳು. ಮಹಿಳಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದಾರೆ.

# ಕಾರ್ಯಕಾರಿ ಸಮಿತಿ ಸದಸ್ಯರು



**ಕೃಷ್ಣಾಬಾಯಿ ಹಾಗಲವಾಡಿ**ಯವರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯವರು. ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ 42ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಧರ್ಮಸಂಸ್ಥಾನ, ವೀರಮಾತೆ ಅಹಲ್ಯಾಬಾಯಿ ಹೋಳ್ಕರ್, ದಾನ ಚಿಂತಾಮಣಿ ಅತ್ತಿಮಬ್ಬೆ, ಕನಕ ಕಾವ್ಯಾಮೃತ ಇತ್ಯಾದಿ ಇವರ ಕೃತಿಗಳು. ಚಿಕ್ಕನಾಯಕನಹಳ್ಳಿ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಪುರಸ್ಕೃತರಾಗಿದ್ದಾರೆ. ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.



**ಡಾ. ಮುಕ್ತಾ ಬಿ. ಕಾಗಲಿ** ಅವರು ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಡಿ.ಲಿಟ್ ಪದವೀಧರರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ರಾಜ್ಯ ಮುಖ್ಯ ಕಚೇರಿ ಆಯುಕ್ತೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಜ್ಞಾನ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರಗಳಲ್ಲಿ ರಾಷ್ಟ್ರಮಟ್ಟದ ಯೋಜನೆಗಳನ್ನು ಸಂಯೋಜಿಸಿದ್ದಾರೆ. ವಿವಿಧ ಶೈಕ್ಷಣಿಕ ಉಪಕ್ರಮಗಳಲ್ಲಿ ಸಂಪಾದಕಿ, ಅನುವಾದಕಿ ಮತ್ತು ಲೇಖಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಅವರು ಎರಡು ಮಾಸಪತ್ರಿಕೆಗಳ ಸಂಪಾದಕಿಯಾಗಿದ್ದಾರೆ.



**ಡಾ. ಟಿ.ಟಿ. ಅನುಸೂಯ ಹೊಂಬಾಳೆ** ಮಂಡ್ಯ ಜಿಲ್ಲೆಯ ಮದ್ದೂರು ಮೂಲದವರಾದ ಇವರು ಮೈಸೂರು ವಿ.ವಿ.ಯಲ್ಲಿ ಚಿನ್ನದ ಪದಕದೊಂದಿಗೆ ಪದವಿ, ಹಂಪಿ ವಿ.ವಿ.ಯಿಂದ ಪಿಎಚ್.ಡಿ ಪದವಿ ಗಳಿಸಿದ್ದು, ಪ್ರಸ್ತುತ ಬೆಂಗಳೂರಿನ ಶ್ರೀ ಶಾರದಾ ಪ್ರ.ದ. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಲೇಖನಗಳನ್ನು ಪ್ರಕಟಿಸಿದ್ದು ಮಹಿಳೆ ಮತ್ತು ಆಧುನಿಕತೆ ಎಂಬ ಪುಸ್ತಕ ಬಿಡುಗಡೆಗೊಂಡಿದೆ. ಸಂಪನ್ಮೂಲ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಬೆಂಗಳೂರು ವಿ.ವಿ.ಯ ಸಿಂಡಿಕೇಟ್ ಸದಸ್ಯೆಯಾಗಿ, ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



**ಮಧುರಾ (ಅಲಕಾ) ಕರ್ಣಮ್:** ಮೂಲತಃ ಬೆಳಗಾವಿಯವರಾದ ಮಧುರಾ ಕರ್ಣಮ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕಥೆ, ಕವನ, ಪ್ರಬಂಧ, ಹಾಸ್ಯ ಮುಂತಾದ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದು 18 ಕೃತಿಗಳನ್ನು ರಚಿಸಿದ್ದಾರೆ. ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಸಾಹಿತ್ಯ ಸಖಿ ತ್ರೈಮಾಸಿಕದ ಉಪಸಂಪಾದಕರಾಗಿದ್ದಾರೆ.



**ರೇಣುಕಾ ಕೋಡಗುಂಟಿ (ಪೇರ್ಮಿ)** ಅವರು ರಾಯಚೂರು ಜಿಲ್ಲೆಯ ಮಸ್ಕಿ ಗ್ರಾಮದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕಥೆ, ಕವನ, ಜಾನಪದ, ಸಂಶೋಧನೆ ಹಾಗೂ ಮಕ್ಕಳ ಸಾಹಿತ್ಯ – ಈ ಎಲ್ಲಾ ವಿಭಾಗಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯ ಸೇವೆಗೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ.



**ಜಾಹಿದಾ ಶಿರೀನ್** ಬೆಂಗಳೂರಿನವರು. ವಕೀಲ ಪದವೀಧರರು. ವಿದ್ಯಾರ್ಥಿ ದೆಸೆಯಲ್ಲಿಯೇ ಸಾಮಾಜಿಕ ಚಳವಳಿಗೆ ಆಕರ್ಷಿತರಾಗಿ ವಿದ್ಯಾರ್ಥಿಗಳ, ಮಹಿಳೆಯರ ಹಾಗೂ ಪ್ರಗತಿಪರ ಪತ್ರಿಕೆಗಳಿಗೆ, ಪ್ರಕಾಶನಗಳಿಗೆ ಕೆಲಸ ಮಾಡಿದ್ದಾರೆ. ಸಣ್ಣ ಕಥೆಗಳು ಹಾಗೂ ಹಲವಾರು ಲೇಖನಗಳ ಅನುವಾದಗಳನ್ನು ಮಾಡಿದ್ದಾರೆ. ಎಂ.ಎನ್. ರಾಯ್ ಅವರ 'ದಿ ಹಿಸ್ಟಾರಿಕ್ ರೋಲ್ ಆಫ್ ಇಸ್ಲಾಂ– ಎ ಸ್ಟಡಿ ಇನ್ ಇಸ್ಲಾಮಿಕ್ ಕಲ್ಚರ್' ಕೃತಿಯನ್ನು ಅನುವಾದ ಮಾಡಿದ್ದು ಮುದ್ರಣದಲ್ಲಿದೆ.



**ಡಾ. ಮಮತಾ ಕೆ.ಎನ್**. ಕಡೂರಿನ ಕೋಡಿಹಳ್ಳಿಯವರು. ಪಿಎಚ್. ಡಿ ಪದವೀಧರೆ. ಲಿಂಗ ಸಮಾನತೆ, ಲಿಂಗಾಧಾರಿತ ಹಿಂಸಾಚಾರ, ಪರಿಹಾರ ಕುರಿತು ಅಧ್ಯಯನ ನಡೆಸುತ್ತಿದ್ದಾರೆ. 'ಬೇರು' ಸಂಸ್ಥೆ ಹಾಗೂ ಅದರ ಭಾಗವಾಗಿರುವ 'ಬೇರು ರಂಗಶಾಲೆ' ಮೂಲಕ ಮಕ್ಕಳ, ಯುವಜನರ ಮತ್ತು ಸಮುದಾಯದೊಂದಿಗೆ ನಾಟಕ, ಸಂವಾದ ಮತ್ತು ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ತಮ್ಮ 'ಕೌದಿ' ಪ್ರಕಾಶನದಿಂದ 30ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.



**ವಿ.ಎಂ. ಮಾನಸ ಚಂದ್ರಿಕಾ** ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರದವರು. ಸಮೂಹ ಮಾಧ್ಯಮಗಳು ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಶಿಕ್ಷಣ, ಹಂಪಿ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪಡೆದಿದ್ದು ಅನೇಕ ಟಿವಿ ಮಾಧ್ಯಮಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳಿಗಾಗಿ ಸಂಶೋಧನೆ ಮತ್ತು ಬರಹಗಾರರಾಗಿ ದುಡಿದ ಅನುಭವವಿದೆ. ಮಕ್ಕಳಿಗಾಗಿ ರಂಗಭೂಮಿ ಆಧಾರಿತ ಬೇಸಿಗೆ ಶಿಬಿರಗಳ ಆಯೋಜನೆ ಮಾಡುತ್ತಾರೆ.



**ಗೌರಮ್ಮ ಇ.** (ಸಿರಿಗೌರಿ) ಬೆಂಗಳೂರಿನವರು. ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರೆ. ವಿದ್ಯಾರ್ಥಿ ದೆಸೆಯಿಂದಲೆ ಚಳವಳಿಯ ಭಾಗವಾಗಿದ್ದು, ನಾಡು ನುಡಿಗಾಗಿ ಹೋರಾಟಗಳಲ್ಲಿ ಸಕ್ರಿಯೆ. ಮಹಿಳಾ ಹಕ್ಕುಗಳ ಜಾಗೃತಿ, ಜಾತಿ, ಲಿಂಗತ್ವ, ವರ್ಗ ಸಮಾನತೆಗಾಗಿ ಹಾಗೂ ಮಕ್ಕಳು, ಮಹಿಳೆಯರ ಮೇಲಿನ ಅತ್ಯಾಚಾರದ ವಿರುದ್ಧ ಹೋರಾಟ ನಡೆಸುತ್ತಾರೆ. ಮಹಿಳಾ ಮುನ್ನಡೆ ಎಂಬ ಪ್ರತಿಕೆಯ ಸಂಪಾದಕ ಮಂಡಳಿಯಲ್ಲಿದ್ದಾರೆ.



**ಡಾ. ಸೆಲ್ವಕುಮಾರಿ** ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕೆಲವು ಕೃತಿಗಳನ್ನು ತಮಿಳಿನಿಂದ ಕನ್ನಡಕ್ಕೆ ಅನುವಾದವನ್ನು ಮಾಡಿದ್ದಾರೆ. ಹತ್ತಾರು ಪ್ರಶಸ್ತಿ ಪುರಸ್ಕಾರಗಳು ಅವರ ಸಾಹಿತ್ಯ ಸೇವೆಗೆ ಸಂದಿವೆ.

# 4. ಕಲೇಸಂ ಉಪಸಮಿತಿಗಳು

**ಅ) ಬೈಲಾ ಕರಡು ತಿದ್ದುಪಡಿ ಸಮಿತಿ**

ಸಂಘದ ಕಾರ್ಯವೈಖರಿಯನ್ನು ಇನ್ನೂ ಉತ್ತಮಗೊಳಿಸುವುದಕ್ಕಾಗಿ ಮತ್ತು ಪ್ರಸ್ತುತ ಕಾಲದ ಅಗತ್ಯಗಳಿಗೆ ಸ್ಪಂದಿಸಲು ಬೈಲಾದಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಿದೆ. ಇದಕ್ಕಾಗಿ ಬೈಲಾ ತಿದ್ದುಪಡಿ ಸಮಿತಿಯೊಂದನ್ನು ರಚಿಸಲಾಗಿದೆ.

**ಅಧ್ಯಕ್ಷರು** – ಹೇಮಲತಾ ಮಹಿಷಿ

**ಸದಸ್ಯರು**

ಡಾ॥ ವಸುಂಧರಾ ಭೂಪತಿ

ಡಾ. ಸಬಿಹಾ ಭೂಮಿಗೌಡ

ಡಾ. ಎನ್. ಗಾಯತ್ರಿ

ಪ್ರತಿಭಾ ನಂದಕುಮಾರ್

ಎಂ. ಎನ್. ಸುಮನಾ

ಸದಸ್ಯ ಕಾರ್ಯದರ್ಶಿ – ಸುಮಾ ಸತೀಶ್

**ಆ) ವೆಬ್‌ಸೈಟ್ ಸಮಿತಿ**

ನೂತನವಾಗಿ ಅನಾವರಣಗೊಂಡ ಕಲೇಸಂ ವೆಬ್‌ಸೈಟ್‌ನ ಅಭಿವೃದ್ಧಿ ಹಾಗೂ ಸೂಕ್ತ ನಿರ್ವಹಣೆಗಾಗಿ ಉಪಸಮಿತಿಯೊಂದನ್ನು ರಚಿಸಲಾಗಿದೆ.

**ಮುಖ್ಯಸ್ಥರು** – ಜಯಲಕ್ಷ್ಮಿ ಪಾಟೀಲ್

**ಸದಸ್ಯರು** – ಸರ್ವಮಂಗಳ, ಮುಕ್ತಾ ಬಿ. ಕಾಗಲಿ, ಮಮತಾ

**ಸದಸ್ಯ ಕಾರ್ಯದರ್ಶಿ** – ಸುಮಾ ಸತೀಶ್

**ನಿರ್ವಹಣೆ** – ಸಿಸ್ಟ್ಲಾ ರಾಮು ಮತ್ತು ಹೇಮಾವತಿ

**ಇ) ಮಾಧ್ಯಮ ನಿರ್ವಹಣೆ ವಿಭಾಗ**

ಭಾರತಿ ಹೆಗಡೆ, ಸುಮಾ ಸತೀಶ್

# 5. ವಾರ್ಷಿಕ ವರದಿ
## (ಡಿಸೆಂಬರ್ 2025 ರಿಂದ ಜುಲೈ 2026 ರವರೆಗೆ)

* 14 ಡಿಸೆಂಬರ್ 2025 ರಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಶ್ರೀಮತಿ ನಿರ್ಮಲಾ ಎಲಿಗಾರ್ ಹಾಗೂ ಪ್ರೊ. ಆರ್. ಸುನಂದಮ್ಮ ಅವರು ಸ್ಪರ್ಧಿಸಿದ್ದರು. ಸುನಂದಮ್ಮ ಅವರು 471 ಮತಗಳನ್ನು ಪಡೆದು ವಿಜಯಿಯಾದರು.

* 15 ಡಿಸೆಂಬರ್ 2025ರಂದು ಕಲೇಸಂನ 11ನೆಯ ಅಧ್ಯಕ್ಷರಾಗಿ ಆರ್. ಸುನಂದಮ್ಮ ಅವರು ನಿಕಟಪೂರ್ವ ಅಧ್ಯಕ್ಷರಾದ ಡಾ. ಎಚ್. ಎಲ್. ಪುಷ್ಪ ಅವರಿಂದ ಅಧಿಕಾರ ಸ್ವೀಕರಿಸಿದರು.

* 18 ಡಿಸೆಂಬರ್ 2025ರಂದು ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಅವರು ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ರಚನೆ ಮಾಡಿದರು.

ಉಪಾಧ್ಯಕ್ಷರಾಗಿ ಡಾ॥ ಆರ್. ಕೆ. ಸರೋಜಾ ಹಾಗೂ ಸರ್ವಮಂಗಳಾ ಅವರನ್ನು, ಕಾರ್ಯದರ್ಶಿಯಾಗಿ ಸುಮಾ ಸತೀಶ್ ಹಾಗೂ ಸಹಕಾರ್ಯದರ್ಶಿಯಾಗಿ ಡಾ. ಅನುರಾಧ ಬಿ.ಟಿ., ಖಜಾಂಚಿಯಾಗಿ ಡಾ. ಲಲಿತಾ ಕೆ. ಹೊಸಪ್ಯಾಟಿ ಅವರನ್ನು ನೇಮಕ ಮಾಡಲಾಯಿತು.

ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೃಷ್ಣಾಬಾಯಿ ಹಾಗಲವಾಡಿ, ಡಾ. ಮುಕ್ತಾ ಬಿ. ಕಾಗಲಿ, ಡಾ. ಟಿ. ಟಿ. ಅನುಸೂಯಾ ಹೊಂಬಾಳೆ, ಮಧುರಾ ಕರ್ಣಂ, ಡಾ. ಮಮತಾ ಕೆ.ಎನ್., ರೇಣುಕಾ ಕೋಡಗುಂಟಿ, ಸಿರಿಗೌರಿ, ಜ಼ಾಹಿದಾ ಶಿರೀನ್, ಮಾನಸ ಚಂದ್ರಿಕಾ ವಿ. ಎಂ., ಮತ್ತು ಜ್ಯೋತಿ ಎ. ಅವರನ್ನು ಆಯ್ಕೆ ಮಾಡಲಾಯಿತು.

* 2 ಫೆಬ್ರವರಿ 2026, ಸೋಮವಾರ ಕಲೇಸಂ ಜೊತೆಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಅಗಲಿದ ಲೇಖಕಿಯರಾದ ಆಶಾ ರಘು ಹಾಗೂ ಕುಲಶೇಖರಿ ಅವರ ಸ್ಮರಣಾರ್ಥ ಶ್ರದ್ಧಾಂಜಲಿ ಸಭೆಯನ್ನು ವಿಜಯನಗರದ ಹಿರಿಯ ನಾಗರಿಕರ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಅಗಲಿದ ಲೇಖಕಿಯರನ್ನು ಕುರಿತು ಡಾ॥ ವಸುಂಧರಾ ಭೂಪತಿ, ಸುನಂದಾ ರು. ಬಸಪ್ಪ, ನೇಮಿಚಂದ್ರ, ಕಲೇಸಂ ಅಧ್ಯಕ್ಷರಾದ ಆರ್. ಸುನಂದಮ್ಮ, ಉಪಾಸನಾ, ದೀಪದಮಲ್ಲಿ, ಸರಿತಾ, ಚಿನ್ಮಯಿ ಮತ್ತಿತರರು ಮಾತನಾಡಿದರು.

* 3 ಫೆಬ್ರವರಿ 2026, ಮಂಗಳವಾರ 17ನೆಯ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಸಿದ್ಧಲಿಂಗಯ್ಯ ನಿರ್ದೇಶನದ ಹೇಮಾವತಿ ಚಿತ್ರವನ್ನು ಕುರಿತು ಕಲೇಸಂ ಸಹಯೋಗದೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂವಾದದಲ್ಲಿ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ, ಲೇಖಕಿ ಸಂಧ್ಯಾರಾಣಿ, ಹಿರಿಯ ಪತ್ರಕರ್ತ ಚ. ಹ. ರಘುನಾಥ್, ಮಾನಸ ಚಂದ್ರಿಕಾ ಇದ್ದರು. ಇಡೀ ಕಾರ್ಯಕ್ರಮ ಸಂಯೋಜಿಸಿ, ಸಂವಾದ ನಡೆಸಿಕೊಟ್ಟವರು ಹಿರಿಯ ಪತ್ರಕರ್ತೆ ಹಾಗೂ ಕಲೇಸಂನ ನಿಕಟಪೂರ್ವ ಕಾರ್ಯದರ್ಶಿ ಭಾರತಿ ಹೆಗಡೆ ಅವರು.

* 11 ಫೆಬ್ರವರಿ 2026ರಂದು ಬೆಂಗಳೂರಿನ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಉನ್ನತ ಶಿಕ್ಷಣ ಅಕಾಡೆಮಿಯ ಭಾಷಾ ವಿಭಾಗವು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದೊಂದಿಗೆ ಭಾಷೆ ಹಾಗೂ ಅನುವಾದ: ಆಯಾಮ ಮತ್ತು ಸವಾಲುಗಳು ವಿಷಯ ಕುರಿತು ಒಂದು ದಿನದ ರಾಷ್ಟ್ರಮಟ್ಟದ ಬಹುಭಾಷಾ ಸಮ್ಮೇಳನ ಆಯೋಜಿಸಿತ್ತು. ಖ್ಯಾತ ದ್ವಿಭಾಷಾ ಕವಯಿತ್ರಿ ಪ್ರತಿಭಾ ನಂದಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಕಲೇಸಂ ಪ್ರತಿನಿಧಿಯಾಗಿ ಡಾ. ಮುಕ್ತಾ ಬಿ. ಕಾಗಲಿ, ಎಂಎಲ್ಎ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಲಕ್ಷ್ಮಿ ವಿ. ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಪದ್ಮಜಾ ಪಿ.ವಿ. ಅಧ್ಯಕ್ಷತೆ ವಹಿಸಿದ್ದರು. ಗೋಷ್ಠಿಗಳಲ್ಲಿ ಕನ್ನಡ ಭಾಷೆಯ ಪರವಾಗಿ ಡಾ. ಪದ್ಮಿನಿ ನಾಗರಾಜು, ಹಿಂದಿ ವಿಭಾಗದಲ್ಲಿ ಡಾ. ನಾರಾಯಣ ಸಮೀರ್, ಇಂಗ್ಲಿಷ್ ವಿಭಾಗದಲ್ಲಿ ಡಾ. ಕಾತ್ಯಾಯನಿ ಎಸ್., ಸಂಸ್ಕೃತ ವಿಭಾಗದಲ್ಲಿ ಡಾ. ನಾಗರತ್ನ ಹೆಗಡೆ ಅವರು ಪ್ರಬಂಧ ಮಂಡಿಸಿದರು.

* 28 ಫೆಬ್ರವರಿ 2026 ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದೊಂದಿಗೆ ಜಯನಗರದ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ 12ನೆಯ ಶತಮಾನದ ವಚನಕಾರ್ತಿಯರ ಕುರಿತು ಒಂದು ದಿನದ ಕಮ್ಮಟ ಏರ್ಪಡಿಸಲಾಗಿತ್ತು. ವಿವಿಧ ಜಿಲ್ಲೆಗಳಿಂದ 40ಕ್ಕೂ ಹೆಚ್ಚು ಜನ ಲೇಖಕಿಯರು ನೋಂದಣಿ ಮಾಡಿಕೊಂಡಿದ್ದರು. ಡಾ. ಎಂ. ಉಷಾ ಆಶಯ ನುಡಿಗಳನ್ನಾಡಿದರು. ಡಾ. ಆರ್. ಸುನಂದಮ್ಮ, ಸುನಂದಾ ರು. ಬಸಪ್ಪ ಹಾಗೂ ಇಂದಿರಾ ಶಿವಣ್ಣ ಅವರು ಮೂರು ಗೋಷ್ಠಿಗಳಲ್ಲಿ ಉಪನ್ಯಾಸ ನೀಡಿದರು. ಸಮಾರೋಪ ಸಮಾರಂಭದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಡಾ. ಆರ್. ಪೂರ್ಣಿಮಾ, ಕಲೇಸಂ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಮಾತನಾಡಿದರು. ಕಾರ್ಯಕ್ರಮ ಸಂಯೋಜಕರಾದ ಮುಕ್ತಾ ಬಿ. ಕಾಗಲಿ, ಕಾರ್ಯದರ್ಶಿ ಸುಮಾಸತೀಶ್ ಉಪಸ್ಥಿತರಿದ್ದರು.

* ಮಾರ್ಚ್ 13 ಹಾಗೂ 14 ರಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನಕ ಅಧ್ಯಯನ ಪೀಠದ ಸಭಾಂಗಣದಲ್ಲಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು, ಕಲೇಸಂ, ಬೆಂಗಳೂರು ಹಾಗೂ ಧಾರವಾಡ ವಿವಿಯ ಕನಕ ಅಧ್ಯಯನ ಪೀಠದ ಸಹಯೋಗದಲ್ಲಿ ಎರಡು ದಿನಗಳ 'ಸಾಧಕಿ' ಸಮಾವೇಶ ಆಯೋಜಿಸಲಾಗಿತ್ತು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಲೇಖಕಿಯರು ಹಾಗೂ ವಿದ್ಯಾರ್ಥಿನಿಯರು ಆಗಮಿಸಿದ್ದರು.

ಸಂತಕವಿ ಕನಕದಾಸ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕಾ. ತ. ಚಿಕ್ಕಣ್ಣ, ಕಲೇಸಂನ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎ. ಎಂ. ಖಾನ್, ಪ್ರೊ. ಮಾಲತಿ ಪಟ್ಟಣಶೆಟ್ಟಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ವಚನಕಾರ್ತಿಯರು, ಕೀರ್ತನಕಾರ್ತಿಯರು ಹಾಗೂ ತತ್ವಪದಕಾರ್ತಿಯರ ಕುರಿತಾದ ಎರಡು ದಿನದ ಗೋಷ್ಠಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಸಬಿಹಾ ಭೂಮಿಗೌಡ, ಡಾ. ಟಿ. ಗಾಯಿತ್ರಮ್ಮ, ಡಾ. ಕಾತ್ಯಾಯಿನಿ ಕುಂಜಿಬೆಟ್ಟು, ಡಾ. ಅನಸೂಯಾ ಕಾಂಬಳೆ, ಡಾ. ಸಬಿತಾ ಬನ್ನಾಡಿ, ಪ್ರೊ. ಎನ್. ಆರ್. ಲಲಿತಾಂಬ, ಪ್ರೊ. ಸೆಲ್ವಕುಮಾರಿ, ದು. ಸರಸ್ವತಿ ಮುಂತಾದವರು ವಿಚಾರ ಮಂಡಿಸಿದರು.

* 9 ಏಪ್ರಿಲ್ 2026ರಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ಕರ್ನಾಟಕ ಲೇಖಕಿಯರ ಸಂಘದ 24 ಮತ್ತು 25ನೆಯ ಸಾಲಿನ ವಾರ್ಷಿಕ ದತ್ತಿ ಪ್ರಶಸ್ತಿ ಪ್ರದಾನ, ನಳಿನಿಮೂರ್ತಿ ದತ್ತಿ ಪ್ರಶಸ್ತಿ ಪ್ರದಾನ ಹಾಗೂ ಕಲೇಸಂ ವೆಬ್‌ಸೈಟ್ ಬಿಡುಗಡೆ ಕಾರ್ಯಕ್ರಮ ಆಯೋಜಿತವಾಗಿತ್ತು. ಕಾರ್ಯಕ್ರಮವನ್ನು ಡಾ. ಸಬಿಹಾ ಭೂಮಿ ಗೌಡ ಉದ್ಘಾಟಿಸಿದರು. ವೆಬ್‌ಸೈಟನ್ನು ಡಾ. ಎನ್. ಗಾಯಿತ್ರಿ ಆರಂಭ ಮಾಡಿದರು. ಪ್ರೊ. ಎಸ್. ಜಿ. ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಜಿ.ಎನ್. ಮೋಹನ್ ಮುಖ್ಯ ಅತಿಥಿಯಾಗಿದ್ದರು. ಡಾ. ಆರ್. ಸುನಂದಮ್ಮ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಡಾ॥ ಆರ್. ಕೆ. ಸರೋಜಾ ಹಾಗೂ ಸರ್ವಮಂಗಳಾ, ಕಾರ್ಯದರ್ಶಿ ಸುಮಾ ಸತೀಶ್ ಉಪಸ್ಥಿತರಿದ್ದರು. ಒಟ್ಟು 50 ಜನ ಲೇಖಕಿಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

* ಕರ್ನಾಟಕ ಲೇಖಕಿಯರ ಸಂಘ ಮತ್ತು ಸಮತಾ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಮೈಸೂರಿನಲ್ಲಿ ದಿನಾಂಕ 31/05/2026 ಮತ್ತು 1/06/2026 ರಂದು, ಎರಡು ದಿನಗಳ ಕಾಲ ಕಾವ್ಯಕಮ್ಮಟ ಆಯೋಜಿಸಲಾಗಿತ್ತು.

ಈ ಕಮ್ಮಟದ ನಿರ್ದೇಶಕರಾಗಿ ಹಿರಿಯ ಕವಯಿತ್ರಿ ಪ್ರತಿಭಾ ನಂದಕುಮಾರ್‌ರವರು ಪೂರ್ಣ ಜವಾಬ್ದಾರಿ ಹೊತ್ತು ಕಮ್ಮಟವನ್ನು ಯಶಸ್ವಿಯಾಗಿ ನಿರೂಪಿಸಿದರು. ಅವರೊಂದಿಗೆ ಕವಯಿತ್ರಿ ನಂದಿನಿ ಹೆದ್ದುರ್ಗ ಅವರು ವಿಶೇಷ ಆಹ್ವಾನಿತರಾಗಿ ಜೊತೆಗೂಡಿ ಕಮ್ಮಟದ ನಿರ್ವಹಣೆಯನ್ನು ಚೆಂದಗೊಳಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಐವತ್ತಕ್ಕೂ ಹೆಚ್ಚು ಜನ ಕಾವ್ಯ ಕಮ್ಮಟಕ್ಕೆ ನೋಂದಾಯಿಸಿಕೊಂಡಿದ್ದರು. ಎರಡು ದಿನಗಳ ಕಮ್ಮಟದಲ್ಲಿ ತಮ್ಮ ಅಭಿವ್ಯಕ್ತಿಗೆ ಹೊಸ ಹೊಳಹುಗಳನ್ನು ಪಡೆದರು.

ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಡಾ. ಸಬಿಹಾ ಭೂಮಿಗೌಡ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ, ಎರಡೂ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಕರ್ನಾಟಕ ಲೇಖಕಿಯರ ಸಂಘ, ಮಂಡ್ಯ ಜಿಲ್ಲಾ ಶಾಖೆಯು ಜೂನ್ 27 ಮತ್ತು 28ರಂದು ಮೊದಲ ಜಿಲ್ಲಾ ಲೇಖಕಿಯರ ಸಮ್ಮೇಳನ ಆಯೋಜಿಸಿತ್ತು. ನಿವೃತ್ತ ಐ.ಎ.ಎಸ್. ಅಧಿಕಾರಿ ಡಾ. ಟಿ.ಸಿ. ಪೂರ್ಣಿಮಾ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಡಾ. ಪದ್ಮಾ ಶೇಖರ್ ಉದ್ಘಾಟಿಸಿದರು, ಡಾ. ಆರ್. ಸುನಂದಮ್ಮ ಆಶಯ ನುಡಿಗಳನ್ನಾಡಿದರು.

ಮೀರಾ ಶಿವಲಿಂಗಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಧೀಮಂತೆ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಎರಡೂ ದಿನ ವಿವಿಧ ಗೋಷ್ಠಿಗಳು ಹಾಗೂ ಕವಿಗೋಷ್ಠಿ, ನಾಟಕ ಆಯೋಜಿಸಲಾಗಿತ್ತು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಲೇಖಕಿಯರನ್ನು ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಗೋಷ್ಠಿಗಳಲ್ಲಿ ಅವಕಾಶ ನೀಡಲಾಗಿತ್ತು. ಅದ್ದೂರಿ ಸಮ್ಮೇಳನವನ್ನು ಆಯೋಜಿಸಿ, ಯಶಸ್ವಿಯಾಗಿಸಿದ ಮಂಡ್ಯ ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷರಾದ ಮೀರಾ ಶಿವಲಿಂಗಯ್ಯ ಅವರನ್ನು ಕಲೇಸಂ ಹಾರ್ದಿಕವಾಗಿ ಅಭಿನಂದಿಸುತ್ತದೆ.

* ಜುಲೈ 11 ರಂದು ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಡಾ॥ ವಸುಂಧರಾ ಭೂಪತಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾವ್ಯ ವಿಭಾಗದಲ್ಲಿ ಮಾಧವಿ ಭಂಡಾರಿ ಕೆರೆಕೋಣ, ಗದ್ಯ ವಿಭಾಗದಲ್ಲಿ ಶ್ರೀಮತಿ ಬಿ.ಟಿ.ಜಾಹ್ನವಿ, ಸಂಕೀರ್ಣ ವಿಭಾಗದಲ್ಲಿ ಪ್ರೊ.ವಿಜಯಾ ಬಿ.ಕೋರಿಶೆಟ್ಟಿ (ಶಿಕ್ಷಣ ಕ್ಷೇತ್ರ) ಅವರ ಸಾಧನೆಗಳಿಗಾಗಿ ಪ್ರಶಸ್ತಿ ನೀಡಲಾಯಿತು. ಪ್ರಶಸ್ತಿ ಪ್ರದಾನವನ್ನು ಮಾಜಿ ಸಚಿವರಾದ ಶ್ರೀಮತಿ ರಾಣಿ ಸತೀಶ್ ರವರು ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಆರ್.ಸುನಂದಮ್ಮ ವಹಿಸಿದ್ದರು. ಈ ಸಂದರ್ಭದಲ್ಲಿ ಬಳಿಗಾರ್ ಕುಟುಂಬದ ಕುಡಿ ಡಾ॥ ಮೇಘಾ ಸಿದ್ಧಾರ್ಥ್ ಉಪಸ್ಥಿತರಿದ್ದರು.

ಇದಿಷ್ಟು ಕಾರ್ಯಕ್ರಮಗಳು ಹೊಸ ತಂಡದ ಏಳು ತಿಂಗಳ ಅವಧಿಯಲ್ಲಿ ಯಶಸ್ವಿಯಾಗಿ ನಡೆದಿವೆ. ಮುಂದಿನ ದಿನಗಳಲ್ಲಿ ತಿಂಗಳಿಗೆ ಒಂದು ಕಾರ್ಯಕ್ರಮದಂತೆ ಯೋಜನೆ ರೂಪುಗೊಂಡಿದೆ.

* ಆಗಸ್ಟ್‌ನಲ್ಲಿ 12 ಮತ್ತು 13ರಂದು ಎಚ್. ವಿ. ಸಾವಿತ್ರಮ್ಮ, ಅನುಪಮಾ ನಿರಂಜನ ಹಾಗೂ ಕಮಲಾ ಹಂಪನಾ ಅವರನ್ನು ಕುರಿತಂತೆ ಎರಡು ದಿನಗಳ ವಿಚಾರ ಸಂಕಿರಣ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ.

* ಸೆಪ್ಟೆಂಬರ್‌ನಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಹಯೋಗದೊಂದಿಗೆ ಶ್ರೀಮತಿ ನಳಿನಿಮೂರ್ತಿ ದತ್ತಿಯ ಭಾಗವಾಗಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಎರಡು ದಿನಗಳ ಕಮ್ಮಟ ಆಯೋಜಿಸಲಾಗಿದೆ.

* ಅಕ್ಟೋಬರ್‌ನಲ್ಲಿ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕಮ್ಮಟವನ್ನು ರೂಪಿಸಲಾಗಿದೆ.

* ನವೆಂಬರ್‌ನಲ್ಲಿ ಇಂದಿರಾ ರತ್ನ ಪ್ರಶಸ್ತಿ ಪ್ರದಾನ ಹಾಗೂ ಕವಿಗೋಷ್ಠಿ ಕಾರ್ಯಕ್ರಮವಿರುತ್ತದೆ. ಕಲೇಸಂನ ಪ್ರತಿಷ್ಠಿತ ಕಾರ್ಯಕ್ರಮ 'ಲೇಖಲೋಕ' ನಡೆಸಲು ಯೋಜನೆ ರೂಪಿಸಲಾಗಿದೆ.

* ಡಿಸೆಂಬರ್‌ನಲ್ಲಿ ಎಚ್. ಎಸ್. ಪಾರ್ವತಿ ದತ್ತಿ ಪ್ರಶಸ್ತಿ ಕಾರ್ಯಕ್ರಮ ರೂಪಿಸಲಾಗಿದೆ.

**ಸುಮಾ ಸತೀಶ್**

**ಕಾರ್ಯದರ್ಶಿ, ಕಲೇಸಂ**

# 6. ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಿನಿಸಂವಾದ



ಮಹಿಳಾ ಪ್ರಧಾನ ಚಿತ್ರಗಳೆಲ್ಲವೂ ಮಹಿಳಾ ಪರ ಚಿತ್ರಗಳಾಗಿರುವುದಿಲ್ಲ ಎಂದು 17ನೆಯ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ ಸಂವಾದದಲ್ಲಿ ಲೇಖಕಿ ಸಂಧ್ಯಾರಾಣಿ ಅಭಿಪ್ರಾಯಪಟ್ಟರು. ಮಹಿಳಾ ಪ್ರಧಾನ ಚಿತ್ರಗಳಿಗೂ, ಮಹಿಳಾ ಪರ ಚಿತ್ರಗಳಿಗೂ ವ್ಯತ್ಯಾಸವಿದೆ. ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಮಹಿಳಾ ಪರ ಚಿತ್ರಗಳಿಗಿಂತ, ಮಹಿಳಾ ಪ್ರಧಾನ ಚಿತ್ರಗಳಾಗಿದ್ದವು ಎಂದು ಹೇಳಿದರು.

3 ಫೆಬ್ರವರಿ 2026, ಮಂಗಳವಾರ 17ನೆಯ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ನಡೆದ, ಕರ್ನಾಟಕ ಲೇಖಕಿಯರ ಸಂಘ ಆಯೋಜಿಸಿದ್ದ ಸಿದ್ಧಲಿಂಗಯ್ಯ ನಿರ್ದೇಶನದ 'ಹೇಮಾವತಿ' ಚಿತ್ರದ ಕುರಿತ ಸಂವಾದದಲ್ಲಿ ಮಾತನಾಡಿದ ಅವರು, ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಮಹಿಳಾ ಪ್ರಧಾನ ಚಿತ್ರಗಳಾಗಿದ್ದವೇ ಹೊರತು, ಮಹಿಳಾ ಪರ ಚಿತ್ರಗಳಾಗಿರಲಿಲ್ಲ. ಅವರ ಚಿತ್ರಗಳ ಮಹಿಳಾ ಪಾತ್ರಗಳು ಗಂಡು ಬಯಸುವ ಪಾತ್ರಗಳಾಗಿದ್ದವು. ಚಿತ್ರದ ನಾಯಕಿಯು 'ಈ ಶತಮಾನದ ಮಾದರಿ ಹೆಣ್ಣು ' ಎಂದು ಹಾಡುತ್ತಾ, ಹಾಡಿನ ಕೊನೆಯಲ್ಲಿ ತನ್ನ ಪರ್ಸ್ ಕಳೆದುಕೊಳ್ಳುತ್ತಾಳೆ. ಅದನ್ನು ಹುಡುಕಿಕೊಂಡು ತರುವುದು ಗಂಡಸರು. ಪುಟ್ಟಣ್ಣನವರು ತಮ್ಮ ಎಲ್ಲಾ ಚಿತ್ರಗಳಲ್ಲಿ ಮಹಿಳೆ ಸನಾತನ ಸಂಸ್ಕೃತಿ ಹೇಳಿದ ರೀತಿ ಇದ್ದರೆ ಜಯ ಎಂದು ಪ್ರತಿಪಾದಿಸಿದ್ದಾರೆ. ಹಾಗಾಗಿ ಮಹಿಳಾ ಪ್ರಧಾನ ಚಿತ್ರಗಳೆಲ್ಲಾ ಮಹಿಳಾ ಪರ ಚಿತ್ರಗಳಾಗಿರುವುದಿಲ್ಲ ಎಂದು ಹೇಳಿದರು.

ಈ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಹಿರಿಯ ಪತ್ರಕರ್ತ ಚ.ಹ. ರಘುನಾಥ, ಸಿದ್ಧಲಿಂಗಯ್ಯನವರ ಚಿತ್ರಗಳಲ್ಲೇ ವಿಭಿನ್ನವಾದ ಚಿತ್ರವೆಂದರೆ ಅದು 'ಹೇಮಾವತಿ'. ಈ ಚಿತ್ರ ಮಾಡುವ ಮೊದಲು ಅವರು ಅಷ್ಟರಲ್ಲಾಗಲೇ 'ಬಂಗಾರದ ಮನುಷ್ಯ' ಮತ್ತು 'ಭೂತಯ್ಯನ ಮಗ ಅಯ್ಯು' ಎಂಬ ಎರಡು ಕಲಾಕೃತಿಗಳನ್ನು ನೀಡಿದ್ದರು. ಆ ಚಿತ್ರಗಳ ನಂತರ 'ಹೇಮಾವತಿ' ಮೂಲಕ ಹೊಸ ಸಾಹಸ ಮಾಡುವುದರ ಜೊತೆಗೆ ಹೊಸ ಸವಾಲು ಸ್ವೀಕರಿಸಿದರು. ಈ ಚಿತ್ರದಲ್ಲಿ ರಾಮಾಯಣವನ್ನು ಅವರು ನೇರವಾಗಿ ತರದಿದ್ದರೂ, ಅದರ ಛಾಯೆ ಇತ್ತು. ಇದು ಯಾವುದೋ ಒಂದು ಊರಿನ ಕಥೆಯಾಗದೆ, ದೇಶದ ಯಾವುದೇ ಮೂಲೆಗೆ ಬೇಕಾದರೂ ಸಲ್ಲುವಂತಹ ಕಥೆಯಾಗಿತ್ತು. ಚಿತ್ರದ ಕಥೆ ಸ್ವಾತಂತ್ರ್ಯಪೂರ್ವದ್ದಾಗಿದ್ದರೂ, ಈಗಲೂ ಸಲ್ಲುವಂತಿದೆ. ರಾಮಾಯಣದಲ್ಲಿ ಸೀತೆ ಅಗ್ನಿಪರೀಕ್ಷೆ ಎದುರಿಸಿದರೆ, ಇಲ್ಲಿ ಹೇಮಾವತಿ ಮತ್ತು ಚೆನ್ನಿ ಎಂಬ ಎರಡು ಪಾತ್ರಗಳು ಬೇರೆ ಬೇರೆಯದೇ ರೀತಿಯಲ್ಲಿ ಅಗ್ನಿದಿವ್ಯಕ್ಕೆ ಒಳಗಾಗುತ್ತಾರೆ. ಈ ಚಿತ್ರ ಈಗ ತಯಾರಾಗಿದ್ದರೆ ಬಿಡುಗಡೆ ಕಷ್ಟವಾಗಿರುತ್ತಿತ್ತು. ಸಿದ್ಧಲಿಂಗಯ್ಯನವರು ಇನ್ನೊಂದು ಸಿನಿಮಾ ಮಾಡುವುದೂ ಕಷ್ಟವಾಗಿರುತ್ತಿತ್ತು. ಸೆನ್ಸಾರ್ ಸೇರಿದಂತೆ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಿತ್ತು ಎಂದು ಹೇಳಿದರು.

ಒಂದು ಕಾಲದಲ್ಲಿ ಸಿನಿಮಾಗಳಲ್ಲಿ ಹೆಣ್ಣೆಂದರೆ ಬರೀ ಸೌಂದರ್ಯಕ್ಕೆ ಮಾತ್ರ ಸೀಮಿತವಾಗಿತ್ತು ಎಂದು ಲೇಖಕಿಯರ ಸಂಘದ ಅಧ್ಯಕ್ಷರಾದ ಸುನಂದಮ್ಮ, ಮಹಿಳೆಗೆ ಅದೆಷ್ಟೇ ಪ್ರತಿಭೆ, ಶಿಕ್ಷಣ, ಕ್ರಿಯೇಟಿವಿಟಿ ಇದ್ದರೂ ಮುಖ್ಯವಲ್ಲ, ಆಕೆ ಸೌಂದರ್ಯಕ್ಕೆ ಮಾತ್ರ ಸೀಮಿತ ಎನ್ನುವಂತಹ ಪರಿಸ್ಥಿತಿ ಇತ್ತು. ಈಗ ಪರಿಸ್ಥಿತಿ ಸ್ವಲ್ಪ ಬದಲಾಗುತ್ತಿದೆ ಎಂದು ಹೇಳಿದರು.

ಪತ್ರಕರ್ತೆ ಮಾನಸ ಚಂದ್ರಿಕಾ ಮಾತನಾಡಿ, ಕಿರುತೆರೆಯಲ್ಲಿ ಸಾಕಷ್ಟು ಮಹಿಳಾ ಪ್ರಧಾನ ಧಾರವಾಹಿಗಳು ಬರುತ್ತಿವೆ. ಆದರೆ ಈ ಧಾರವಾಹಿಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದೇ ಹೆಣ್ಣು. ಶೋಷಣೆ ವಿರುದ್ಧ ಧ್ವನಿ ಎತ್ತಿದರೆ ಅವರನ್ನು ಬೇರೆಯದೇ ರೀತಿಯಲ್ಲಿ ನೋಡುತ್ತಾರೆ. ಗಂಡಸರ ಎದುರು ನಿಂತು ಮಾತಾಡಿದರೆ, ಅವರಿಗೆ ಗಂಡುಬೀರಿ ಎಂಬ ಹಣೆಪಟ್ಟಿ ಬೀಳುತ್ತದೆ. ಆಕೆ ಮೊದಲು ತನ್ನ ಕುಟುಂಬವನ್ನು ಜಯಿಸಬೇಕು, ನಂತರ ಸಮಾಜವನ್ನು ಜಯಿಸಿಬೇಕು ಎಂದರು.

ಈ ಸಂವಾದವನ್ನು ಹಿರಿಯ ಪತ್ರಕರ್ತೆ ಭಾರತಿ ಹೆಗಡೆ ನಡೆಸಿಕೊಟ್ಟರು.

# 7. 'ಭಾಷೆ ಹಾಗೂ ಅನುವಾದ: ಆಯಾಮ ಮತ್ತು ಸವಾಲುಗಳು' ಒಂದು ದಿನದ ರಾಷ್ಟ್ರಮಟ್ಟದ ಬಹುಭಾಷಾ ಸಮ್ಮೇಳನ





11 ಫೆಬ್ರವರಿ 2026ರಂದು ಬೆಂಗಳೂರಿನ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ (MLA) ಉನ್ನತ ಶಿಕ್ಷಣ ಅಕಾಡೆಮಿಯ ಭಾಷಾ ವಿಭಾಗವು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದೊಂದಿಗೆ "ಭಾಷೆ ಹಾಗೂ ಅನುವಾದ: ಆಯಾಮ ಮತ್ತು ಸವಾಲುಗಳು" ಎಂಬ ವಿಷಯದ ಕುರಿತು ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರಮಟ್ಟದ ಬಹುಭಾಷಾ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಮ್ಮೇಳನವು ಸಂಸ್ಥೆಯ ರುಕ್ಕಮ್ಮ ರಾಘವಾಚಾರ್ ಸಭಾಂಗಣದಲ್ಲಿ ಬೆಳಗ್ಗೆ ವಿದ್ಯುಕ್ತವಾಗಿ ಚಾಲನೆಗೊಂಡಿತು.

ಈ ಸಮಾರಂಭದಲ್ಲಿ ಖ್ಯಾತ ದ್ವಿಭಾಷಾ ಕವಯಿತ್ರಿ, ಪತ್ರಕರ್ತೆ ಹಾಗೂ ಅನುವಾದಕಿಯಾದ ಶ್ರೀಮತಿ ಪ್ರತಿಭಾ ನಂದಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅತಿಥಿ ಅಭ್ಯಾಗತರಾಗಿ ಕರ್ನಾಟಕ ಲೇಖಕಿಯರ ಸಂಘದ ಪ್ರತಿನಿಧಿ ಡಾ. ಮುಕ್ತಾ ಬಿ. ಕಾಗಲಿ ಹಾಗೂ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿಗಳಾದ ಡಾ. ಲಕ್ಷ್ಮಿ ವಿ. ಅವರು ಪಾಲ್ಗೊಂಡಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಪದ್ಮಜಾ ಪಿ. ವಿ. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾದ ಪ್ರತಿಭಾ ನಂದಕುಮಾರ್ ಅವರು ಭಾಷೆ ಮತ್ತು ಅನುವಾದ ಕ್ಷೇತ್ರಕ್ಕಿರುವ ಅಗಾಧ ಮಹತ್ವ ಹಾಗೂ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಸ್ಥಳೀಯ ಭಾಷೆಗಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದರು.

ಸಮ್ಮೇಳನದ ಭಾಗವಾಗಿ ನಡೆದ "ಭಾಷೆ ಹಾಗೂ ಅನುವಾದ" ಕುರಿತಾದ ಸಂವಾದ ಗೋಷ್ಠಿಯಲ್ಲಿ ವಿವಿಧ ಭಾಷಾ ತಜ್ಞರು ತಮ್ಮ ವಿಚಾರಗಳನ್ನು ಮಂಡಿಸಿದರು. ಕನ್ನಡ ಭಾಷೆಯ ಪರವಾಗಿ ಹಿರಿಯ ಲೇಖಕಿ ಡಾ. ಪದ್ಮಿನಿ ನಾಗರಾಜು, ಹಿಂದಿ ವಿಭಾಗದಿಂದ ಡಾ. ಶ್ರೀನಾರಾಯಣ ಸಮೀರ್, ಇಂಗ್ಲಿಷ್ ವಿಭಾಗದಿಂದ ಡಾ. ಕಾತ್ಯಾಯಿನಿ ಎಸ್. ಮತ್ತು ಸಂಸ್ಕೃತ ವಿಭಾಗದಿಂದ ಡಾ. ನಾಗರತ್ನ ಹೆಗಡೆ ಅವರು ಅನುವಾದದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಆಯಾಮಗಳ ಕುರಿತು ಗಹನವಾದ ಚರ್ಚೆ ನಡೆಸಿದರು.

ಮಧ್ಯಾಹ್ನದ ನಂತರ ನಡೆದ ತಾಂತ್ರಿಕ ಗೋಷ್ಠಿಯಲ್ಲಿ ವಿವಿಧ ಕಾಲೇಜುಗಳ ಅಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಂದ ಸಂಶೋಧನಾ ಪ್ರಬಂಧಗಳ ಮಂಡನೆ ನಡೆಯಿತು. ಒಟ್ಟಾರೆಯಾಗಿ ಈ ಸಮ್ಮೇಳನವು ಭಾಷಾ ಬೆಳವಣಿಗೆ ಮತ್ತು ಅನುವಾದದ ಮೂಲಕ ಜ್ಞಾನದ ಕ್ಷಿತಿಜವನ್ನು ವಿಸ್ತರಿಸುವ ನಿಟ್ಟಿನಲ್ಲಿ ಹೊಸ ಆಲೋಚನೆಗಳನ್ನು ಒದಗಿಸುವಲ್ಲಿ ಯಶಸ್ವಿಯಾಯಿತು.




**ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ**

# 8 ಹನ್ನೆರಡನೆಯ ಶತಮಾನದ ಅಪ್ರಚಲಿತ ವಚನಕಾರ್ತಿಯರು – ಕಮ್ಮಟ





ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಲೇಖಕಿಯರ ಸಂಘದ ಸಂಯುಕ್ತ ಆಶ್ರಯದಲ್ಲಿ, ಬೆಂಗಳೂರಿನ ಜಯನಗರದ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ದಿನಾಂಕ 28 ಫೆಬ್ರವರಿ 2026 ರಂದು ಆಯೋಜಿಸಲಾಗಿದ್ದ '12ನೆಯ ಶತಮಾನದ ವಚನಕಾರ್ತಿಯರ ಕುರಿತು ಒಂದು ದಿನದ ಕಮ್ಮಟ' ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಕಮ್ಮಟದಲ್ಲಿ ಒಟ್ಟು 50 ಪ್ರತಿನಿಧಿಗಳು ನೋಂದಣಿ ಮಾಡಿಕೊಂಡಿದ್ದು, ಬೆಂಗಳೂರಷ್ಟೇ ಅಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ ಆಗಮಿಸಿ ಸಕ್ರಿಯವಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಸಂಯೋಜಕರಾದ ಡಾ. ಮುಕ್ತಾ ಬಿ. ಕಾಗಲಿ ಅವರು ಕಾರ್ಯಕ್ರಮಕ್ಕೆ ಸ್ವಾಗತ ಕೋರುತ್ತಾ ರವಿಯ ಉದಯ ಜಗತ್ತಿನ ಅಂಧಕಾರವನ್ನು ನೀಗಿಸುವಂತೆ, ಶರಣೆಯರ ಅರಿವಿನ ಬೆಳಕು ಇಂದಿನ ಸಾಮಾಜಿಕ ಬದುಕಿಗೆ ದಿಕ್ಕು ನೀಡಲಿ ಎಂದರು. ಚರಿತ್ರೆಯ ಪುಟಗಳಲ್ಲಿ ಅಷ್ಟಾಗಿ ದಾಖಲಾಗದ ಅಥವಾ ಸಾರ್ವಜನಿಕ ಚರ್ಚೆಗೆ ಬಾರದ ಅನೇಕ ಅಪ್ರಚಲಿತ ವಚನಕಾರ್ತಿಯರನ್ನು ಅರಿಯುವುದು ಮತ್ತು ಅವರ ವಿಚಾರಗಳು ಇಂದಿನ ಬದುಕಿಗೆ ಎಷ್ಟು ಪ್ರಸ್ತುತ ಎಂಬುದನ್ನು ಮಂಥನ ಮಾಡುವುದು ಈ ಕಮ್ಮಟದ ಮುಖ್ಯ ಉದ್ದೇಶ. ಇಲ್ಲಿ ಪಡೆದ ಅರಿವನ್ನು ಕೇವಲ ಸಭಾಂಗಣಕ್ಕೆ ಸೀಮಿತಗೊಳಿಸದೆ ಪತ್ರಿಕಾ ಲೇಖನಗಳು, ಉಪನ್ಯಾಸಗಳು ಮತ್ತು ಸಂಶೋಧನೆಗಳ ಮೂಲಕ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕಿ ಡಾ. ಎಂ. ಉಷಾ ಅವರು ಆಶಯ ನುಡಿಗಳನ್ನಾಡಿದರು. ಅವರು ಈ ಕಮ್ಮಟದ ಉದ್ದೇಶವನ್ನು ಅತ್ಯಂತ ಅರ್ಥಪೂರ್ಣವಾಗಿ ವಿವರಿಸುತ್ತಾ ಈ ಹೊತ್ತಿನ ಲೇಖಕಿ ಆ ಹೊತ್ತಿನ ಲೇಖಕಿಯನ್ನು ಮುಖಾಮುಖಿಯಾಗುವ ಒಂದು ಅಪೂರ್ವ ಕ್ಷಣ ಎಂದು ಬಣ್ಣಿಸಿದರು. ಸುಮಾರು 850 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ ಸ್ತ್ರೀ ಸಂವೇದನೆ ಮತ್ತು ಇಂದಿನ ಲೇಖಕಿಯರ ಆಲೋಚನೆಗಳ ನಡುವಿನ ಸೇತುವೆಯಾಗಿ ಈ ಕಾರ್ಯಕ್ರಮವನ್ನು ಕಾಣಬೇಕಿದೆ. ಇಂದು ಮಹಿಳೆಯರು ಸಂಘಟಿತರಾಗಿ ಲೇಖಕಿಯರ ಸಂಘದ ಮೂಲಕ ಮಾತನಾಡುತ್ತಿದ್ದಾರೆ; ಆದರೆ 12ನೆಯ ಶತಮಾನದ ಅಪ್ಪಟ ಊಳಿಗಮಾನ್ಯ ಮತ್ತು ಪುರುಷ ಪ್ರಧಾನ ವ್ಯವಸ್ಥೆಯಲ್ಲೇ ಸುಮಾರು 30–35 ಮಹಿಳೆಯರು ಒಂದು ಕಡೆ ಸೇರಿ, ತಮ್ಮ ಅಸ್ಮಿತೆಯನ್ನು ಕಂಡುಕೊಂಡು ಪ್ರಜ್ಞಾವಂತ ಸಮುದಾಯವಾಗಿ ರೂಪುಗೊಂಡಿದ್ದರು ಎಂಬ ಅಂಶವನ್ನು ಒತ್ತಿ ಹೇಳಿದರು. ಅಂದು ಅವರು ನಮಗಿಂತಲೂ ಹೆಚ್ಚು ಧೈರ್ಯದಿಂದ ಮತ್ತು ಜೋರಾಗಿ ಮಾತನಾಡುತ್ತಿದ್ದರು. ಅಕ್ಕಮಹಾದೇವಿಯ ವಚನಗಳು ಕೇವಲ ಕಾವ್ಯವಲ್ಲ, ಅವು ಜೀವನದ ಸಂಕಷ್ಟಗಳನ್ನು ಎದುರಿಸಲು ಬೇಕಾದ ಶಕ್ತಿ. ವಿಶೇಷವಾಗಿ "ಮಾಡುವುದು ಮಾಡುವುದು ಮನಮುಟ್ಟಿ ಮಾಡುವುದು, ಬದುಕುವುದು ಬದುಕುವುದು ಮನಮುಟ್ಟಿ ಬದುಕುವುದು" ಎಂಬ ಸಾಲುಗಳನ್ನು ನಾನು ಜೀವನದ ಸ್ಲೋಗನ್‌ಗಳಾಗಿ ಸ್ವೀಕರಿಸಿದ್ದೇನೆ. ಯಾವುದೇ ಕೆಲಸವನ್ನು ಅರೆಮನಸ್ಸಿನಿಂದ ಮಾಡದೆ ಪೂರ್ಣ ಪ್ರಮಾಣದ ನಿಷ್ಠೆಯಿಂದ ಮಾಡಬೇಕೆಂಬ ಸಂದೇಶವನ್ನು ಇದು ಹೇಳುತ್ತದೆ. ವಚನಗಳನ್ನು ಓದಿದರೆ ಪ್ರತಿಯೊಬ್ಬರಿಗೂ ತಮ್ಮ ಬದುಕಿಗೆ ಬೇಕಾದ ಆತ್ಮವಿಶ್ವಾಸ ಸಿಗುತ್ತದೆ ಎಂದು ಅವರು ಮನದುಂಬಿ ನುಡಿದರು.

ಮೊದಲ ಗೋಷ್ಠಿಯಲ್ಲಿ ಕಲೇಸಂನ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಅವರು ವಚನ ಚಳವಳಿಗಿಂತ ಮುಂಚಿನ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಅತ್ಯಂತ ತೀಕ್ಷ್ಣವಾಗಿ ವಿಶ್ಲೇಷಿಸಿದರು. ಅಂದಿನ ಕಾಲಘಟ್ಟದಲ್ಲಿ ಮನುಸ್ಮೃತಿಯ ನಿಯಮಗಳು ಮಹಿಳೆಯರು, ಶೂದ್ರರು ಮತ್ತು ಅಸ್ಪೃಶ್ಯರನ್ನು ಕೇವಲ ಸೇವಕರು ಎಂದು ಪರಿಗಣಿಸಿ ಅವರ ಮೂಲಭೂತ ಹಕ್ಕುಗಳನ್ನು ಸಂಪೂರ್ಣವಾಗಿ ಕಿತ್ತುಕೊಂಡಿದ್ದವು. ಇಂತಹ

ಉಸಿರುಗಟ್ಟಿಸುವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಶರಣೆಯರು ತೋರಿದ ವೈಚಾರಿಕ ಪ್ರತಿರೋಧ ಅದ್ವಿತೀಯವಾದುದು. ಸ್ತ್ರೀಯರಿಗೆ ಸ್ವತಂತ್ರ ಆಲೋಚನಾ ಶಕ್ತಿ ಇಲ್ಲ ಎಂಬ ಅಂದಿನ ಜಡ ನಂಬಿಕೆಗಳನ್ನು ಅವರು ತಮ್ಮ ತರ್ಕಬದ್ಧ ವಚನಗಳ ಮೂಲಕ ಸಂಪೂರ್ಣವಾಗಿ ಸುಳ್ಳು ಮಾಡಿದರು. ಶರಣೆಯರ ದೃಷ್ಟಿಯಲ್ಲಿ 'ಅರಿವು' ಎಂದರೆ ಕೇವಲ ಅಕ್ಷರ ಜ್ಞಾನವಾಗಿರದೆ, ಅದು ಅನುಭವದ ಸಾರವಾಗಿತ್ತು; ಹೀಗಾಗಿಯೇ ಅವರು ಯಾವುದನ್ನೂ ಕೇವಲ ಗಾಳಿಯಲ್ಲಿ ಮಾತನಾಡದೆ, ತಮ್ಮ ಸ್ವಂತ ಅನುಭವಕ್ಕೆ ದಕ್ಕಿದ್ದನ್ನು ಮಾತ್ರ ಪರಮ ಸತ್ಯವೆಂದು ನಂಬಿ ಸಾರಿದರು. ಅನುಭವ ಮಂಟಪದಲ್ಲಿ ಶ್ರೇಣೀಕೃತ ಸಮಾಜದ ತಾರತಮ್ಯಗಳನ್ನು ಪ್ರಶ್ನಿಸುವಾಗ ಅವರು ನೀಡುತ್ತಿದ್ದ ಉದಾಹರಣೆಗಳು ಅತ್ಯಂತ ಪ್ರಾಯೋಗಿಕವಾಗಿದ್ದವು ಮತ್ತು ಅವರು ಯಾವುದನ್ನೂ ಅತೀಂದ್ರಿಯವಾಗಿ ಹೇಳದೆ ದೈನಂದಿನ ಬದುಕಿನ ನಿದರ್ಶನಗಳ ಮೂಲಕವೇ ಅಸಮಾನತೆಯನ್ನು ವಿಶ್ಲೇಷಿಸಿದರು. ದೈಹಿಕವಾಗಿ ಹೆಣ್ಣು–ಗಂಡು ಎಂಬ ವ್ಯತ್ಯಾಸವಿರಬಹುದಾದರೂ, ಅಧ್ಯಾತ್ಮ ಮತ್ತು ಅರಿವಿನ ಮಟ್ಟದಲ್ಲಿ ಯಾವುದೇ ಲಿಂಗ ತಾರತಮ್ಯಕ್ಕೆ ಅವಕಾಶವಿಲ್ಲ ಎಂಬ ಕ್ರಾಂತಿಕಾರಿ ನಿಲುವನ್ನು ಪ್ರತಿಪಾದಿಸಿದ ಅವರು, ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗುಗಳನ್ನು ಸಮಾಜವು ಹೇಗೆ ಅನಗತ್ಯವಾಗಿ ಪೋಷಿಸುತ್ತಿದೆ ಎಂಬುದನ್ನು ಸಹಜವಾದ ಮಾತುಗಳಲ್ಲಿ ಚರ್ಚಿಸುತ್ತಿದ್ದರು. ಶರಣೆಯರು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಬಳಸಿದ ಇಂತಹ ವೈಜ್ಞಾನಿಕ ಭಾಷೆ ಮತ್ತು ತರ್ಕಬದ್ಧ ವಿವೇಚನೆಯು ಇಂದಿನ ಆಧುನಿಕ ಸಮಾಜ ವಿಜ್ಞಾನಿಗಳಿಗೂ ಒಂದು ಮಹತ್ವದ ಮಾದರಿಯಾಗಿದೆ ಎಂದು ಹೇಳಿದರು.

ಎರಡನೇ ಗೋಷ್ಠಿಯಲ್ಲಿ ಮಾತನಾಡಿದ ಶ್ರೀಮತಿ ಸುನಂದಾ ರು ಬಸಪ್ಪ ಅವರು ಅಪ್ರಚಲಿತ ವಚನಕಾರ್ತಿಯರ ಬದುಕು ಮತ್ತು ಬರಹದ ಕುರಿತು ಮಾತನಾಡುತ್ತಾ, ಕನ್ನಡ ಸಾಹಿತ್ಯದಲ್ಲಿ ಸುಮಾರು 20,000ಕ್ಕೂ ಹೆಚ್ಚು ವಚನಗಳು ಲಭ್ಯವಿದ್ದರೂ ಕೇವಲ ಪ್ರಸಿದ್ಧ 1000 ವಚನಗಳ ಪರಿಚಯವಿರುವುದು ಒಂದು ಸಾಂಸ್ಕೃತಿಕ ದುರಂತ ಎಂದು ವಿಷಾದಿಸಿದರು. 12ನೆಯ ಶತಮಾನದ ತೀವ್ರ ಸಾಮಾಜಿಕ ಸ್ಥಿತ್ಯಂತರ ಮತ್ತು ನಗರೀಕರಣವು ಶರಣೆಯರ ಚಿಂತನೆಗೆ ಹೊಸ ಆಯಾಮ ನೀಡಿತು. ಶರಣೆ ಕಾಳವ್ವೆಯ ವಚನದ ಮೂಲಕ ಮನುಷ್ಯನ ವ್ಯಕ್ತಿತ್ವದಲ್ಲಿ ಮಾತಿಗೆ ಇರುವ ಅತ್ಯುನ್ನತ ಸ್ಥಾನವನ್ನು ಗಮನಿಸಬಹುದು. ಮಾತೇ ಮುತ್ತು, ಮಾತೇ ಮೃತ್ಯು ಎಂಬ ನಾಣ್ನುಡಿಯಂತೆ ಮಾತು ತಪ್ಪಿ ನಡೆಯುವುದು ಬದುಕಿನ ಅವನತಿಗೆ ಕಾರಣವಾಗುತ್ತದೆ ಎಂದು ಎಚ್ಚರಿಸಿದ ಕಾಳವ್ವೆಯ ದೃಷ್ಟಿಯಲ್ಲಿ ವ್ರತ ಎಂದರೆ ಕೇವಲ ಬಾಹ್ಯ ಪೂಜೆಯಲ್ಲ, ಅದು ಬದುಕಿನ ಶಿಸ್ತು ಮತ್ತು ಪರಿಶುದ್ಧವಾದ ನಡೆ, ಯಾವುದೇ ಕಾಯಕದಲ್ಲಿ ಮೇಲು–ಕೀಳು ಎಂಬ ಭೇದವಿಲ್ಲ, ಆದರೆ ಮಾಡುವ ಕಾಯಕ ಶಿವನಿಗೆ ಮೆಚ್ಚುವಂತಿರಬೇಕು ಮತ್ತು ಅದು ಮನಸ್ಸು ಹಾಗೂ ಕೃತಿಯ ಶುದ್ಧತೆಯಿಂದ ಕೂಡಿರಬೇಕು ಎಂಬದು ಕಾಳವ್ವೆಯ ನಿಲುವು ಎಂದು ಪ್ರತಿಪಾದಿಸಿದರು. ರೇಚವ್ವೆಯ ಅದ್ವೈತ ಚಿಂತನೆಗಳನ್ನು ಪ್ರಸ್ತಾಪಿಸುತ್ತಾ, ಅಹಂಕಾರವನ್ನು ತೊರೆದು "ತಾನು ತಾನಾದ ಬಳಿಕ ಇನ್ನಾರನೂ ಅರಿಯಬೇಡ" ಎನ್ನುವ ಮೂಲಕ ಆತ್ಮಸಾಕ್ಷಾತ್ಕಾರದ

ಮಹತ್ವವನ್ನು ಇಂದಿನ ಸಮಕಾಲೀನ ದೃಷ್ಟಿಕೋನಕ್ಕೆ ಅನ್ವಯಿಸಿ ಅವರು ವಿಚಾರ ಮಂಡಿಸಿದರು.

ಮೂರನೇ ಗೋಷ್ಠಿಯಲ್ಲಿ ಲೇಖಕಿ ಇಂದಿರಾ ಶಿವಣ್ಣ ಅವರು ಶರಣೆಯರ ಜೀವನದಲ್ಲಿ ಕಾಯಕ, ದಾಸೋಹ ಮತ್ತು ಆಧ್ಯಾತ್ಮ ಎಂಬ ವಿಷಯದ ಕುರಿತು ಮಾತನಾಡಿದರು. ಕಾಶ್ಮೀರದ ರಾಣಿಯಾಗಿದ್ದ ಗಂಗಾದೇವಿಯು ಕಲ್ಯಾಣದ ಕ್ರಾಂತಿಗೆ ಮಾರುಹೋಗಿ, ತನ್ನೆಲ್ಲಾ ರಾಜವೈಭೋಗಗಳನ್ನು ತ್ಯಜಿಸಿ ಮೋಳಿಗೆ ಮಹಾದೇವಿಯಾಗಿ ಬದಲಾದ ಉದಾತ್ತ ಇತಿಹಾಸ ಅನುಸರಣೀಯ. ಅರಮನೆಯ ಸುಖವನ್ನು ಬಿಟ್ಟು ಕಟ್ಟಿಗೆ ಮಾರಿ ಬದುಕುವ ಕಾಯಕವನ್ನು ಸ್ವೀಕರಿಸಿದ ಮಹಾದೇವಿಯ ಬದುಕು ಇಂದಿನ ಸ್ತ್ರೀಯರಿಗೆ ತ್ಯಾಗ ಮತ್ತು ಸ್ವಾಭಿಮಾನದ ಪರಮೋಚ್ಚ ಸಂಕೇತವಾಗಿದೆ. ಮುಕ್ತಾಯಕ್ಕನವರ ವೈರಾಗ್ಯದ ಉತ್ತುಂಗ ಗಮನಾರ್ಹ.'ಅರಿವಿನ ತಣಲೊಳಗಿಕ್ಕಿ ಬೇಯುತ್ತಿದೆ ಮರ್ತ್ಯಲೋಕವೆಲ್ಲವೂ' ಎಂಬ ವಚನದಂತೆ ಅಜ್ಞಾನದ ಬಿಸಿಲಿನಲ್ಲಿ ಬೆಂದ ಜನರಿಗೆ ಜ್ಞಾನದ ಅಮೃತ ಉಣಬಡಿಸಿದ ಶರಣೆಯರ ಅರಿವಿನ ದರ್ಶನ ಮಾಡಿಸಬೇಕಿದೆ. ಮೌಢ್ಯವನ್ನು ಕಠಿಣವಾಗಿ ಟೀಕಿಸಿದ ಮುಕ್ತಾಯಕ್ಕನವರು, ಹರಿಯುವ ನೀರನ್ನು ಕಟ್ಟಿ ನಿಲ್ಲಿಸಲಾಗದಂತೆ ಅರಿವಿಲ್ಲದವರಿಗೆ ಜ್ಞಾನ ಬೋಧಿಸುವುದು ಅಸಾಧ್ಯವೆಂಬ ಮಾರ್ಮಿಕ ಸತ್ಯವನ್ನು ಸಾರಿದರು. ಆಯ್ದಕ್ಕಿ ಲಕ್ಕಮ್ಮನವರ ಜೀವನದ ಮೂಲಕ ಕಾಯಕದ ಗರಿಷ್ಠ ಮೌಲ್ಯವನ್ನು ದರ್ಶಿಸಬಹುದು. ಕಾಯಕವು ಕೇವಲ ಜೀವನೋಪಾಯವಾಗದೆ ಮುಕ್ತಿಯ ಹಾದಿಯಾಗಬೇಕು ಮತ್ತು ಅತಿಯಾಸೆ ಪಡದೆ ಅಂದಿಗೆ ಬೇಕಾದ ಅಕ್ಕಿಯನ್ನು ಮಾತ್ರ ಆಯ್ದು ತರುವ ಮೂಲಕ 'ದಾಸೋಹ' ತತ್ವದ ನೈಜ ಅರ್ಥವನ್ನು ಪಾಲಿಸಬೇಕೆಂದು ಲಕ್ಕಮ್ಮ ಜಗತ್ತಿಗೆ ತೋರಿದ್ದಾರೆ. ಒಟ್ಟಾರೆಯಾಗಿ ಶರಣೆಯರು ಕೇವಲ ಅಧ್ಯಾತ್ಮಕ್ಕೆ ಸೀಮಿತವಾಗದೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮತ್ತು ಸ್ತ್ರೀ ಅಸ್ಮಿತೆಯನ್ನು ಎತ್ತಿಹಿಡಿಯುವ ಕೆಲಸ ಮಾಡಿದರು ಎಂದು ಹೇಳಿದರು.

## ಶಿಬಿರಾರ್ಥಿಗಳಿಂದ ಸಂವಾದ ಮತ್ತು ವಿಷಯ ಪ್ರಸ್ತುತಿ

ಗೋಷ್ಠಿಗಳ ಮುಕ್ತಾಯದ ನಂತರ ಶಿಬಿರಾರ್ಥಿಗಳ ಸಂವಾದ ಕಾರ್ಯಕ್ರಮವು ಜರುಗಿತು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಎಲ್ಲಾ ಪ್ರತಿನಿಧಿಗಳನ್ನು ನಾಲ್ಕಾರು ಸಣ್ಣ ಗುಂಪುಗಳಾಗಿ ವಿಂಗಡಿಸಲಾಯಿತು. ಈ ಗುಂಪು ಚರ್ಚೆಯು ಕೇವಲ ಒಂದು ಔಪಚಾರಿಕ ಪ್ರಕ್ರಿಯೆಯಾಗದೆ, ಅರಿವಿನ ಹಂಚಿಕೆಯ ವೇದಿಕೆಯಾಗಿ ಮಾರ್ಪಟ್ಟಿತು. ಪ್ರತಿಯೊಂದು ಗುಂಪಿನಿಂದಲೂ ಗೋಷ್ಠಿಗಳಿಂದ ತಾವು ಕಲಿತ ಪ್ರಮುಖ ಅಂಶಗಳು, ವಚನಕಾರ್ತಿಯರ ವಿಚಾರಗಳನ್ನು ಸಮಾಜಕ್ಕೆ ತಲುಪಿಸಲು ತಮ್ಮ ಮುಂದಿನ ಯೋಜನೆಗಳು ಮತ್ತು ಒಟ್ಟಾರೆ ಕಾರ್ಯಾಗಾರದ ಬಗ್ಗೆ ತಮ್ಮ ಅನಿಸಿಕೆಗಳನ್ನು ಶಿಬಿರಾರ್ಥಿಗಳು ಮುಕ್ತವಾಗಿ ಹಂಚಿಕೊಂಡರು.

ಸಮಾರೋಪ ಸಮಾರಂಭದಲ್ಲಿ ಸ್ವಾಗತ ಕೋರಿದ ಕಲೇಸಂನ ಕಾರ್ಯದರ್ಶಿ ಸುಮಾ ಸತೀಶ್‌ರವರು, ಈ ಕಮ್ಮಟದ ಆಶಯ ಕೇವಲ ಒಂದು ದಿನದ ಚರ್ಚೆಗೆ ಸೀಮಿತವಾಗಬಾರದು, ಲೇಖಕಿಯರು ವಚನಕಾರ್ತಿಯರ ವೈಚಾರಿಕತೆಯನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಬೇಕು. ಶರಣೆಯರು ಪದಗಳ ಮಡಿವಂತಿಕೆಯನ್ನು ಬದಿಗೊತ್ತಿ ಸಮಾಜದ ಭಿನ್ನಭೇದಕ್ಕೆ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ವಚನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇಂದಿಗೂ ಆ ದಿಟ್ಟತನವನ್ನು ಅನುಸರಿಸುವುದು ನಮಗೆ ಸಾಧ್ಯವಾಗಿಲ್ಲ. ಸಮಾಜ ಹೇರುತ್ತಿರುವ ಮಡಿವಂತಿಕೆ ಲೇಖಕಿಯರ ಪದಗಳಿಗೆ ಮುಸುಕು ಹೊದ್ದಿಸಿದೆ ಎಂದು ವಿಷಾದಿಸಿದರು. ಯುವ ಬರಹಗಾರರಿಗೆ ವೇದಿಕೆ ಕಲ್ಪಿಸುವುದು ಮತ್ತು ಮಹಿಳಾ ಸಂವೇದನೆಯನ್ನು ಸಾಹಿತ್ಯದ ಮೂಲಕ ಗಟ್ಟಿಗೊಳಿಸುವುದು ಸಂಘದ ನಿರಂತರ ಆಶಯವಾಗಿದೆ ಎಂದು ಹೇಳಿದರು.

ಸಮಾರೋಪ ಭಾಷಣ ಮಾಡಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಅವರು ಶರಣರ ತತ್ವಗಳು ಸಾರ್ವಕಾಲಿಕ ಮೌಲ್ಯಗಳನ್ನು ಹೊಂದಿವೆ ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿದ್ದ ಖ್ಯಾತ ಲೇಖಕಿ ಮತ್ತು ಪತ್ರಕರ್ತೆ ಡಾ. ಆರ್. ಪೂರ್ಣಿಮಾ ಅವರು ಶರಣರ 'ಕಾಯಕ ಮಹತ್ವ'ದ ಕುರಿತು ವಿಶೇಷವಾಗಿ ಮಾತನಾಡಿ, ಶ್ರಮ ಸಂಸ್ಕೃತಿಯ ಅಗತ್ಯವನ್ನು ವಿವರಿಸಿದರು. ಇಂದಿಗೂ ಮಹಿಳೆಗೆ ಸಮಾಜದಲ್ಲಿ ಅಗೌರವ ತೋರಲಾಗುತ್ತಿದೆ, ಅಂದು ವಚನಕಾರ್ತಿಯರು ಇವುಗಳನ್ನು ಎದುರಿಸಿ ನಿಂತ ಬಗೆಯನ್ನು ಅಳವಡಿಸಿಕೊಳ್ಳಬೇಕಿದೆ. ವಚನಗಳು ಗಾಯನದ ಮೂಲಕ ಜನಸಾಮಾನ್ಯರನ್ನು ತಲುಪಲು ಸಾಧ್ಯವಾಯಿತು ಎಂದು ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಮಹಿಳೆಯರು ಇವತ್ತಿನ ಸಮಾಜದಲ್ಲಿ ತಮ್ಮ ಒಳಗಿನ ಭಾವನೆಗಳನ್ನು ಎಲ್ಲಿ, ಹೇಗೆ, ಎಷ್ಟರಮಟ್ಟಿಗೆ ಹೊರಹಾಕಲು ಸಾಧ್ಯವಾಗುತ್ತಿದೆ ಎಂಬುದನ್ನು ಗಮನಿಸಬೇಕಿದೆ. ಮೊದಲು ನಮ್ಮನ್ನು ನಾವು ಅರಿತುಕೊಳ್ಳಬೇಕು. ಮಹಿಳೆಯರು ತಾವು ತಮಗಾಗಿ ಬದುಕಿದ್ದೇ ಇಲ್ಲ. ಅದಕ್ಕೇ ಕೊನೆಗೆ ಅವರಿಗೆ ಬರೀ ಕನಲುವಿಕೆ ಮಾತ್ರ ಉಳಿಯುತ್ತದೆ. ಆದರೆ ವಚನಾಕಾರ್ತಿಯರು ಇದನ್ನು ಮೀರಿ ತಮ್ಮ ಅನುಭವಕ್ಕೆ ದಕ್ಕಿದ ಎಲ್ಲವನ್ನೂ ಕಟ್ಟಿಕೊಟ್ಟರು. ಗಂಡು ಸ್ವಾಮ್ಯದ ದೇಹಭಾಷೆಯನ್ನೂ ಮುರಿದು ಕಟ್ಟುವ, ಸ್ತ್ರೀ ಸಂವೇದನೆಯ ಅವರ ವಚನಗಳನ್ನು ಮರು ಓದಿನ ಮೂಲಕ ಅಳವಡಿಸಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದ ನಿರ್ವಹಣೆಯನ್ನು ಕಾರ್ಯಕಾರಿ ಸಮಿತಿಯ ಗೌರಿ ಮಾಡಿದರು.

ಕಮ್ಮಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಸಹ ಕಾರ್ಯದರ್ಶಿ ಡಾ. ಅನುರಾಧ ಬಿ.ಟಿ. ಅವರು ವಂದನಾರ್ಪಣೆ ಮಾಡಿದರು. ಕರ್ನಾಟಕ ಲೇಖಕಿಯರ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಸಹಕಾರದಿಂದ ಕಮ್ಮಟ ಯಶಸ್ವಿಯಾಗಿ ಮುಕ್ತಾಯವಾಯಿತು.

# 9. ಸಾಧಕಿ ಸಮಾವೇಶ – ಧಾರವಾಡ





**ತಂತ್ರಜ್ಞಾನಕ್ಕೂ ಮಹಿಳೆಯನ್ನು ಪರಿಚಯಿಸಬೇಕಿದೆ – ಪ್ರೊ. ಎ.ಎಂ. ಖಾನ್**

ಸಮಾಜದಲ್ಲಿ ಪುರುಷರನ್ನು ಗುರುತಿಸುವಷ್ಟು ಸುಲಭವಾಗಿ ಮಹಿಳಾ ಸಾಧಕರನ್ನು ಗುರುತಿಸುವುದಿಲ್ಲ. ವಚನ, ತತ್ವಪದಗಳು ಮತ್ತು ಕೀರ್ತನೆಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಸಾಕಷ್ಟು ಕೆಲಸ ಮಾಡಿದರೂ ತತ್ವಪದಕಾರರು, ಕೀರ್ತನಕಾರರು ಎಂದೇ ನಾವು ಹೇಳುತ್ತೇವೆ. ಈ ತಾರತಮ್ಯ ಹೋಗಬೇಕು ಎಂದು ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎ.ಎಂ. ಖಾನ್ ಅವರು ಹೇಳಿದರು.

ಅವರು ಕರ್ನಾಟಕ ವಿಶ್ವವಿದ್ಯಾನಿಲಯದ ಕನಕ ಅಧ್ಯಯನ ಪೀಠದ ಸಭಾಂಗಣದಲ್ಲಿ ಮಾರ್ಚ್ 13 ಹಾಗೂ 14ರಂದು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ

ಕೇಂದ್ರ ಬೆಂಗಳೂರು, ಕನಕ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಮತ್ತು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ನಡೆದ ಸಾಧಕಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಗೂಗಲ್ ನಲ್ಲಿ ಹುಡುಕಿದರೂ ಷರೀಫ, ಕನಕದಾಸ ಮುಂತಾದ ಪುರುಷರ ಹೆಸರನ್ನೇ ತೋರಿಸುತ್ತದೆಯೇ ಹೊರತು ಮಹಿಳೆಯರ ಹೆಸರನ್ನು ಅಷ್ಟಾಗಿ ತೋರಿಸುವುದಿಲ್ಲ. ಹರಪನಳ್ಳೀ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ, ಅಕ್ಕಮಹಾದೇವಿ, ಗೊಗ್ಗವ್ವೆ ಮುಂತಾದವರು ಈ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಅವರೆಲ್ಲರನ್ನೂ ನಾವಿಂದು ಸ್ಮರಿಸುವ ಕೆಲಸವಾಗಬೇಕು, ಅದಕ್ಕಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ನಾವು ಸಾಧಕಿಯರ ಕುರಿತಾಗಿ ಬಂದ ಪುಸ್ತಕಗಳನ್ನೇ ಉಡುಗೊರೆಯನ್ನಾಗಿ ನೀಡಲು ನಿರ್ಧರಿಸಿದ್ದೇವೆ ಎಂದೂ ಹೇಳಿದರು.

ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕಾ.ತ. ಚಿಕ್ಕಣ್ಣನವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಸಾಹಿತ್ಯ ವಲಯದಲ್ಲಿ ಅವಜ್ಞೆಗೆ ಒಳಗಾದ ಮಧ್ಯಕಾಲೀನ ಯುಗದ ವಚನಕಾರ್ತಿಯರು, ಕೀರ್ತನಕಾರ್ತಿಯರು ಮತ್ತು ತತ್ವಪದಕಾರ್ತಿಯರನ್ನು ಕೇಂದ್ರೀಕರಿಸಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಚರ್ಚಿಸುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಸಾಧಕಿ ಸಮಾವೇಶವನ್ನು ನಾವು ಆಯೋಜಿಸಿದ್ದೇವೆ. ಬಹಳ ಮುಖ್ಯವಾಗಿ ಈ ಎಲ್ಲ ಅಂಶಗಳೂ ಯುವ ಪೀಳಿಗೆಯನ್ನು ತಲುಪುವ ಅಗತ್ಯವಿದೆ. ಹಾಗಾಗಿ ಈ ಸಮಾವೇಶಕ್ಕೆ ರಾಜ್ಯಾದ್ಯಂತ ಬಹುತೇಕ ಜಿಲ್ಲೆಗಳ ಕಾಲೇಜು ವಿದ್ಯಾರ್ಥಿನಿಯರನ್ನು ಆಹ್ವಾನಿಸಿದ್ದೇವೆ. ಜೊತೆಗೆ ಚಿಂತಕಿಯರು, ಹಿರಿಯ ಲೇಖಕಿಯರು ಸೇರಿ ಇದೊಂದು ರೀತಿಯಲ್ಲಿ ಹಿರಿಯ– ಕಿರಿಯ ಚಿಂತಕಿಯರ ಸಮಾಗಮವೆನ್ನಬಹುದು. ಎಲ್ಲರೂ ಮುಕ್ತವಾಗಿ ಇಲ್ಲಿ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕೆಂದು ಆಶಿಸಿದರು.

ಆಗಿನ ಕಾಲದ ಕಟ್ಟುಪಾಡುಗಳಲ್ಲಿ ಸಿಲುಕಿಕೊಂಡ ಮಹಿಳೆಯರು ತಮ್ಮ ನೋವುಗಳನ್ನು, ಅನುಭವಗಳನ್ನೇ ಹಾಡಾಗಿಸಿದರು, ಅನುಭವದ ಮೂಸೆಯಲ್ಲಿ ತತ್ವಪದಗಳು, ಕೀರ್ತನೆಗಳು, ವಚನಗಳು ಅವರಿಂದ ಹೊರಬಂದವು. ಆಗ ಅವರಿಗೆ ಸಮಾಜವೇ ದೇವರಾಗಿತ್ತು, ಅಕ್ಕಮಹಾದೇವಿ, ಗೊಗ್ಗವ್ವೆ, ನೀಲಾಂಬಿಕೆ, ಮೀರಾಬಾಯಿ, ಭೀಮವ್ವ ಮುಂತಾದವರು ಸಮರ್ಪಣಾ ಮನೋಭಾವದಿಂದ ಹಾಡಿದರು. ಈ ಕುರಿತು ಇಂದಿನ ವಿದ್ಯಾರ್ಥಿನಿಯರು ಹೆಚ್ಚು ಹೆಚ್ಚು ಅಧ್ಯಯನ ಮಾಡಿ, ಸಂಶೋಧನೆಯನ್ನು ಕೈಗೊಳ್ಳಬೇಕು ಎಂದು ಮುಖ್ಯ ಅತಿಥಿಯಾಗಿದ್ದ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು ಕರೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಪ್ರೊ. ಆರ್. ಸುನಂದಮ್ಮನವರು, ತತ್ವಪದಕಾರರಿಗೆ ಯಾವುದೇ ಜಾತಿ, ಮತ, ಆಹಾರ, ಲಿಂಗ ಭೇದವಿರುವುದಿಲ್ಲ. ಅವರು ರಾತ್ರಿ ಹಗಲೆನ್ನದೆ ಒಟ್ಟಿಗೇ ಕುಳಿತು ತಮ್ಮ ಅನುಭವಗಳನ್ನು ಪದವಾಗಿಸಿ ಹಾಡುತ್ತಾ ಹೋದರು. ಧರ್ಮ, ಜಾತಿ ಮುಂತಾದವುಗಳಲ್ಲಿ ಸಿಲುಕಿಕೊಂಡಿರುವ

ಇಚಿದಿನ ಸಮಾಜಕ್ಕೆ ಈ ತತ್ವಪದಗಳು ಹೊಸ ಮಾರ್ಗವನ್ನು ಕೊಡಬಲ್ಲವು ಎಂಬುದು ನಮ್ಮ ಆಶಯ, ಆ ನಿಟ್ಟಿನಲ್ಲಿ ಈ ಸಾಧಕಿ ಸಮಾವೇಶದ ಗೋಷ್ಠಿಗಳು ನಡೆಯಲಿವೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಧಾರವಾಡದ ಡಾ. ಪರಶುರಾಮ ಕಟ್ಟಿ ಸಂಗಾವಿ ಮತ್ತು ತಂಡದವರಿಂದ ಗಾಯನ ಕಾರ್ಯಕ್ರಮ ನಡೆಯಿತು. ಕನಕ ಅಧ್ಯಯನ ಪೀಠದ ಸಂಯೋಜಕರಾದ ಪ್ರೊ. ಹನಮಗೌಡ ಸಿ ಅವರು ಸ್ವಾಗತಿಸಿದರು. ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿ ಭಾರತಿ ಹೆಗಡೆ ಕಾರ್ಯಕ್ರಮ ನಿರೂಪಿಸಿದರು. ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿ ಸುಮಾ ಸತೀಶ್ ವಂದಿಸಿದರು.

ಎರಡು ದಿನಗಳ ವಚನಕಾರ್ತಿಯರು, ಕೀರ್ತನಕಾರ್ತಿಯರು ಮತ್ತು ತತ್ವಪದಕಾರ್ತಿಯರ ಕುರಿತ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ. ಸಬಿಹಾ ಭೂಮಿಗೌಡ, ಡಾ. ಟಿ. ಗಾಯಿತ್ರಮ್ಮ, ಡಾ. ಕಾತ್ಯಾಯಿನಿ ಕುಂಜಿಬೆಟ್ಟು, ಡಾ. ಸೆಲ್ವಕುಮಾರಿ, ಡಾ. ಅನಸೂಯ ಕಾಂಬಳೆ, ಡಾ. ಸಬಿತಾ ಬನ್ನಾಡಿ, ಕೆ. ನೀಲಾ, ಡಾ. ಎನ್.ಆರ್. ಲಲಿತಾಂಬ, ಡಾ. ಪರ್ವೀನ್ ಸುಲ್ತಾನಾ ವಿಷಯ ಮಂಡನೆ ಮಾಡಿದರು.

ಸಮಾರೋಪ ಸಮಾರಂಭದಲ್ಲಿ ಡಾ. ದು. ಸರಸ್ವತಿಯವರು ಸಮಾರೋಪ ಭಾಷಣ ಮಾಡಿದರು.



ವಾರ್ತಾ ಭಾರತಿ

## ಸಾಂಸ್ಕೃತಿಕವಲ್ಲದ ಮನಸ್ಸುಗಳು ಕಾಲಿಟ್ಟ ಕ್ಷೇತ್ರ ಬರಡಾಗುತ್ತದೆ: ಪ್ರೊ. ಎಸ್.ಜಿ.ಸಿದ್ದರಾಮಯ್ಯ

▸▸ ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ ವಾರ್ಷಿಕ ದತ್ತಿ ಪ್ರಶಸ್ತಿ ಪ್ರದಾನ

## 10. ಕಲೇಸಂ ವಾರ್ಷಿಕ ದತ್ತಿ ಪ್ರಶಸ್ತಿಗಳು ಮತ್ತು ನಳಿನಿಮೂರ್ತಿ ದತ್ತಿ ಪ್ರಶಸ್ತಿ ಪ್ರದಾನ ಹಾಗೂ ಕಲೇಸಂ ವೆಬ್‌ಸೈಟ್ ಉದ್ಘಾಟನೆ





ಕರ್ನಾಟಕ ಲೇಖಕಿಯರ ಸಂಘದ 2024 – 2025 ನೆಯ ಸಾಲಿನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ 9 – 4 – 2026, ಗುರುವಾರದಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಸಬಿಹಾ ಭೂಮಿಗೌಡ ಅವರು ಮಾತನಾಡಿದರು. ಸುಮಾರು 37 – 38 ವರ್ಷಗಳ ಕಲೇಸಂನ ಒಡನಾಟವನ್ನು ಸ್ಮರಿಸಿದರು. ಲೇಖಕಿಯರ ಸಂಘವು ಆರಂಭದಿಂದಲೂ ಕಮ್ಮಟಗಳ ಮೂಲಕ ಅದರಲ್ಲಿ ಭಾಗವಹಿಸಿದ ಲೇಖಕಿಯರಿಗೆ ಸಾಹಿತ್ಯವನ್ನು ಹೇಗೆ ಓದಬೇಕು, ಹೇಗೆ

ಅರ್ಥಮಾಡಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಟ್ಟಿದೆ. ಕಲೇಸಂನ ಪ್ರಶಸ್ತಿ ಲೇಖಕಿಯರಿಗೆ ಅಸ್ಮಿತೆಯ ಸಂಕೇತವಾಗಿದೆ. ಹೊಸ ಜವಾಬ್ದಾರಿಯನ್ನು ಹೊತ್ತು ನಡೆಯುತ್ತಿರುವ ಪ್ರಸ್ತುತ ಕಲೇಸಂನ ಇಡೀ ತಂಡಕ್ಕೆ ಕನಸನ್ನು ನನಸಾಗಿಸುವ ಉತ್ಸಾಹ ಮತ್ತು ಶಕ್ತಿ ಇದೆ ಎಂದರು.

ಕಲೇಸಂ ವೆಬ್‌ಸೈಟ್‌ನಲ್ಲಿ ಲಭಿಸುವ ಮಾಹಿತಿಯನ್ನು ಕುರಿತು ಜಯಲಕ್ಷ್ಮಿ ಪಾಟೀಲ್ ಅವರು ವಿವರಿಸಿದರು.

ಕಲೇಸಂನ ವೆಬ್‌ಸೈಟ್ ಅನ್ನು ಡಾ. ಎನ್. ಗಾಯತ್ರಿ ಅವರು ಉದ್ಘಾಟಿಸಿದರು. ಬದುಕು ಮತ್ತು ಬರಹ ಆಧುನಿಕವಾಗುತ್ತಿರುವ ಈ ಕಾಲದಲ್ಲಿ ವೆಬ್‌ಸೈಟ್ ಎಷ್ಟು ಮುಖ್ಯ ಎಂಬುದನ್ನು ವಿವರಿಸಿದರು. ಪ್ರಶಸ್ತಿಗಳನ್ನು ನಿರ್ಣಯಿಸುವ ಹಂತದಲ್ಲಿ ಹಲವು ಉತ್ತಮ ಪುಸ್ತಕಗಳನ್ನು ಓದುವಂತಾಯಿತು. ಇಂದು ಮಹಿಳೆಯರು ಪ್ರವೇಶಿಸದೇ ಇರುವ ಕ್ಷೇತ್ರವೇ ಇಲ್ಲ. ಮಹಿಳೆಯರ ಜ್ಞಾನ ಪ್ರಪಂಚದಾದ್ಯಂತ ಹರಡಿದೆ. ಮಹಿಳೆಯರ ಬರವಣಿಗೆಗಳು ವಿವಿಧ ಪ್ರಕಾರಗಳಲ್ಲಿ ವಿಸ್ತರಿಸಿದೆ. ಅದರಿಂದ ಪುರುಷಶಾಹಿ ಜಗತ್ತಿಗೆ ಸಿಟ್ಟು ಬರಬಹುದು ಆದರೆ ಅದನ್ನು ದಿಟ್ಟತನದಿಂದ ಎದುರಿಸಿ ನಿಲ್ಲಬೇಕು ಎಂದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಎಸ್. ಜಿ. ಸಿದ್ದರಾಮಯ್ಯ ಅವರು ಇಂದು ಇಡೀ ಜಗತ್ತು ಕ್ರೌರ್ಯ, ಹಿಂಸೆ, ರಕ್ತಪಾತವನ್ನು ಅನುಭವಿಸುತ್ತಿದೆ. ಅವರೆಲ್ಲರೂ ನಮ್ಮ ಸಹಜೀವಿಗಳು. ಜೀವಸಂಕುಲದ ಮನುಜ ಲೋಕದ ಈ ಕ್ರೌರ್ಯ ನಮ್ಮಲ್ಲಿ ಸಂಕಟವನ್ನು ಉಂಟುಮಾಡುತ್ತದೆ. ಬಹುತೇಕ ಯುದ್ಧಗಳು ನಡೆಯುವುದು ಪುರುಷಾಹಂಕಾರದಿಂದ. ಹಿಂಸೆಯನ್ನು ಅಹಿಂಸೆಯಿಂದ ಮಾತ್ರ ಸೋಲಿಸಲು ಸಾಧ್ಯ. ಮಾತೃ ಹೃದಯದ ಶಕ್ತಿ ಎಲ್ಲಾ ಬರಹಗಾರರಿಗೂ ಬರಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಜಿ. ಎನ್. ಮೋಹನ್ ಅವರು ಸಂಘದ ಜೊತೆಗೆ ತಮಗೆ ಇರುವ ಒಡನಾಟವನ್ನು ಹೇಳುತ್ತಾ, ಆರಂಭ ಘಟ್ಟದಿಂದಲೂ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಕೈಜೋಡಿಸಿದ್ದನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಅವರು ವಹಿಸಿದ್ದರು. ಲೇಖಕಿಯರ ಸಂಘವು ಇದುವರೆಗೂ ನಡೆಸಿದ ಕಾರ್ಯಕ್ರಮಗಳನ್ನು ಮತ್ತು ಮುಂದೆ ಹಮ್ಮಿಕೊಳ್ಳುತ್ತಿರುವ ಕಾರ್ಯ ಯೋಜನೆಗಳನ್ನು ಸಭೆಯ ಮುಂದಿಟ್ಟರು. ಉಪಾಧ್ಯಕ್ಷರಾದ ಡಾ॥ ಆರ್.ಕೆ. ಸರೋಜಾ ಮತ್ತು ಸರ್ವಮಂಗಳಾ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಸುಮಾ ಸತೀಶ್ ಅವರು ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು.

# 11. ಪ್ರಶಸ್ತಿ ಪುರಸ್ಕೃತರ ಪಟ್ಟಿ

**1. ನಳಿನಿಮೂರ್ತಿ ದತ್ತಿ ಪ್ರಶಸ್ತಿ**

2024 – 2025ನೇ ಸಾಲಿನ ನಳಿನಿಮೂರ್ತಿ ದತ್ತಿ ಪ್ರಶಸ್ತಿಯನ್ನು ಕ್ರಮವಾಗಿ ಬಿ.ಎಸ್. ಶೈಲಜಾ ಮತ್ತು ನೇಮಿಚಂದ್ರ ಅವರಿಗೆ ಪ್ರದಾನ ಮಾಡಲಾಯಿತು.

**2. ಕಲೇಸಂ ವಾರ್ಷಿಕ ದತ್ತಿ ಪ್ರಶಸ್ತಿ ಪುರಸ್ಕೃತರು – 2024**

1. ಶ್ರೀಮತಿ ಕೆ.ಟಿ. ಬನಶಂಕರಮ್ಮ ದತ್ತಿ ಪ್ರಶಸ್ತಿ – (ಶಿಕ್ಷಕಿ ಹಾಗೂ ಲೇಖಕಿ)
   ನಿರ್ಮಲಾ ಶೆಟ್ಟರ್, ಧಾರವಾಡ
2. ಶ್ರೀಮತಿ ಶ್ರೀಲೇಖಾ ದತ್ತಿ ಪ್ರಶಸ್ತಿ (ಕವಿತೆ)
   ಪ್ರತಿಭಾ ಪಾಟೀಲ– ಸಿಂಬಿ
3. ಶ್ರೀಮತಿ ಭಾಗ್ಯ ನಂಜಪ್ಪ ದತ್ತಿ ಪ್ರಶಸ್ತಿ (ವಿಜ್ಞಾನ ಸಾಹಿತ್ಯ)
   ಡಾ॥ ಕೆ.ಎಸ್. ಚೈತ್ರ – ದಂತ ಕಥೆಗಳು
4. ಶ್ರೀಮತಿ ಜಿ.ವಿ. ನಿರ್ಮಲ ದತ್ತಿ ಪ್ರಶಸ್ತಿ (ಅನುವಾದ)
   ವಿಜಯಾ ಶಂಕರ್– ಮನೋಜ್ಞ (ತೆಲುಗುಮೂಲ: ಸಲೀಂ)
5. ಶ್ರೀಮತಿ ಉಷಾ. ಪಿ. ರೈ ದತ್ತಿ ಪ್ರಶಸ್ತಿ (ಆತ್ಮಕಥನ)
   ಎಚ್.ಆರ್. ಲೀಲಾವತಿ– ಹಾಡಾಗಿ ಹರಿದಾಳೆ
6. ಶ್ರೀಮತಿ ನಾಗರತ್ನ ಚಂದ್ರಶೇಖರ್ ದತ್ತಿ ಪ್ರಶಸ್ತಿ (ಲಲಿತ ಪ್ರಬಂಧ)
   ಸವಿತಾ ಮಾಧವ ಶಾಸ್ತ್ರಿ, ಗುಂಡ್ಮಿ– ನೀರ್ ದೋಸೆ
7. ಡಾ. ಬಿ. ಸಿ. ಶೈಲಾ ನಾಗರಾಜ್ ಪ್ರಶಸ್ತಿ (ಕಾವ್ಯ)
   ಡಾ. ಭಾರತಿ ದೇವಿ ಪಿ.– ಚಲಿಸುತ್ತಿವೆ ಚುಕ್ಕಿಗಳು
8. ಶ್ರೀಮತಿ ಸಂಕಮ್ಮ ಜಿ. ಎಸ್. ಬ್ಯಾಡಗಿ ಪ್ರಶಸ್ತಿ (ಕಾವ್ಯ)
   ಡಾ. ಗೀತಾ ವಸಂತ– ಪ್ರಾಣಪಕ್ಷಿಯ ರೆಕ್ಕೆ
9. ಶ್ರೀ ಜಯ ಕಲಕೋಟಿ ದತ್ತಿ ಪ್ರಶಸ್ತಿ (ವಚನ ಸಾಹಿತ್ಯ)
   ಡಾ. ಮೀನಾಕ್ಷಿ ಬಾಳಿ– ವಚನ ನಿಜದರ್ಶನ
10. ಶ್ರೀಮತಿ ಸುಶೀಲಾ ಸೋಮಶೇಖರ್ ದತ್ತಿ ಪ್ರಶಸ್ತಿ(ವಚನ ಸಾಹಿತ್ಯ)
    ಸುಶೀಲಾ ಸದಾಶಿವಯ್ಯ– ಜಗದ ಬೆರಗು
11. ಶ್ರೀಮತಿ ಲಕ್ಷ್ಮಿದೇವಮ್ಮ ದತ್ತಿ ಪ್ರಶಸ್ತಿ(ಕಥೆ)
    ವಿದ್ಯಾ ಭರತನಹಳ್ಳಿ– ಬೇಸೂರ್
12. ಶ್ರೀಮತಿ ನಿರುಪಮಾ ದತ್ತಿ ಪ್ರಶಸ್ತಿ (ಕಥೆಗಳು)
    ಮುದ್ರಣ ಮಾಧ್ಯಮ

ಎಲ್. ಗಿರಿಜಾರಾಜ್– ಪಾರೋತಿಯ ಶಿವ

ರಾಜಶ್ರೀ ಟಿ. ರೈ –ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ

13. ಶ್ರೀಮತಿ ಪ್ರೇಮಾ ಭಟ್ ಮತ್ತು ಎ. ಎಸ್. ಭಟ್ ದತ್ತಿ ಪ್ರಶಸ್ತಿ (ಲೇಖಕಿ/ಪ್ರಕಾಶಕಿ)
    ಸುಧಾ ಚಿದಾನಂದಗೌಡ
14. ಶ್ರೀಮತಿ ತ್ರಿವೇಣಿ ದತ್ತಿ ಪ್ರಶಸ್ತಿ(ಕಥಾ ಸಂಕಲನ)
    ಪ್ರಥಮ ಬಹುಮಾನ: ಡಾ. ಸುಜಾತಾ ಚಲವಾದಿ–ಲಚಮವ್ವ ಮತ್ತು ಇತರ ಕಥೆಗಳು
    ದ್ವಿತೀಯ ಬಹುಮಾನ : ರೇಣುಕಾ ಕೋಡಗುಂಟಿ– ಚಿಗುರೊಡೆದ ಬೇರು
    ತೃತೀಯ ಬಹುಮಾನ: ಸ್ಮಿತಾ ಅಮೃತರಾಜ್ ಸಂಪಾಜೆ– ಹಾಯ್ ಮೆಟಾಯ್
15. ಶ್ರೀಮತಿ ಕಾಕೋಳು ಸರೋಜಮ್ಮ ದತ್ತಿ ಪ್ರಶಸ್ತಿ (ಕಾದಂಬರಿ)
    ಬಿ. ಆರ್. ನಾಗರತ್ನ – ಕಾಲಗರ್ಭ
16. ಶ್ರೀಮತಿ ಕಮಲಾ ರಾಮಸ್ವಾಮಿ ದತ್ತಿ ಪ್ರಶಸ್ತಿ(ಪ್ರವಾಸ ಸಾಹಿತ್ಯ)
    ಡಾ. ಕೆ.ವಿ. ರಾಜೇಶ್ವರಿ – ಕಿವಿ – ಕಾಂಗರೂಗಳ ನಡುವೆ
17. ಶ್ರೀಮತಿ ನುಗ್ಗೆಹಳ್ಳಿ ಪಂಕಜ ದತ್ತಿ ಪ್ರಶಸ್ತಿ (ಹಾಸ್ಯ ಕೃತಿ)
    ಶೃತಿ ಗದ್ದೆಗಲ್– ಹಳದಿ ಕ್ಯಾಪ್ ಸುಂದರಿ
18. ಶ್ರೀಮತಿ ಗುಣಸಾಗರಿ ನಾಗರಾಜ್ ದತ್ತಿ ಪ್ರಶಸ್ತಿ(ಮಕ್ಕಳ ಸಾಹಿತ್ಯ)
    ಡಾ. ಲಲಿತಾ ಕೆ. ಹೊಸಪ್ಯಾಟಿ – ನದಿ ನದಿ ಎಲ್ಲಿ ಹೋತು
19. ಶ್ರೀಮತಿ ಇಂದಿರಾ ವಾಣಿರಾವ್ ದತ್ತಿ ಪ್ರಶಸ್ತಿ (ನಾಟಕ)
    ಅಕ್ಷತಾ ರಾಜ್ ಪೆರ್ಲ – ನೆಲ ಉರುಳು
20. ತ್ರಿವೇಣಿ ಸಾಹಿತ್ಯ ಪುರಸ್ಕಾರ (ಸುಧಾ ಮೂರ್ತಿ ಪ್ರಾಯೋಜಿತ
    ಎ.ಜಿ. ರತ್ನ ಕಾಳೇಗೌಡ – ಪಂಚಾಯತಿ ಅಧ್ಯಕ್ಷೆ ಪುಟ್ಟಕ್ಕ
21. ಶ್ರೀಮತಿ ಜಯಮ್ಮ ಕರಿಯಣ್ಣ ದತ್ತಿ ಪ್ರಶಸ್ತಿ (ಸಂಶೋಧನೆ)
    ಡಾ. ವಿದುಷಿ ಶ್ಯಾಮಲಾ ಪ್ರಕಾಶ್ – ಮಾತಿನೊಳಗಣ ಧಾತು

**3. ಕರ್ನಾಟಕ ಲೇಖಕಿಯರ ಸಂಘದ 2025ನೆಯ ಸಾಲಿನ ವಾರ್ಷಿಕ ದತ್ತಿ ಪ್ರಶಸ್ತಿ ಪುರಸ್ಕೃತರು**

1. ಶ್ರೀಮತಿ ಕೆ.ಟಿ. ಬನಶಂಕರಮ್ಮ ದತ್ತಿ ಪ್ರಶಸ್ತಿ – (ಶಿಕ್ಷಕಿ ಹಾಗೂ ಲೇಖಕಿ)
    ಬಿ.ಟಿ. ಗೀತಾ ಮಂಜು, ದಾವಣಗೆರೆ
2. ಶ್ರೀಮತಿ ಶ್ರೀಲೇಖಾ ದತ್ತಿ ಪ್ರಶಸ್ತಿ (ಅನುವಾದ)
    ಭೂಮಿಕಾ ಆರ್. – ಜೊರಾಮಿ
3. ಶ್ರೀಮತಿ ಭಾಗ್ಯ ನಂಜಪ್ಪ ದತ್ತಿ ಪ್ರಶಸ್ತಿ (ವಿಜ್ಞಾನ ಸಾಹಿತ್ಯ)
    ಡಾ. ಸುಕನ್ಯಾ ಸೂನಗಹಳ್ಳಿ–ಕಬ್ಬಿನ ಸಿಹಿ ವರ್ಧಿಸಿದ ಅಮ್ಮ–ಡಾ. ಜಾನಕಿ ಅಮ್ಮಾಳ್

4. ಶ್ರೀಮತಿ ಜಿ.ವಿ. ನಿರ್ಮಲ ದತ್ತಿ ಪ್ರಶಸ್ತಿ (ಅನುವಾದ)
ವೀಣಾ ಮುರಳೀಧರ್ – ಚಿನ್ನಮಣಿಯ ಜಗತ್ತು
5. ಶ್ರೀಮತಿ ಉಷಾ. ಪಿ. ರೈ ದತ್ತಿ ಪ್ರಶಸ್ತಿ (ಕಾವ್ಯ)
ಪ್ರಜ್ಞಾ ಮತ್ತಿಹಳ್ಳಿ – ಬೆಳದಿಂಗಳ ಸೋನೆಮಳೆ
6. ಶ್ರೀಮತಿ ನಾಗರತ್ನ ಚಂದ್ರಶೇಖರ್ ದತ್ತಿ ಪ್ರಶಸ್ತಿ (ಲಲಿತ ಪ್ರಬಂಧ)
ಸುಚಿತ್ರಾ ಹೆಗಡೆ – ಮಿಂಚುಹುಳದ ದಾರಿ
7. ಡಾ. ಬಿ. ಸಿ. ಶೈಲಾ ನಾಗರಾಜ್ ದತ್ತಿ ಪ್ರಶಸ್ತಿ (ಕಾವ್ಯ)
ಮಮತಾ ಅರಸೀಕೆರೆ – ಗಾಯಗಳಿಗೆ ವಿದಾಯ ಹೇಳಬೇಕು
8. ಶ್ರೀಮತಿ ಸಂಕಮ್ಮ ಜಿ.ಎಸ್. ಬ್ಯಾಡಗಿ ದತ್ತಿ ಪ್ರಶಸ್ತಿ (ಕಾವ್ಯ)
ಅನಿತಾ ಪಿ. ತಾಕೊಡೆ – ಮೇಣಕ್ಕಂಟಿದ ಬತ್ತಿ
9. ಶ್ರೀ ಜಯ ಕಲಕೋಟಿ ದತ್ತಿ ಪ್ರಶಸ್ತಿ (ವಚನ ಸಾಹಿತ್ಯ)
ಇಂದಿರಾ ಮೋಟೆಬೆನ್ನೂರ – ಬಸವಣ್ಣ ಬರುವಾಗ ಬಿಸಿಲು ಬೆಳದಿಂಗಳು
10. ಶ್ರೀಮತಿ ಸುಶೀಲಾ ಸೋಮಶೇಖರ್ ದತ್ತಿ ಪ್ರಶಸ್ತಿ (ವಚನ ಸಾಹಿತ್ಯ)
ದಾಕ್ಷಾಯಣಿ ಜಯದೇವಪ್ಪ – ದಾಕ್ಷಾಯಣಿ ವಚನಗಳು
11. ಶ್ರೀಮತಿ ಲಕ್ಷ್ಮಿದೇವಮ್ಮ ದತ್ತಿ ಪ್ರಶಸ್ತಿ (ಕಥೆ)
ಕುಸುಮಾ ಆಯರಹಳ್ಳಿ – ಕಪಿಲೆ ಕಂಡ ಕತೆಗಳು
12. ಶ್ರೀಮತಿ ನಿರುಪಮಾ ದತ್ತಿ ಪ್ರಶಸ್ತಿ (ಕಥೆಗಳು)
ಡಿಜಿಟಲ್ ಮಾಧ್ಯಮ: ಡಾ. ಭವ್ಯ ಅಶೋಕ್ ಸಂಪಗಾರ – ಗುಡ್ಡದ ತಿರುವು
ಮುದ್ರಣ ಮಾಧ್ಯಮ: ದೀಪಿಕಾ ಚಾಟೆ – ಚಿಗುರಿದ ಆತ್ಮವಿಶ್ವಾಸ
13. ಶ್ರೀಮತಿ ಪ್ರೇಮಾ ಭಟ್ ಮತ್ತು ಎ. ಎಸ್. ಭಟ್ ದತ್ತಿ ಪ್ರಶಸ್ತಿ (ಲೇಖಕಿ/ ಪ್ರಕಾಶಕಿ)
ಡಾ. ಆರ್. ಪೂರ್ಣಿಮಾ
14. ಶ್ರೀಮತಿ ತ್ರಿವೇಣಿ ದತ್ತಿ ಪ್ರಶಸ್ತಿ (ಕಥಾ ಸಂಕಲನ)
ಪ್ರಥಮ ಬಹುಮಾನ : ವಿಜಯಶ್ರೀ ಹಾಲಾಡಿ – ಉಮ್ಮಲ್ತಿ ಗುಡಿಯ ಸಾಕ್ಷಿ
ದ್ವಿತೀಯ ಬಹುಮಾನ: ಎಡೆಯೂರು ಪಲ್ಲವಿ – ಕುಂಡದ ಬೇರು
ತೃತೀಯ ಬಹುಮಾನ: ಪೂರ್ಣಿಮಾ ಭಟ್ಟ – ಕತೆ ಜಾರಿಯಲ್ಲಿರಲಿ
15. ಶ್ರೀಮತಿ ಕಾಕೋಳು ಸರೋಜಮ್ಮ ದತ್ತಿ ಪ್ರಶಸ್ತಿ(ಕಾದಂಬರಿ)
ಫೌಜಿಯಾ ಸಲೀಂ – ಹರ್ಷರಾಗ
16. ಶ್ರೀಮತಿ ಕಮಲಾ ರಾಮಸ್ವಾಮಿ ದತ್ತಿ ಪ್ರಶಸ್ತಿ(ಪ್ರವಾಸ ಸಾಹಿತ್ಯ)
ಡಾ. ಡಿ. ಮಂಗಳಾ ಪ್ರಿಯದರ್ಶಿನಿ – ನಾ ಕಂಡ ಉಗಾಂಡ
17. ಶ್ರೀಮತಿ ನುಗ್ಗೆಹಳ್ಳಿ ಪಂಕಜ ದತ್ತಿ ಪ್ರಶಸ್ತಿ (ಹಾಸ್ಯ ಕೃತಿ)
ನಳಿನಿ ಟಿ. ಭೀಮಪ್ಪ – ನಾಕೊಂದ್ಲ ನಾಕು

18. ಶ್ರೀಮತಿ ಗುಣಸಾಗರಿ ನಾಗರಾಜ್ ದತ್ತಿ ಪ್ರಶಸ್ತಿ(ಮಕ್ಕಳ ಸಾಹಿತ್ಯ)
ಮೀನಾ ಮೈಸೂರು – ಸೂರ್ಯನ ಸೆರೆ

19. ಶ್ರೀಮತಿ ಇಂದಿರಾ ವಾಣಿರಾವ್ ದತ್ತಿ ಪ್ರಶಸ್ತಿ (ನಾಟಕ)
ವಿನುತಾ ಹಂಚಿನಮನಿ – ಅಪರಾಜಿತೆಯರು

20. ತ್ರಿವೇಣಿ ಸಾಹಿತ್ಯ ಪುರಸ್ಕಾರ (ಕಾದಂಬರಿ– ಸುಧಾ ಮೂರ್ತಿ ಪ್ರಾಯೋಜಿತ)
ಜ. ನಾ. ತೇಜಶ್ರೀ – ಜೀವರತಿ

21. ಶ್ರೀಮತಿ ಜಯಮ್ಮ ಕರಿಯಣ್ಣ ದತ್ತಿ ಪ್ರಶಸ್ತಿ (ಸಂಶೋಧನೆ)
ಲಕ್ಷ್ಮಿದೇವಿ ಶಾಸ್ತ್ರಿ–ರಾಯಚೂರು ಕೋಟೆಗೆ ನರಬಲಿ

ವಾರ್ಷಿಕ ದತ್ತಿ ಪ್ರಶಸ್ತಿಗಳಿಗಾಗಿ ಅರ್ಹ ಕೃತಿಗಳನ್ನು ಪ್ರೊ. ಕೆ.ವೈ. ನಾರಾಯಣಸ್ವಾಮಿ, ಜಿ.ಎನ್.ಮೋಹನ್. ಡಾ.ಎನ್. ಗಾಯತ್ರಿ ಮತ್ತು ಪ್ರೊ. ಸೆಲ್ವಕುಮಾರಿ ಅವರನ್ನು ಒಳಗೊಂಡ ತೀರ್ಪುಗಾರರ ಸಮಿತಿ ಆಯ್ಕೆ ಮಾಡಿತು.


ಸಂಯುಕ್ತ ಕರ್ನಾಟಕ

ಲೇಖಕಿಯರ ಸಂಘದ ಸ್ವಂತ ಕಟ್ಟಡಕ್ಕೆ ಸಿಎಂಗೆ ಮನವಿ: ಡಾ.ಆರ್.ಸುನಂದಮ್ಮ

2024–25ನೇ ಸಾಲಿನ ದತ್ತಿ ಪ್ರಶಸ್ತಿ ಪುರಸ್ಕೃತರು

ನಯನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ ಲೇಖಕಿಯರಿಗೆ ವಾರ್ಷಿಕ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

# 12. ಕಾವ್ಯ ಕಮ್ಮಟ –2026





ಕರ್ನಾಟಕ ಲೇಖಕಿಯರ ಸಂಘ ಮತ್ತು ಸಮತಾ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಮೈಸೂರಿನಲ್ಲಿ ದಿನಾಂಕ 31/05/2026 ಮತ್ತು 1/06/2026 ರಂದು, ಎರಡು ದಿನಗಳ ಕಾವ್ಯ ಕಮ್ಮಟ ಆಯೋಜಿಸಲಾಗಿತ್ತು.

ಈ ಕಮ್ಮಟದ ನಿರ್ದೇಶಕರಾಗಿದ್ದ ಹಿರಿಯ ಕವಯಿತ್ರಿ ಪ್ರತಿಭಾ ನಂದಕುಮಾರ್‌ರವರು ಪೂರ್ಣ ಜವಾಬ್ದಾರಿ ಹೊತ್ತು ಕಮ್ಮಟವನ್ನು ಯಶಸ್ವಿಯಾಗಿ ನಿರೂಪಿಸಿದರು. ಮೊದಲ ದಿನ 31/05/2026 ರಂದು ಮೊದಲ ಗೋಷ್ಠಿಯಲ್ಲಿ ಕಾವ್ಯ ಎಂದರೇನು? ಎಂದು ಚರ್ಚಿಸುವ ಸಂವಾದ ಕಾರ್ಯಕ್ರಮ ಮೂಲಕ ಕಾವ್ಯ ಕಮ್ಮಟವನ್ನು ಪ್ರಾರಂಭಿಸಿದರು.

ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಿಗಿಂತ ಕವನ–ಕಾವ್ಯ ಹೇಗೆ ಭಿನ್ನ ಎಂದರೆ ಒಂದನ್ನ ಹೇಳುತ್ತಾ ಇನ್ನೊಂದನ್ನು ಧ್ವನಿಸುವುದೇ ಕಾವ್ಯ. ಆಧುನಿಕ ಕಾವ್ಯದಲ್ಲಿ ಲಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿರದಿದ್ದರೂ ಲಯ ಮತ್ತು ಧ್ವನಿ ಕವನದಲ್ಲಿ ಅಂತರ್ಗತವಾಗಿರುವುದು. ಪ್ರತಿಕವಿಯೂ ಹೇಗೆ ಭಿನ್ನವೋ ಹಾಗೇ ಒಬ್ಬೊಬ್ಬರದೂ ಒಂದೊಂದು ರೀತಿಯ ಅಭಿವ್ಯಕ್ತಿ. ಅದೂ ಭಿನ್ನವಾಗಿರುತ್ತದೆ. ಕವನ ಕಟ್ಟುವಿಕೆಯಲ್ಲಿ ಪದಬಳಕೆ ಮತ್ತು ಕಟ್ಟುವಿಕೆ ಎಷ್ಟು ಬಿಗಿಯಾಗಿರಬೇಕೆಂದರೆ ಅದು ಎಲ್ಲಿಯೂ ಯಾವುದೂ ಅನಗತ್ಯವಾಗಿರಬಾರದು. ಇತ್ತೀಚಿನ ದಿನಗಳಲ್ಲಿ ಶ್ರೇಷ್ಠತೆಯ ವ್ಯಸನ ಸಾಹಿತ್ಯದಲ್ಲಿ ಬಹು ಚರ್ಚಿತ ವಿಷಯವಾಗಿದೆ. ಕವನವೆಂಬುದು ನಮ್ಮ ಒಳಗಿನಿಂದು ಒದ್ದು ಬರಬೇಕೇ ಹೊರತು ಕೃತಕ ಪದಜೋಡಣೆಯಾದರೆ ರುಚಿಸುವುದಿಲ್ಲ. ಕವನ ಬರೆಯುವ ಪ್ರಕ್ರಿಯೆ ಯಾರನ್ನೋ ಮೆಚ್ಚಿಸುವುದಕ್ಕಾಗಿಯೋ, ಯಾವುದೇ ಪ್ರಶಸ್ತಿ ಪುರಸ್ಕಾರಗಳಿಗಾಗಿಯೋ ಮಾತ್ರ ಮೀಸಲಾಗದೆ ನನಗೋಸ್ಕರ ನಾನು ಬರೆದುಕೊಳ್ಳುವಂತಾದರೆ, ಎಲ್ಲ ಬಂಧನ–ಸರಪಳಿಗಳಿಂದ ಮುಕ್ತವಾಗಿ ಕವನ ಬರೆದರೆ ಅದು ಎಲ್ಲ ವರ್ಗದವರನ್ನೂ ಮುಟ್ಟುವ ಕವನವಾಗುತ್ತದೆ. ಕವನ ರಚನೆಯಲ್ಲಿ ಉಪಯೋಗಿಸುವ ಭಾಷೆ ಸಭ್ಯ – ಅಸಭ್ಯ ಭಾಷೆಯ ಕಟ್ಟುಪಾಡುಗಳಿಗೆ ಸಿಲುಕದೆ ಸಾರ್ವತ್ರಿಕವಾಗಿ–ಸಾರ್ವಜನಿಕವಾಗಿ ವಿಷಯಗಳನ್ನು ಹೇಳಿದರೆ ಅಂತಹವು ಉತ್ಕೃಷ್ಟ ಕಾವ್ಯವಾಗುತ್ತದೆ. ಇದರೊಂದಿಗೆ ಲೋಕಾನುಭವಗಳೇ (ಏಕಾ)ಸ್ವಾನುಭವಗಳಾಗಿ ಅಭಿವ್ಯಕ್ತಿಗೊಂಡರೆ ಕಾವ್ಯದ ಶಕ್ತಿ ಹೆಚ್ಚಿರುತ್ತದೆ. ಅನೇಕ ರೀತಿಯ ಕಾವ್ಯಗಳಿದ್ದರೂ ದಲಿತ ಕಾವ್ಯದಲ್ಲಿ ತನ್ನ ಕಥೆಯನ್ನು ತಾನೇ ಹೇಳಿಕೊಳ್ಳುವುದರ ಮೂಲಕ ಅತ್ಯಂತ ಭೀಕರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿವೆ ಎಂದು ತಿಳಿಸಿದರು.

ನಂತರದಲ್ಲಿ ಪತ್ರಿಕೆಗಳನ್ನು ಕೊಟ್ಟು, ಇದನ್ನು ಓದಿ, ಯಾವುದಾದರೂ ಕಾಡುವ ವಿಷಯವನ್ನು ಆಯ್ಕೆಮಾಡಿಕೊಂಡು ಕವನ ಕಟ್ಟುವ ಅಭ್ಯಾಸವನ್ನು ಮಾಡಿ ಎಂದು ಹೇಳುವ ಮೂಲಕ ಸ್ಥಳದಲ್ಲಿಯೇ ಕವಿತೆ ರಚಿಸುವಂತೆ ಹೇಳಿ, ಅದನ್ನು ವಿಶ್ಲೇಷಣೆ ಮಾಡಿದರು. ಶಿಬಿರಾರ್ಥಿಗಳೆಲ್ಲರೂ ಉತ್ಸಾಹದಿಂದ ಈ ಅಭ್ಯಾಸದಲ್ಲಿ ಪಾಲ್ಗೊಂಡು ಎಲ್ಲರೂ ಒಂದೊಂದು ಕವನ ರಚಿಸಿ ಆ ಕವನಗಳನ್ನು ವಾಚಿಸಿದರು.

ಆನಂತರದಲ್ಲಿ ಮಹಿಳಾ ಕಾವ್ಯ ಕುರಿತು ಒಂದಷ್ಟು ಸಂವಾದ ನಡೆಸಿದರು. ಸರ್ವತಂತ್ರ ಸ್ವತಂತ್ರವಾಗಿ, ಎಲ್ಲವನ್ನೂ ಮೀರಿ ಬರೆಯುವುದು, ಮಹಿಳೆಯರು ಸಮಾನತೆಯಿಂದ, ಕಟ್ಟುಪಾಡುಗಳಿಲ್ಲದೆ ಬರೆಯುವ ಸ್ವೇಚ್ಛೆ ಇರಬೇಕು. ಸಮಾಜದಿಂದ, ಎಲ್ಲ ಮಾತುಗಳಿಂದ ಮುಕ್ತಗೊಂಡು ಬರೆಯಬೇಕು. ಅದರಲ್ಲೂ ಮಹಿಳೆಯರ ದೇಹದ ಕುರಿತು, ಬದುಕಿನ ಕುರಿತು ಬದಲಾದ ಚಿಂತನೆ, ಯೋಚನೆ ಎಲ್ಲವೂ ಬದಲಾದಂತೆ ಕವನ ರಚನೆಯೂ ಇತ್ತೀಚೆಗೆ ಬದಲಾಗುತ್ತಿದೆ. ಸ್ತ್ರೀ ಕಾವ್ಯಕ್ಕೆ ಇಲ್ಲಿಯವರೆಗೂ ಒಳ್ಳೆಯ ವಿಮರ್ಶೆ ಸಿಕ್ಕಿಲ್ಲ. ಪುರುಷರ ನವೋದಯ ಕಾವ್ಯ ಕಾಲವೇ ಮಹಿಳೆಯರ ಬಂಡಾಯ ಕಾವ್ಯ ಮತ್ತು ಕಾಲ. 1910ರಿಂದ ಅಂದಾಜು ಮಹಿಳಾ ಕಾವ್ಯ ಕಾಲ, ಬೆಳಗೆರೆ ಜಾನಕಮ್ಮನವರಿಂದ ಪ್ರಾರಂಭವಾದ

ಸ್ತ್ರೀ ವಿಮೋಚನಾ ಕಾಲ, ಅಲ್ಲಿಂದ 100 ವರ್ಷಗಳಲ್ಲಿ ಮಹಿಳಾ ಕಾವ್ಯ ಅನೇಕ ದಾರಿಗಳನ್ನು, ಕಾವ್ಯ ಕಾಲವನ್ನೂ ಹಾದು ಬಂದಿದೆ. ಕಾವ್ಯ ಕಟ್ಟುವಿಕೆ ಕೂಡ ಶಿಲ್ಪ ಕಡೆಯುವಿಕೆಯಂತೆ. ಕಾವ್ಯ ಕೌಶಲ್ಯವನ್ನು ಕರಗತ ಮಾಡಿಕೊಳ್ಳಬೇಕು. ಹೆಣ್ಣಿನ ಕವನ ಹೆಣ್ಣಿನ ಅನುಭವಗಳಿಂದ ಒಡಗೂಡಿ ಅಭಿವ್ಯಕ್ತಿಯಾದಾಗ ಮಾತ್ರ ಅವಳ ಕಾವ್ಯ ಕುಶಲತೆ ಪರಿಪಕ್ವಗೊಳ್ಳುತ್ತದೆ. ಮಹಿಳಾ ಕಾವ್ಯ ಕ್ಷೇತ್ರವನ್ನು ಪುರುಷ ಸಮುದಾಯ ಎಂದೂ ಮಹಿಳಾ ದೃಷ್ಟಿಕೋನದಿಂದ ನೋಡಿರದ ಕಾರಣ ಅದನ್ನು ಅಡುಗೆಮನೆ ಕಾವ್ಯವೆಂದು ಕಡೆಗಣಿಸಿದ್ದಾರೆ. ಆದರೂ ಮಹಿಳಾ ಕಾವ್ಯ-ಕನ್ನಡದಲ್ಲಿ ಮಹಿಳಾ ಅಭಿವ್ಯಕ್ತಿ ಮಾಧ್ಯಮವಾಗಿ ರೂಪುಗೊಂಡಿದೆ. ಅಕ್ಕಮಹಾದೇವಿಯಿಂದ ಮೊದಲ್ಗೊಂಡು ಎಲ್ಲ ಕೀರ್ತನಕಾರ್ತಿಯರು, ತತ್ವಪದಕಾರ್ತಿಯರು, ವಚನಕಾರ್ತಿಯರು, ಅಧ್ಯಾತ್ಮದ ಮುಸುಕಿನಿಂದ ಹೊರಬಂದು ರೂಪಕ-ಉಪಮೆಗಳಲ್ಲಿ ಮಹಿಳೆಯರು ತಂತಮ್ಮ ಕಾಲದ ಸಂಕಷ್ಟಗಳನ್ನು, ಬದುಕಿನ ರೀತಿನೀತಿಗಳನ್ನು ಒಳಗೊಂಡ ಕಾವ್ಯ ರಚಿಸುತ್ತಾ, ಅಭಿವ್ಯಕ್ತಿಗೊಳಿಸುತ್ತಾ ತಮ್ಮನ್ನು ತಾವು ಬಿಡುಗಡೆಗೊಳಿಸಿಕೊಂಡಿದ್ದಾರೆ. ಕವನವನ್ನು ಪ್ರಸ್ತುತಪಡಿಸುವುದೂ ಒಂದು ರೀತಿಯ ಕಲೆ. ಆದರೆ ಕನ್ನಡದಲ್ಲಿ ಕಾವ್ಯ ಪ್ರಸ್ತುತಿಗಾಗಿ ಇರುವ ವೇದಿಕೆಗಳು ಬಹಳ ವಿರಳ.

ಮೊದಲ ದಿನದ ಇಷ್ಟೆಲ್ಲ ವಿಷಯಗಳ ಚರ್ಚೆ, ಅನುಸಂಧಾನದ ನಂತರ ವಿಶೇಷ ಆಹ್ವಾನಿತರಾಗಿ ಬಂದಿದ್ದ ಕವಿ ನಂದಿನಿ ಹೆದ್ದುರ್ಗ ತಮ್ಮ ಕವನದ ರಚನೆಗೆ ಆವರಿಸಿರುವ ವಿಷಯಗಳನ್ನು ಕುರಿತು ಮಾತನಾಡಿದರು. ಕವನ ರಚನೆಗೆ ಏಕಾಂತವೇ ಬೇಕಂತೇನಿಲ್ಲ, ಜಾತ್ರೆಯ ಜಂಜಾಟದಲ್ಲಿಯೂ ಕವಿತೆ ಹುಟ್ಟುತ್ತದೆ, ಕನ್ನಡ ಕಾವ್ಯದಲ್ಲಿ ಪುರುಷರ ನೋವುಗಳು ಕವನವಾಗಿ ಹೊರಹೊಮ್ಮಿದಾಗ ಸಿಕ್ಕ ಗೌರವಗಳು, ಮಹಿಳೆಯರ ನೋವು ಕಾವ್ಯವಾಗಿ ರೂಪುಗೊಂಡಾಗ, ಆ ಕಾವ್ಯಕ್ಕೆ ಅಷ್ಟೊಂದು ಗೌರವ ಮಾನ್ಯತೆಗಳು ಸಿಕ್ಕಿಲ್ಲ ಎಂದು ತಮ್ಮ ಜೀವನಾನುಭವಗಳನ್ನು ಶಿಬಿರಾರ್ಥಿಗಳೊಂದಿಗೆ ಸಂವಾದಿಸುತ್ತಾ ಅಂದಿನ ಕಮ್ಮಟವನ್ನು ಮುಗಿಸಿದರು.

ಎರಡನೆಯ ದಿನ 1/06/2026ರಂದು ಬೆಳಗ್ಗೆ 9.00 ಗಂಟೆಗೆ ಪ್ರಾರಂಭವಾದ ಗೋಷ್ಠಿಯಲ್ಲಿ ಪ್ರತಿಭಾರವರು ಕನ್ನಡ ಕಾವ್ಯ ಪರಂಪರೆಯ ಮೇರು ಶಿಖರಗಳಾದ ಪುತಿನ, ಬೇಂದ್ರೆ, ಕುವೆಂಪು, ಅಡಿಗರ ಕಾವ್ಯ ಕಟ್ಟುವಿಕೆಯ ರೀತಿಗಳನ್ನು ವಿಶ್ಲೇಷಿಸುತ್ತಾ ಕಾವ್ಯ ರಚನೆಗೆ ಬೇಕಾದ ಕಲ್ಪನಾ ಲೋಕದ ವಿಸ್ತಾರವಾದ ಮನಸ್ಸು, ಪದ ಭಂಡಾರ, ಶಬ್ದ ಸಂಪತ್ತು, ಕಾವ್ಯಕ್ಕೆ ನೀಡುವ ಮಾಂತ್ರಿಕತೆಯ ಸ್ಪರ್ಶ ಇವೆಲ್ಲವುದರ ಬಗ್ಗೆ ಹೇಳಿದರು. ಹಾಗೇ ಕವಿಗೆ ಸ್ವವಿಮರ್ಶೆ ಎಷ್ಟು ಮುಖ್ಯ, ಕವಿಗೆ ತನ್ನೊಳಗಿನ ಕವಿತ್ವವನ್ನು ಸದಾ ಕಾಪಾಡಿಕೊಳ್ಳುವುದು ಹೇಗೆ ಮುಖ್ಯ ಎಂದು ಕೂಡ ತಿಳಿಸಿದರು. ಕವಿತೆ ಒಂದು ಚಳುವಳಿಯಾಗಿರಬಹುದು, ಧೋರಣೆಯಾಗಬಹುದು, ಪ್ರತಿಭಟನೆ ಕೂಡ ಆಗಬಹುದು. ಹಾಗೇ ಕವಿತೆಗಳು ಆಯಾ ಕಾಲಘಟ್ಟದ ಮನಸ್ಥಿತಿಗಳು, ಬದುಕಿನ ಆಯ್ಕೆಗಳು, ಹಾಗೇ ಒಂದು ಸಮೂಹದ, ಸಮಾಜದ ಪ್ರತಿಧ್ವನಿಯೂ ಆಗಿ ಆಯಾ ಕಾಲಘಟ್ಟದಲ್ಲಿ

ದಾಖಲೀಕರಣಗೊಳ್ಳುತ್ತಿರುತ್ತಲೇ ಅವೆಲ್ಲವೂ ಇತಿಹಾಸವನ್ನು ಸೇರುತ್ತಿರುತ್ತವೆ. ಒಂದೊಂದು ಕವನವೂ ಭರವಸೆಯ ಬೇಸಾಯ. ಹಾಗೇ ಪ್ರತಿಭಟನೆ ಎನ್ನುವುದು ಇತಿಹಾಸದ ಭಾಗವಾದಂತೆ ಮಹಿಳಾ ಕಾವ್ಯ ಭಾಗವೂ ಇತಿಹಾಸದ ಭಾಗವಾಗಿರುತ್ತದೆ. 50–60 ವರ್ಷಗಳ ಕಾವ್ಯ ಸಾಹಿತ್ಯವನ್ನು ಅಭ್ಯಸಿಸಿದರೆ ಅಂದು ಅನೇಕ ವಿಷಯಗಳನ್ನು ನೇರವಾಗಿ ಹೇಳದೆ ಉಪಮೆ, ರೂಪಕಗಳ ಮೂಲಕ ಹೇಳುತ್ತಿದ್ದರು. ಇಂದು ನೇರವಾಗಿ, ನಿರ್ಭಿಡೆಯಿಂದ, ನಿರ್ದಾಕ್ಷಿಣ್ಯವಾಗಿ ಹೇಳುವುದು ಇಂದಿನ ದಿನಮಾನದ ಟ್ರೆಂಡ್ ಎಂದು ಹೇಳಿದರು. ಸಂತೋಷವೇ ಕಾವ್ಯಾಸ್ವಾದನೆಯ ವಿಶೇಷ. ಕಾವ್ಯದ ಸಾಧ್ಯತೆಗಳಿಗೆ ಮಿತಿಗಳೆಂಬುದೇ ಇಲ್ಲ. ಅದು ವಿವಿಧ ಶೈಲಿಗಳಲ್ಲಿ ಇರಬಹುದು. ಹಾಡಬಹುದು, ನೃತ್ಯ ಮಾಡಬಹುದು ಎಂದು ಹೇಳುತ್ತಾ, ಕವಿಯ ದೃಷ್ಟಿಯಿಂದ ನಡೆದ ಕಮ್ಮಟವಿದು, ವಿಮರ್ಶಕರ ದೃಷ್ಟಿಯಿಂದ ನಡೆದ ಕಮ್ಮಟವಲ್ಲ. ಸಮಾನ ಲಿಂಗತ್ವವಾಗಿ ಕವಿ ಯೋಚನೆ ಮಾಡುವುದನ್ನು ರೂಢಿಸಿಕೊಳ್ಳಬೇಕು ಹಾಗೇ ಕವಿ ಕಾವ್ಯಕ್ಕೆ ಬದ್ಧನಾಗಿರಬೇಕು ಎಂದರು. ಸಮಕಾಲೀನ ಕವಿಗಳಿಗಿರುವ ಜವಾಬ್ದಾರಿಗಳ ಬಗ್ಗೆ ಹೇಳುತ್ತಾ ಕಾವ್ಯಕಮ್ಮಟವನ್ನು ಮುಗಿಸಿದರು. ಆನಂತರ ಕಾವ್ಯಕಮ್ಮಟದಲ್ಲಿ ಶಿಬಿರಾರ್ಥಿಗಳಿಂದ ಕವನ ವಾಚನ ಮತ್ತು ಕಾವ್ಯ ಕಮ್ಮಟದ ಬಗ್ಗೆ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ಸಂಗ್ರಹಿಸಲಾಯಿತು. ಮಧ್ಯಾಹ್ನ ನಾಲ್ಕು ಗಂಟೆಯ ನಂತರ ಸಮತಾ ಅಧ್ಯಯನ ಕೇಂದ್ರ ಹಮ್ಮಿಕೊಂಡಿದ್ದ ಡಾ. ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀಮತಿ ಅನುಪಮಾ ಪ್ರಸಾದ್‌ರವರ ಚೋದ್ಯ ಕಥಾ ಸಂಕಲನಕ್ಕೆ ಪ್ರಶಸ್ತಿ ನೀಡಿದ್ದು, ಶ್ರೀಮತಿ ಪ್ರತಿಭಾನಂದ ಕುಮಾರ್‌ರವರು ಪ್ರಶಸ್ತಿ ಪ್ರದಾನ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಡಾ. ಸಬಿಹಾ ಭೂಮಿಗೌಡ, ಮುಖ್ಯ ಅತಿಥಿಗಳಾಗಿ, ಖ್ಯಾತ ಕಥೆಗಾರರಾದ ಶ್ರೀ ಸ್ವಾಮಿ ಪೊನ್ನಾಚಿ ಮತ್ತು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರು ಹಾಗೂ ಸಮತಾ ಅಧ್ಯಯನ ಕೇಂದ್ರದ ಕಾರ್ಯದರ್ಶಿಗಳೂ ಆದ ಡಾ. ಆರ್. ಸುನಂದಮ್ಮನವರು ಹಾಗು ಸಮತಾ ಅಧ್ಯಯನ ಕೇಂದ್ರದ ಪದಾಧಿಕಾರಿಗಳು ಭಾಗವಹಿಸಿದ್ದರು.

**– ಮಾನಸ ಚಂದ್ರಿಕಾ ವಿ.ಎಂ.**

# 13. ಮಂಡ್ಯ ಜಿಲ್ಲಾ ಲೇಖಕಿಯರ ಸಮ್ಮೇಳನ





ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು ಮತ್ತು ಕರ್ನಾಟಕ ಲೇಖಕಿಯರ ಸಂಘ, ಜಿಲ್ಲಾ ಘಟಕ ಮಂಡ್ಯ ಇವರ ಸಹಭಾಗಿತ್ವದಲ್ಲಿ ದಿನಾಂಕ 27 ಮತ್ತು 28, 2026 ರಂದು ನಡೆದ ಜಿಲ್ಲಾ ಲೇಖಕಿಯರ ಸಮ್ಮೇಳನ ಅದ್ದೂರಿಯಾಗಿ, ಯಶಸ್ವಿಯಾಗಿ ನಡೆಯಿತು. ಮಹಾದ್ವಾರ ಮಳವಳ್ಳಿ ಸುಂದರಮ್ಮನವರ ಹೆಸರಿನಲ್ಲಿದ್ದರೆ ಪ್ರಧಾನ ವೇದಿಕೆ ತ್ರಿವೇಣಿಯವರ ಹೆಸರಿನಲ್ಲಿತ್ತು. ಸಮ್ಮೇಳನದ ಸರ್ವಾಧ್ಯಕ್ಷರಾದ ನಿವೃತ್ತ ಐ.ಎ.ಎಸ್. ಅಧಿಕಾರಿ ಡಾ. ಟಿ.ಸಿ. ಪೂರ್ಣಿಮಾರನ್ನು  ಜಿಲ್ಲಾಧ್ಯಕ್ಷರಾದ ಶ್ರೀಮತಿ ಮೀರಾ ಶಿವಲಿಂಗಯ್ಯ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರಲ್ಲದೇ ಮೆರವಣಿಗೆಯಲ್ಲೂ ಜೊತೆಯಾದರು.  ರೈತ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಮೆರವಣಿಗೆಗೆ ಚಾಲನೆ ದೊರೆಯಿತು. ಮೆರವಣಿಗೆಯನ್ನು ಮುಖ್ಯ ಅತಿಥಿಗಳಾಗಿದ್ದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಶ್ರೀಮತಿ ಮನುಜಶ್ರೀ ವೈ.ಸಿ. ಮತ್ತು ಮಂಡ್ಯ ನಗರಸಭೆಯ ಪೌರಾಯುಕ್ತರಾದ ಪಂಪಾಶ್ರೀ ಯು.ಪಿ. ಅವರು ಡೋಲು ಬಾರಿಸುವ ಮೂಲಕ ಉದ್ಘಾಟನೆ ಮಾಡಿದರು. ಮೆರವಣಿಗೆಯಲ್ಲಿ ಮೂರು ಜಾನಪದ ತಂಡಗಳು

ಭಾಗವಹಿಸಿದ್ದವು. ಮಾರುತಿ ಪ್ರಸನ್ನರವರ ನೇಗಿಲಯೋಗಿ ಮಹಿಳಾ ಡೊಳ್ಳುಕುಣಿತದವರಿಂದ ಡೊಳ್ಳು ಕುಣಿತ, ವಿನಾಯಕ ಮಹಿಳಾ ಕೋಲಾಟ ತಂಡದಿಂದ ಕೋಲಾಟ, ಕೀರ್ತಿನಿರಾಜ್ ಮತ್ತು ತಂಡದವರಿಂದ ಪೂಜಾಕುಣಿತಗಳು ಮೆರವಣಿಗೆಯ ರಂಗು ಹೆಚ್ಚಿಸಿದವು. ಜಾನಪದ ತಂಡಗಳು ಕೋಲಾಟವಾಡುತ್ತಾ, ನರ್ತಿಸುತ್ತಾ, ಡೊಳ್ಳು ಬಾರಿಸುತ್ತಾ ಸಾಗುತ್ತಿದ್ದರು. ಹಿಂದೆ ಖ್ಯಾತ ಲೇಖಕಿಯರ ಭಾವಚಿತ್ರಗಳನ್ನು ಹಿಡಿದ ಮಹಿಳೆಯರು ಸಾಗುತ್ತಿದ್ದಂತೆ ಮಂಡ್ಯದ ಮುಖ್ಯ ಬೀದಿಗಳಲ್ಲಿ ನಿಂತು ಜನರು ಸಂಭ್ರಮದಿಂದ ಮೆರವಣಿಗೆಯನ್ನು ವೀಕ್ಷಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿ ಸುಮಾ ಸತೀಶ್ ಅವರು ಮಾಡಿದರು. ಮದ್ದೂರಿನ 'ಕಬ್ಬಿನ ಜಲ್ಲೆ' ತಂಡದವರಿಂದ ನಾಡಗೀತೆಯ ಮುಖಾಂತರ ಸಮಾರಂಭಕ್ಕೆ ಚಾಲನೆ ದೊರೆಯಿತು. ಡಾ.ಎಂ. ಕೆಂಪಮ್ಮ ವೇದಿಕೆಯ ಮೇಲಿದ್ದ ಗಣ್ಯರನ್ನು ಪರಿಚಯಿಸುತ್ತಾ ಎಲ್ಲರಿಗೂ ಸ್ವಾಗತ ಕೋರಿದರು. ಕರ್ನಾಟಕ ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ಡಾ. ಆರ್. ಸುನಂದಮ್ಮ ಆಶಯ ನುಡಿಗಳನ್ನಾಡುತ್ತಾ ಕಲೇಸಂ ಸ್ತ್ರೀಪರ ಕೆಲಸಗಳನ್ನು ಮಾಡುವಲ್ಲಿ ಹಾಗೂ ಸಾಹಿತ್ಯ ಬೆಳೆಸುವಲ್ಲಿ ಹೆಚ್ಚು ಒತ್ತು ನೀಡುತ್ತಿರುವ ಬಗ್ಗೆ ಹೇಳಿದರು. ದೀಪವನ್ನು ಬೆಳಗಿ ಸಮ್ಮೇಳನವನ್ನು ಡಾ. ಪದ್ಮಾ ಶೇಖರ್ ಉದ್ಘಾಟಿಸಿದರು. ವೇದಿಕೆಯ ಮೇಲಿದ್ದ ಗಣ್ಯರೆಲ್ಲ ಕೈಜೋಡಿಸಿದರು.

## ಪುಸ್ತಕ ಮಳಿಗೆ

ಅಂಬೇಡ್ಕರ್ ಭವನದಲ್ಲಿ ಮಂಡ್ಯದ ಗ್ರಾಮ್ಯ ಸಂಸ್ಕೃತಿಯನ್ನು ಬಿಂಬಿಸುವ 'ಪುಸ್ತಕ ಮನೆ' ಎಲ್ಲರ ಗಮನ ಸೆಳೆಯಿತು. ಸಗಣಿ ಸಾರಿಸಿದ ನೆಲದ ಮೇಲೆ ನಗುತ್ತಿದ್ದ ದೊಡ್ಡ ರಂಗೋಲಿ, ಹಸಿರು ತೋರಣ, ಮುಂದೆ ಅಳುಗುಳಿಮನೆ ಆಟ ಆಡುತ್ತಿದ್ದ ಮಹಿಳೆಯರು, ರಾಗಿಕಲ್ಲಿನಲ್ಲಿ ರಾಗಿ ಬೀಸುತ್ತಿದ್ದವರು, ಒರಳುಕಲ್ಲಿನಲ್ಲಿ ಬತ್ತ ಕುಟ್ಟುತ್ತಿದ್ದವರು, ಒನಕೆಯಿಂದ ಕುಟ್ಟುತ್ತಿದ್ದವರು, ಪಕ್ಕದಲ್ಲೇ ನಿಲ್ಲಿಸಿದ್ದ ಹಸು, ಇತ್ತ ಮೇಯುತ್ತಿದ್ದ ಮೇಕೆ ಕರ್ನಾಟಕದ ಗ್ರಾಮೀಣ ಪರಿಸರಕ್ಕೆ ಕರೆದೊಯ್ದುವು. ಒಳಗೆ ಕಾಲಿಡುತ್ತಿದ್ದಂತೆ ಜೋಡಿಸಿಟ್ಟ ಪುಸ್ತಕಗಳು, ಮಧ್ಯೆ ಪುಟ್ಟ ವೇದಿಕೆಯ ಮೇಲೆ ಪುಸ್ತಕಗಳ ಮೇಲೆ ಇಟ್ಟ ಲಾಂದ್ರ, ಪಕ್ಕಕ್ಕೆ ಓದುತ್ತಾ ಕುಳಿತ ಹುಡುಗಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದಾಶಯದ ಪ್ರತಿಬಿಂಬವಾಗಿದ್ದರು. ಹಿಂದಿನವರೆಲ್ಲ ಕಂದೀಲಿನ ಬೆಳಕಿನಲ್ಲಿ ಓದಿದ್ದನ್ನು ಸಂಕೇತಿಸುವಂತೆ ಎಲ್ಲೆಲ್ಲೂ ಕಂದೀಲುಗಳು ಬೆಳಕು ಚೆಲ್ಲುತ್ತಿದ್ದವು. ಪುಸ್ತಕ ಮಳಿಗೆಯನ್ನು ಸಣ್ಣಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ರಘುನಂದನ್ ಅವರು ಉದ್ಘಾಟಿಸಿದರು. ಪುಸ್ತಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸಲಹೆ ನೀಡಿದರು. ಪುಸ್ತಕಗಳನ್ನು ಓದಲು, ಕೊಳ್ಳಲು ಇಲ್ಲಿ ಅವಕಾಶವಿತ್ತು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಡಾ. ಪದ್ಮಾ ಶೇಖರ್ ಮಂಡ್ಯದಿಂದಲೇ ಮಹಿಳಾ ಮೀಸಲಾತಿ ಹಕ್ಕೊತ್ತಾಯವಾಗಲಿ ಎಂದು ಕರೆ ನೀಡಿದರು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಮಹಿಳೆಯರು ಎಲ್ಲಾ ಆಯಾಮಗಳಲ್ಲೂ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಇವನ್ನು ವಿಮರ್ಶೆಗೆ ಒಳಪಡಿಸುವ ಅಗತ್ಯವಿದೆ. ಈ ಕಾರ್ಯವನ್ನು ಲೇಖಕಿಯರ ಸಂಘ ಮಾಡಿದರೆ ಲೇಖಕಿಯರಿಂದ ಇನ್ನೂ ಉತ್ತಮ ಕೃತಿಗಳು ಮೂಡಿ ಬರುತ್ತವೆ. ಲೇಖಕಿಯರಿಗೆ ಬಹುಶಿಸ್ತೀಯ ವೇದಿಕೆ ಸೃಷ್ಟಿಸಿದರೆ ಸಮಸ್ಯೆಗಳನ್ನು ಅಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇದು ರಾಷ್ಟ್ರಮಟ್ಟದಲ್ಲೂ ಅಭಿಪ್ರಾಯ ವ್ಯಕ್ತಪಡಿಸುವಂತಿರಬೇಕು. ಅದಕ್ಕಾಗಿ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳಾ ಮೀಸಲಾತಿ ಹಕ್ಕೊತ್ತಾಯ ಮಂಡನೆ ಸಮ್ಮೇಳನದ ಈ ವೇದಿಕೆಯಿಂದಲೇ ಆರಂಭವಾಗಲಿ ಎಂದು ಒತ್ತಾಯಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಟಿ.ಸಿ. ಪೂರ್ಣಿಮಾ ತಮ್ಮ ಸುದೀರ್ಘ ಭಾಷಣದಲ್ಲಿ ಅನೇಕ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸುತ್ತಾ ಮಹಿಳಾಪರ ನಿಲುವುಗಳನ್ನು ಪ್ರತಿಪಾದಿಸಿದರು. ನೈತಿಕ ಪ್ರಜ್ಞೆಯುಳ್ಳ ಸಂಸ್ಕೃತಿ, ಸಂಸ್ಕಾರಗಳತ್ತ ಯುವಜನತೆಯನ್ನು ಹೊರಳಿಸುವ ಮೂಲಕ ಯುವ ಜನಾಂಗದಿಂದ ಹೊಸ ಸಾಹಿತ್ಯ ರಚನೆ ಮತ್ತು ಹಳೆಯ ಸಾಹಿತ್ಯದ ಓದನ್ನು ಹೆಚ್ಚಿಸುವುದು ನಮ್ಮ ಬಹುದೊಡ್ಡ ಜವಾಬ್ದಾರಿಯಾಗಿದೆ. ಸಮಾಜದಲ್ಲಿ ಹೆಚ್ಚುತ್ತಿರುವ ಅಪರಾಧಗಳ ಸಂಖ್ಯೆಯ ಮೇಲೆ ತೀವ್ರ ನಿಗಾ ಇರಿಸುವ ಮತ್ತು ಅಪರಾಧಗಳನ್ನು ತಡೆಯುವ ಕೆಲಸಗಳಾಗಬೇಕು. ಇವೆಲ್ಲ ಸಾಹಿತ್ಯ ವಲಯದ ಜವಾಬ್ದಾರಿಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಸಮಾಜದಲ್ಲಿ ಹೆಚ್ಚುತ್ತಿರುವ ಮರ್ಯಾದಾ ಹತ್ಯೆ ಮತ್ತು ಕೌಟುಂಬಿಕ ದೌರ್ಜನ್ಯಗಳ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದರು. ಅತ್ಯಾಚಾರ ಸಹಿತ ಕೊಲೆ, ಅಂತಸ್ತುಗಳ ತಾರತಮ್ಯವಿರುವ ಪ್ರೇಮ ವಿವಾಹ ಪ್ರಕರಣಗಳಲ್ಲಿ ಕುಟುಂಬದ ಗೌರವವನ್ನು ಉಳಿಸಿಕೊಳ್ಳುವ ಭರದಲ್ಲಿ ನಡೆಯುವ ಮರ್ಯಾದಾ ಹತ್ಯೆ ಮತ್ತು ಹೊಂದಾಣಿಕೆಯ ಲೋಪದಿಂದಾಗುವ ಕೌಟುಂಬಿಕ ದೌರ್ಜನ್ಯ, ಆತ್ಮಹತ್ಯೆ ಮತ್ತು ಹತ್ಯೆಯಂತಹ ವಿಕೃತಿ, ದುಷ್ಕೃತ್ಯ ವ್ಯಸನಗಳು ಹೆಚ್ಚಾಗುತ್ತಿವೆ. ಸಂಸಾರಗಳಲ್ಲಿ ಸಂಯಮ, ಸಹಿಷ್ಣುತೆ ಮತ್ತು ಮಾನಸಿಕ ಸ್ಥಿಮಿತ ಮರೆಯಾಗುತ್ತಿದೆ. ಇದರಿಂದಾಗುವ ಅವಘಡಗಳಿಗೆ ಹೆಣ್ಣುಮಕ್ಕಳು ಬಲಿಯಾಗುತ್ತಿರುವುದು ಆತಂಕಕಾರಿ ಸಂಗತಿ ಎಂದು ಆತಂಕ ವ್ಯಕ್ತಪಡಿಸಿದರು. ಪುರುಷರ ಮೇಲೆ ಮಹಿಳೆಯರಿಂದಾಗುವ ದೌರ್ಜನ್ಯಗಳ ಬಗ್ಗೆ ಪ್ರಸ್ತಾಪಿಸುತ್ತಾ ಕಾನೂನಿನ ದುರುಪಯೋಗದ ಬಗ್ಗೆ ಕಳವಳದಿಂದ ಮಾತನಾಡಿದರು. ಪುರುಷ ದ್ವೇಷವನ್ನು ಪ್ರೇರೇಪಿಸುವ ಸಾಹಿತ್ಯ ನಿಲ್ಲಬೇಕು. ಇದಕ್ಕಾಗಿ ಜಾಗೃತಿಯ ಜೊತೆಗೆ ವಿಕೃತಿಯಿಂದ ಜನಸಾಮಾನ್ಯರನ್ನು ಅದರಲ್ಲೂ ಯುವಜನಾಂಗವನ್ನು ವಿಮುಖಗೊಳಿಸಬೇಕು. ಇದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಸಾಮಾಜಿಕ ಹೊಣೆಯನ್ನು ನೆನಪಿಸಿದರು.

ಮಂಡ್ಯದ ಗ್ರಾಮೀಣ ಸೊಗಡಿನ ಭಾಷೆ, ಜಾನಪದ ಕಾವ್ಯ ಕಥನಗಳು, ಅವುಗಳನ್ನು ಜೀವಂತವಾಗಿಡುವಲ್ಲಿ ಹಾಗೂ ಕನ್ನಡಕ್ಕೆ ಕೊಡುಗೆಯಾಗಿ ಕೊಡುವಲ್ಲಿ ಮಂಡ್ಯದ ಜನತೆಯ ಪಾತ್ರ ಮಹತ್ತರವಾಗಿದೆ ಎಂದರು.

ಕರ್ನಾಟಕ ಲೇಖಕಿಯರ ಸಂಘದಿಂದ ನಡೆಯುತ್ತಿರುವ ಈ ಐತಿಹಾಸಿಕ ಸಮ್ಮೇಳನ ಮಂಡ್ಯ ಜಿಲ್ಲೆಯ ಪ್ರಥಮ ಸಮ್ಮೇಳನವೆಂಬ ದಾಖಲೆ ನಿರ್ಮಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ ಶ್ರೀಮತಿ ಮೀರಾ ಶಿವಲಿಂಗಯ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದು ದಾಖಲೆಯಾಗಿದೆ ಎಂದು ಅಭಿಮಾನದಿಂದ ಹೇಳಿದರು. ಇದುವರೆಗೂ ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಚುಕ್ಕಾಣಿಯನ್ನು ಹಿಡಿಯುವ ಅವಕಾಶ ಮಹಿಳೆಗೆ ಒದಗಿ ಬಂದಿಲ್ಲ. ಮುಂದಿನ ಚುನಾವಣೆಯಲ್ಲಿ ಸಮರ್ಥ ಲೇಖಕಿಯೊಬ್ಬರು ರಾಜ್ಯ ಕ.ಸಾ.ಪ.ದ ಅಧ್ಯಕ್ಷರಾಗುವಂತಾಗಲಿ. ಅದರಲ್ಲೂ ಮಂಡ್ಯ ಜಿಲ್ಲೆಯವರಿಗೆ ಆ ಹೆಬ್ಬಾಗಿಲು ತೆರೆದುಕೊಳ್ಳಲಿ ಎಂಬ ಆಶಯ ವ್ಯಕ್ತಪಡಿಸಿದರು.

ಸಮ್ಮೇಳನದ ಸ್ಮರಣ ಸಂಚಿಕೆ "ಧೀಮಂತೆ"ಯನ್ನು ಬಿಜಾಪುರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಸಬಿಹಾ ಭೂಮಿಗೌಡ ಅವರ ಪ್ರಧಾನ ಸಂಪಾದಕತ್ವದಲ್ಲಿ ಹೊರತರಲಾಗಿದೆ. ಜಿಲ್ಲೆಗೆ ಸಂಬಂಧಿಸಿದ ಎಲ್ಲವನ್ನೂ ಸೇರಿಸಿ ಸಂಚಿಕೆಯನ್ನು ಭಿನ್ನವಾಗಿ ರೂಪಿಸಲಾಗಿದೆ. ಅದರ ಸ್ವರೂಪದ ಕುರಿತು ಮಾತನಾಡಿದ ಸಬಿಹಾ ಅವರು, ಸಂಚಿಕೆಯನ್ನು ಆರು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಜಿಲ್ಲೆಯ 23 ಕೃತಿಗಳನ್ನು ಆಯ್ಕೆ ಮಾಡಲಾಗಿದೆ. ಜಾನಪದ, ಸಂಗ್ರಹ, ವಿಮರ್ಶೆ, ರಂಗಭೂಮಿ, ಮಹಿಳೆಯರ ಭಿನ್ನ ಸ್ತರಗಳ ಬಗ್ಗೆ ಉಲ್ಲೇಖ, ಕ್ರೀಡಾರಂಗ, ನಾಗರಿಕ ಸೇವೆ, ಕೃಷಿ, ಗಾರ್ಮೆಂಟ್ಸ್, ರಾಜಕೀಯ ಸೇರಿದಂತೆ ಎಲ್ಲವನ್ನೂ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಸಂಗ್ರಹ ಯೋಗ್ಯವಾದ ಸಂಚಿಕೆಯಲ್ಲಿ ಜಿಲ್ಲೆಯ ಬಹುಪಾಲು ಮಾಹಿತಿ ಲಭ್ಯವಾಗುತ್ತದೆ. ಮಂಡ್ಯದ ಜನರ ಬಗ್ಗೆ ಮಾತನಾಡುತ್ತಾ ಅವರು ಮಂಡ್ಯದ ಜನರಲ್ಲಿ ಧಾರಾಳತನ ಜಾಸ್ತಿ. ಅದು ತನ್ನ ಕ್ಷೇತ್ರದ ಗಡಿಯನ್ನು ದಾಟಿ ವಿಸ್ತರಿಸಿಕೊಳ್ಳುವ ಎಲ್ಲ ನೆಲೆಗಳನ್ನೂ ಒಳಗೊಂಡಿದೆ ಎಂದರು.

ಇದನ್ನು ಕರ್ನಾಟಕ ಲೇಖಕಿಯರ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಡಾ. ಎಚ್.ಎಲ್. ಪುಷ್ಪಾ ಬಿಡುಗಡೆ ಮಾಡಿದರು. ಅವರು ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ಮೋಸ, ವಂಚನೆ, ಕೊಲೆ ಪ್ರಕರಣಗಳನ್ನು ಗಮನಿಸಿದಾಗ ಇಂದಿನ ಸಮಾಜ ಯಾವ ದಿಕ್ಕಿಗೆ ಸಾಗುತ್ತಿದೆ? ಮಾಧ್ಯಮಗಳು ನಮ್ಮ ಹಿಂದೆ ನಿಂತು ಬೇಟೆಯಾಡುತ್ತಿರುವುದನ್ನು ಗಮನಿಸಿ ಮುನ್ನಡೆಯಬೇಕಿದೆ. ಸಾಮಾಜಿಕ ಮಾಧ್ಯಮದ ಲೆಕ್ಕಾಚಾರದಲ್ಲಿ ಜೀವನ ನಡೆಯುತ್ತಿದ್ದು ಪ್ರಚಾರ, ಅಪಪ್ರಚಾರ ಸಿಗುತ್ತಿದೆ. ತಪ್ಪಿ ಹೋದ ಕಾನೂನಿನ ನಿಯಂತ್ರಣ, ಇವುಗಳಿಂದ ಏನು ಬೇಕಾದರೂ ಮಾಡಿ ಜಯಿಸಬಹುದು ಎಂಬ ಸನ್ನಿವೇಶ ಸೃಷ್ಟಿಯಾಗಿದೆ ಎಂದು ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಡಾ. ಮಂಜುಳಾ ಹುಲ್ಲಹಳ್ಳಿ ಮಾತನಾಡಿ ಬರೆದಷ್ಟೂ ಬರವಣಿಗೆಯ ಮೌಲ್ಯ ಹೆಚ್ಚಾಗುತ್ತದೆ. ಮಂಡ್ಯದ ಮಣ್ಣು ಬರವಣಿಗೆಯನ್ನು ಪ್ರೋತ್ಸಾಹಿಸುತ್ತದೆ. ಜಿಲ್ಲೆಯ ಸವಿ ಸಕ್ಕರೆ, ಬೆಲ್ಲ, ಬೆಟ್ಟ ಗುಡ್ಡ, ಪ್ರವಾಸಿ ತಾಣಗಳು, ದೇಗುಲಗಳ ವಾತಾವರಣ, ಇಲ್ಲಿನ ಪ್ರಕೃತಿ ಸೌಂದರ್ಯ ಜೀವನೋತ್ಸಾಹ ನೀಡುತ್ತದೆ ಎಂದು ಮಂಡ್ಯದ ಗುಣವನ್ನು ಹೊಗಳಿದರು. ಪ್ರೊ. ಶ್ರೀಲತಾ ಎಂ. ಅವರಿಂದ ವಂದನಾರ್ಪಣೆ ನಡೆಯಿತು.

## ಗೋಷ್ಠಿ 1, ಕಾವ್ಯಸಮಯ

ಖ್ಯಾತ ಲೇಖಕಿ ಹಾಗೂ ಶಿವಮೊಗ್ಗದ ನಿವೃತ್ತ ಪ್ರಾಧ್ಯಾಪಕಿಯಾದ ಡಾ.ಸಬಿತಾ ಬನ್ನಾಡಿಯವರು ಆಯ್ದ ಕವಿತೆಗಳ ವಿಶ್ಲೇಷಣೆ ಮಾಡಿದರು. ಭವಾನಿ ಲೋಕೇಶ, ಲತಾ ಮನೋಹರ್, ಡಾ.ರಮ್ಯಾ ಎನ್., ಆಶಾ ಹನಿಯಂಬಾಡಿ, ಡಾ.ತೇಜಸ್ವಿನಿ ಟಿ.ವಿ., ದಿವ್ಯಜ್ಯೋತಿ ಎಂ.ಕೆ.ಯವರು ಖ್ಯಾತ ಕವಯಿತ್ರಿಯರ ಆಯ್ದ ಕವಿತೆಗಳನ್ನು ಓದಿದರು. ಸಬಿತಾ ಮಾತನಾಡುತ್ತಾ ದೇಹ ರಾಜಕಾರಣದ ಬಗ್ಗೆ ಹೇಳಿದರು. ಚಂಡಶಾಸನ ಎಂಬ ಕವಿತೆಯಲ್ಲಿ ಬೆಳಗೆರೆ ಜಾನಕಮ್ಮ 'ಅಲ್ಲಯ್ಯ, ನಾವು ಮಾತ್ರ ಯಾಕೆ ಹೆರಬೇಕು? ಗಂಡಸರ್‍ಯಾಕಿಲ್ಲ?' ಎಂದು ದೇವರಿಗೇ ಪ್ರಶ್ನೆ ಮಾಡುತ್ತಾರೆ. ಸವಿತಾ ನಾಗಭೂಷಣರ 'ತಂಗಿ ಹುಟ್ಟಿದಳು', ಎಮ್.ವಿ.ಭಾಗ್ಯಲಕ್ಷ್ಮಿಯವರ 'ಕ್ರಿಯೆ, ಪ್ರತಿಕ್ರಿಯೆ', ಪ್ರತಿಭಾ ನಂದಕುಮಾರ್‌ರ 'ಅವರು ಪುರಾವೆಗಳನ್ನು ಕೇಳುತ್ತಾರೆ', ಕೆ. ಷರೀಫಾ ಅವರ 'ಬುರ್ಖಾ ಪ್ಯಾರಡೈಸ್' ಇತ್ಯಾದಿ ಕವಿತೆಗಳನ್ನು ಸಬಿತಾ ಬನ್ನಾಡಿಯವರು ಸೊಗಸಾಗಿ ವಿಶ್ಲೇಷಿಸಿದರು.

## ಗೋಷ್ಠಿ 2, ಮಹಿಳಾ ಆತ್ಮಕಥೆಗಳು

ಬೆಂಗಳೂರಿನ ಹಿರಿಯ ಪತ್ರಕರ್ತೆ ಭಾರತಿ ಹೆಗಡೆಯವರು 'ಸಿನಿಮಾ, ರಂಗಭೂಮಿ ಕ್ಷೇತ್ರದ ಆತ್ಮಕಥೆಗಳು' ಎಂಬ ವಿಷಯವನ್ನು ಸೊಗಸಾಗಿ ಮಂಡಿಸಿದರು. ಸಿನಿಮಾ, ರಾಜಕೀಯ, ರಂಗಭೂಮಿ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡಿರುವ ಮಹಿಳೆಯರ ಆತ್ಮಕಥನಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಿಲ್ಲ ಎಂದು ವಿಷಾದ ವ್ಯಕ್ತಪಡಿಸುತ್ತಾ ಹಲವು ಆತ್ಮಕಥನಗಳನ್ನು ವಿಶ್ಲೇಷಿಸಿದರು.

ತುಮಕೂರಿನ ಡಾ. ಆಶಾ ಬಗ್ಗನಡು ಅವರು "ರಾಜಕೀಯ ಕ್ಷೇತ್ರದ ಮಹಿಳೆಯರ ಆತ್ಮಕಥೆಗಳು"ಎಂಬ ವಿಷಯವನ್ನು ಮಂಡಿಸುತ್ತಾ ಮುಂದಿನ ಪೀಳಿಗೆಗೆ ಆತ್ಮಕಥೆಗಳು ಆಕ್ಸಿಜನ್ ಇದ್ದಂತೆ ಎನ್ನುತ್ತಾ ಆತ್ಮಕಥೆಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು. ರಾಜಕೀಯದಲ್ಲಿ ಮಹಿಳೆಯರ ಆತ್ಮಕಥೆಗಳು ತುಂಬಾ ಕಡಿಮೆ ಎನ್ನುತ್ತಾ ಮೋಟಮ್ಮನವರ ಆತ್ಮಕಥೆಯ ಉದಾಹರಣೆ ಕೊಟ್ಟರು.

ಮಹಿಳಾ ಸಾಹಿತಿಗಳ ಆತ್ಮಕಥೆಗಳ ಬಗ್ಗೆ ಸೊಗಸಾಗಿ ವಿಷಯ ಮಂಡಿಸಿದ ಶ್ವೇತಾ ಎಂ.ಯು.ರವರು ಕನ್ನಡದ ಮಹಿಳಾ ಸಾಹಿತಿಗಳ ಆತ್ಮಕಥೆಗಳನ್ನೆಲ್ಲ ಹೆಸರಿಸಿದರು.

ಕವಿಗೋಷ್ಠಿಯ ಉದ್ಘಾಟನೆಯನ್ನು ಮಂಡ್ಯದ ವಿಶ್ರಾಂತ ಪ್ರಾಂಶುಪಾಲರಾದ ಪಕ್ಷಿಪ್ರೇಮಿ ಡಾ.ಲೀಲಾ ಅಪ್ಪಾಜಿ ಮಾಡಿದರು. ಬೆಂಗಳೂರಿನ ಹಿರಿಯ ಲೇಖಕಿ ಡಾ.ಕೆ. ಷರೀಫಾ ಅವರು ಅಧ್ಯಕ್ಷತೆ ವಹಿಸಿದ್ದರು. ಸುಮಾರು ಇಪ್ಪತ್ತು ಜನ ಕವಯಿತ್ರಿಯರು ಭಾಗವಹಿಸಿ ತಮ್ಮ ಕವನಗಳನ್ನು ಓದಿದರು. ಅಧ್ಯಕ್ಷೆ ಕೆ. ಷರೀಫಾ ಅವರು ಎಲ್ಲ ಕವಿತೆಗಳನ್ನೂ ಉಲ್ಲೇಖಿಸುತ್ತಾ ಅವುಗಳ ಸೊಗಡನ್ನು ಬಿಡಿಸಿ ಹೇಳಿದರು.

ಸಂಚೆರಂಗ, ಮೈಸೂರು ತಂಡದಿಂದ "ಬೆಲ್ಲದ ದೋಣಿ"ಎಂಬ ನಾಟಕ ಪ್ರದರ್ಶನ ನಡೆಯಿತು. ಜೀತ ಪದ್ಧತಿಯನ್ನು ವಿರೋಧಿಸುವ, ಜಾತಿ ಪದ್ಧತಿ ಹಾಗೂ ಮೇಲ್ವರ್ಗದವರ ದಬ್ಬಾಳಿಕೆಯನ್ನು ಖಂಡಿಸುವ ನಾಟಕ ಉತ್ತಮವಾಗಿ ನಟಿಸಿದ ಪಾತ್ರವರ್ಗದಿಂದ ಯಶಸ್ವಿಯಾಯಿತು.

## ಗೋಷ್ಠಿ 3, ಸಮಕಾಲೀನ ತಲ್ಲಣಗಳು

ಭಾನುವಾರ, ಮೂರನೇ ಗೋಷ್ಠಿಯಲ್ಲಿ ಮೈಸೂರಿನ ಜೆ.ಎಸ್.ಎಸ್.ಕಾಲೇಜಿನ ಪ್ರಾಧ್ಯಾಪಕರಾದ ಡಾ. ಕುಮುದಿನಿ ಅಚ್ಚಿಯವರು "ಹದಿಹರಯದ ಹೆಣ್ಣುಮಕ್ಕಳ ಸಮಸ್ಯೆಗಳು"ಎಂಬ ವಿಷಯವನ್ನು ತುಂಬಾ ಚೆನ್ನಾಗಿ ಮಂಡಿಸಿದರು. ಮೂರು ವರ್ಷದ ಮಗುವಿನಿಂದಲೇ ಲೈಂಗಿಕ ಜ್ಞಾನವನ್ನು ಮಗುವಿನಲ್ಲಿ ಬೆಳೆಸುವುದು ತುಂಬಾ ಅಗತ್ಯವಾಗಿದೆ ಎನ್ನುತ್ತಾ ಮಕ್ಕಳಿಗೆ ಲೈಂಗಿಕ ಶಿಕ್ಷಣದ ಬಗ್ಗೆ ಅರಿವು ಮೂಡಿಸುವಲ್ಲಿ ಪೋಷಕರು, ಶಿಕ್ಷಕರು ವಿಫಲರಾಗಿದ್ದಾರೆ. ಪೋಷಕರು ದುಡಿಮೆಯಲ್ಲಿ ನಿರತರಾಗಿದ್ದರೆ ಶಿಕ್ಷಕರು ಪಠ್ಯ ವಿಷಯಗಳಿಗಷ್ಟೇ ಮಕ್ಕಳನ್ನು ಸೀಮಿತಗೊಳಿಸಿದ್ದಾರೆ. ಲೈಂಗಿಕ ಶಿಕ್ಷಣದ ಬಗ್ಗೆ ಅರಿವು ಮೂಡಿಸುವವರೇ ಇಲ್ಲವಾಗಿದೆ. ಇದಕ್ಕಾಗಿ ಪ್ರತಿ ಐದು ಶಾಲೆಗಳಿಗೆ ಒಬ್ಬರಂತೆ ಲೈಂಗಿಕ ಶಿಕ್ಷಣ ತರಬೇತುದಾರರನ್ನು ನೇಮಿಸಿಕೊಂಡು ವಾರದಲ್ಲಿ ಒಂದು ಅಥವಾ ಎರಡು ದಿನ ಮಕ್ಕಳಿಗೆ ಲೈಂಗಿಕ ಜ್ಞಾನದ ಬಗ್ಗೆ ತಿಳಿವಳಿಕೆ ಮೂಡಿಸಬೇಕು ಎಂದು ಹೇಳಿದರು.

ಮಂಡ್ಯದ ಮಹಾರಾಜಾ ತಾಂತ್ರಿಕ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಉಷಾರಾಣಿ ಜಿ. ಕ್ಯಾತನಹಳ್ಳಿಯವರು "ಸಾಮಾಜಿಕ ಸಮಸ್ಯೆಯಾಗಿ ಭ್ರೂಣಹತ್ಯೆ"ಎಂಬ ವಿಷಯ ಮಂಡನೆ ಮಾಡುತ್ತಾ ಭ್ರೂಣಹತ್ಯೆಯ ಅಮಾನವೀಯ ಮಗ್ಗಲುಗಳನ್ನು ಕಾರಣಗಳನ್ನು ತಿಳಿಯಪಡಿಸಿದರು. ಹೆಣ್ಣು ಭ್ರೂಣಹತ್ಯೆಯಲ್ಲಿ ತೊಡಗಿರುವಂಥ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂಥ ಕಾನೂನುಗಳು ಜಾರಿಯಲ್ಲಿದ್ದರೂ ಅವುಗಳು ಪರಿಣಾಮಕಾರಿಯಾಗಿ ಜಾರಿಯಾಗದಿರುವುದರಿಂದ ಭ್ರೂಣದ ಹಂತದಲ್ಲೇ ಹೆಣ್ಣನ್ನು ಕೊಲ್ಲಲಾಗುತ್ತಿದೆ. ಪಾಂಡವಪುರದ ಆಲೆಮನೆಯೊಂದರಲ್ಲಿ ನಡೆದ ಹೆಣ್ಣು ಭ್ರೂಣಹತ್ಯೆಕೋರರಿಗೆ ಇದುವರೆಗೂ ಶಿಕ್ಷೆಯಾಗಿಲ್ಲ. ಭ್ರೂಣಹತ್ಯೆ ಸಮಯದಲ್ಲಿ ಎಷ್ಟೋ ಹೆಣ್ಣುಮಕ್ಕಳು ಸಾವಿಗೀಡಾದರೂ ಅದು ಬೆಳಕಿಗೆ ಬರಲೇ ಇಲ್ಲ ಎಂದು ಬೇಸರದಿಂದ ಹೇಳಿದರು.

ಬೆಂಗಳೂರಿನ ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾದ ಡಾ. ಪ್ರತಿಭಾ ಆರ್. ಅವರು 'ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳೆಯರು' ಎಂಬ ವಿಷಯದ ಬಗ್ಗೆ ಮಾತನಾಡಿದರು. ಕರ್ನಾಟಕದಲ್ಲಿ ಕೃಷಿಯ ನಂತರ ಹೆಣ್ಣುಮಕ್ಕಳು ಹೆಚ್ಚಾಗಿ ತೊಡಗಿಸಿಕೊಂಡದ್ದು ಗಾರ್ಮೆಂಟ್ಸ್ ಉದ್ಯಮದಲ್ಲಿ. ಸುಮಾರು 3 ರಿಂದ 4 ಲಕ್ಷ ಮಹಿಳೆಯರು ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿದ್ದಾರೆ. ಅವರಿಗೆ ಇನ್ನೂ ತೀರಾ ಕನಿಷ್ಠ ವೇತನ ದೊರೆಯುತ್ತಿದೆ ಎಂದು ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲಿದರು. ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ರಜೆ ಅತ್ಯವಶ್ಯಕವಾಗಿದೆ. ಆಗಲೇ ಒಡಿಶಾ ಮತ್ತು ಬಿಹಾರ ರಾಜ್ಯಗಳು ಮುಟ್ಟಿನ ರಜೆಯನ್ನು ನೀಡುತ್ತಿವೆ. ಕರ್ನಾಟಕ ಸರಕಾರವು ವೇತನ ಸಹಿತ ಮುಟ್ಟಿನ ರಜೆ ನೀಡುವಂತೆ ಆದೇಶ ಹೊರಡಿಸಿದೆ. ಆದರೆ ಕೆಲವು ಮಾಲೀಕರು ಮತ್ತು ಉದ್ಯಮಿಗಳು ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಈಗ ಮುಟ್ಟಿನ ರಜೆಯ ದುರುಪಯೋಗದ ಆರೋಪಗಳು ಕೇಳಿ ಬರುತ್ತಿವೆ. ಮಹಿಳೆಯರು ಅದನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ಬೇಸರದಿಂದಲೇ ಹೇಳಿದರು. ಆ ಸಂದರ್ಭದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಆರ್. ಸುನಂದಮ್ಮ ಮಧ್ಯೆ ಪ್ರವೇಶಿಸಿ 'ಮುಟ್ಟು ವೈಯಕ್ತಿಕ ಸಮಸ್ಯೆಯಲ್ಲ. ಅದು ಸಮಾಜದ ಸಮಸ್ಯೆ. ಉತ್ಪಾದಕರ ಉತ್ಪಾದಕರನ್ನು ಉತ್ಪಾದಿಸುವವಳು ಮಹಿಳೆ. ಅದಕ್ಕಾಗಿ ಸಮಾಜ ಮಹಿಳೆಯರಿಗೆ ಸ್ಪಂದಿಸಬೇಕು' ಎಂದು ಕಿವಿಮಾತು ಹೇಳಿದರು. 'ಕಣ್ಣಿಗೆ ಹೆಚ್ಚು ಶ್ರಮ ಕೊಡುವ ಸೂಕ್ಷ್ಮ ಕೆಲಸಗಳನ್ನು ಮಹಿಳೆಯೇ ಮಾಡುತ್ತಿದ್ದಾಳೆ. ಕರ್ತವ್ಯನಿಷ್ಠೆ ಮತ್ತು ಬದ್ಧತೆಯಲ್ಲಿ ಪುರುಷರನ್ನು ಮೀರಿಸುವಷ್ಟು ಶಕ್ತಿ ಹೊಂದಿದ್ದಾಳೆ. ಮುಟ್ಟಿನ ರಜೆಗೆ ಯಾರೂ ಕಡಿವಾಣ ಹಾಕದೇ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಮುಂದಾಗಬೇಕು' ಎಂದು ಆಗ್ರಹಿಸಿದರು.

## ಸಮಾರೋಪ ಮತ್ತು ಸನ್ಮಾನ ಸಮಾರಂಭ

ಸಮಾರೋಪ ಮತ್ತು ಸನ್ಮಾನ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಆರ್.ಸುನಂದಮ್ಮ ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ಡಾ.ಲತಾ ರಾಜಶೇಖರ್, ಬಿ.ಆರ್. ಪೂರ್ಣಿಮಾ, ಸಮ್ಮೇಳನಾಧ್ಯಕ್ಷರಾದ ಡಾ. ಟಿ.ಸಿ. ಪೂರ್ಣಿಮಾ, ಸುನಂದ ಜಯರಾಂ, ಶ್ರೀಮತಿ ಕೆ.ಎಸ್. ಮಂಜುಳ ಹಾಗೂ ಜಿಲ್ಲಾಧ್ಯಕ್ಷೆ ಶ್ರೀಮತಿ ಮೀರಾ ಶಿವಲಿಂಗಯ್ಯ, ಕರ್ನಾಟಕ ಲೇಖಕಿಯರ ಸಂಘದ ಉಪಾಧ್ಯಕ್ಷರಾದ ಸರ್ವಮಂಗಳ ಮತ್ತು ಕಾರ್ಯದರ್ಶಿ ಸುಮಾ ಸತೀಶ್ ಉಪಸ್ಥಿತರಿದ್ದರು.

ಡಾ.ಲತಾ ರಾಜಶೇಖರ್ ಅವರು, 'ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಆರ್ಥಿಕವಾಗಿ ಮಹಿಳೆ ಮುಂದುವರೆದಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ಬಹಳಷ್ಟು ಸವಾಲುಗಳನ್ನು ಎದುರಿಸುವ ಪ್ರಮೇಯವಿದೆ. ಲೇಖಕಿಯರ ಬಗ್ಗೆ ನಿರ್ಲಕ್ಷ್ಯ, ಅಸಡ್ಡೆತನ ಅಸಮಾನತೆ ಹೆಚ್ಚಾಗಿದೆ. ಇದರಿಂದ ನಾವೆಲ್ಲರೂ ಸಂಘಟಿತ ಹೋರಾಟ ಮಾಡಬೇಕಾಗಿದೆ' ಎಂದು ಒತ್ತಿ ಹೇಳಿದರು. 'ಮಹಿಳೆಗೆ ಸಾಹಿತ್ಯ ಲೋಕದಲ್ಲಿ ಎಷ್ಟು ಗೌರವ ಸಿಗುತ್ತಿದೆ

ಎನ್ನುವುದನ್ನು ಯೋಚನೆ ಮಾಡಬೇಕಿದೆ. ಪ್ರಕಾಶನ ಸಂಸ್ಥೆ, ಪ್ರಶಸ್ತಿ ಸಲ್ಲಿಕೆಯಲ್ಲಿ, ಪಠ್ಯ ಪುಸ್ತಕಗಳ ಸಮಿತಿಯಲ್ಲಿ, ಸಾಹಿತ್ಯ ಅಕಾಡೆಮಿಗಳಲ್ಲಿ ಮಹಿಳೆಯರಿಗೆ ಸೂಕ್ತ ಗೌರವ ಸಿಗುತ್ತಿಲ್ಲ. ಪ್ರಶಸ್ತಿಗೆ ಆಯ್ಕೆ ಮಾಡುವಾಗ ಮಹಿಳಾ ಸಾಹಿತ್ಯವನ್ನು ಪ್ರಶ್ನೆ ಮಾಡುವುದು, ಅಲ್ಲಿ ಇಲ್ಲದಿರುವ ಲೋಪವನ್ನು ಹುಡುಕುವ ಸ್ಥಿತಿ ಈಗಲೂ ಇದೆ. ಅವರನ್ನು ಗುರುತಿಸುವ ಕೆಲಸವನ್ನು ಸಾಹಿತ್ಯ ಅಕಾಡೆಮಿಯಾಗಲಿ, ಸಾಹಿತ್ಯ ಪರಿಷತ್ ಆಗಲಿ, ಸರ್ಕಾರವಾಗಲಿ ಮಾಡುತ್ತಿಲ್ಲ' ಎಂದು ವಿಷಾದಿಸಿದರು.

ರೈತ ಮುಖಂಡರಾದ ಸುನಂದಾ ಜಯರಾಂ ಮಾತನಾಡಿ ನಾವು ಯಾರ ವಿರುದ್ಧವೂ ಮಾತನಾಡುತ್ತಿಲ್ಲ ಅಥವಾ ಶಕ್ತಿಯುತರು ಎಂಬುದನ್ನು ಯಾರ ಎದುರೂ ತೋರಿಸಬೇಕಿಲ್ಲ. ಪುರುಷರು ಮತ್ತು ಮಹಿಳೆಯರಿಗೆ ಬೆಲೆ ಕಟ್ಟಲಾಗುವುದಿಲ್ಲ. ಇಬ್ಬರೂ ಒಂದೇ ಎನ್ನುವ ರೀತಿಯಲ್ಲಿ ನೋಡಬೇಕು. ಎರಡು ದಿನದ ಸಮ್ಮೇಳನದಲ್ಲಿ ಮಹಿಳೆಯರು ಏನು ಎನ್ನುವುದನ್ನು ತೋರಿಸಿದ್ದೇವೆ. ಸಾಹಿತ್ಯ ಲೋಕದಲ್ಲಿ ಎಷ್ಟು ಪ್ರಮುಖರು ಎನ್ನುವುದಕ್ಕೆ ಧೀಮಂತೆ ಎನ್ನುವ ಸ್ಮರಣಿಕೆಯ ಮೂಲಕ ಉತ್ತರ ದೊರಕಿದೆ ಎಂದು ವಿಶ್ವಾಸದಿಂದ ಹೇಳಿದರು.

ಹಾಸನ ಜಿ.ಪಂ. ಸಿ.ಇ.ಓ. ಬಿ.ಆರ್. ಪೂರ್ಣಿಮಾ ಮಾತನಾಡಿ ಹೆಣ್ಣು ಮಕ್ಕಳು ಹೆಚ್ಚಾಗಿ ಓದಿನ ಕಡೆಗೆ ಗಮನ ಹರಿಸಬೇಕು. ವಿದ್ಯಾಭ್ಯಾಸದಿಂದಲೇ ಸಂಸ್ಕಾರ ಬರಲಿದೆ. ಹೊರಗೆ ಹೆಣ್ಣು ಯಾವುದೇ ಅಧಿಕಾರದಲ್ಲಿದ್ದರೂ ಮನೆಯಲ್ಲಿ ಸಂಬಂಧಗಳನ್ನು ಉಳಿಸಿಕೊಂಡು ಹೋಗಬೇಕು. ಇಲ್ಲವಾದರೆ ಸಂಬಂಧಗಳು ಉಳಿಯಲು ಸಾಧ್ಯವಿಲ್ಲ. ಮಹಿಳೆಯರ ಬಗ್ಗೆ ನಿರ್ಲಕ್ಷ್ಯ, ಅಸಮಾನತೆ ಇದೆ. ಆದರೆ ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳೇ ಮುಂದಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳ ಮೌನಕ್ರಾಂತಿ ನಡೆಯುತ್ತಿದೆ. ಮುಂದೆ ಪುರುಷರು ನಮಗೆ ಮೀಸಲಾತಿ ಕೊಡಬೇಕು ಎಂದು ಕೇಳುವ ಪರಿಸ್ಥಿತಿ ಬರಲಿದೆ ಎಂದು ಎಚ್ಚರಿಕೆಯ ಮಾತು ಹೇಳಿದರು.

ಎರಡು ದಿನಗಳ ಕಾಲ ನಡೆದ ಸಮ್ಮೇಳನ ಪಂಚ ನಿರ್ಣಯಗಳಿಗೆ ಸಾಕ್ಷಿಯಾಯಿತು. ಮಂಡ್ಯ ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷರಾದ ಮೀರಾ ಶಿವಲಿಂಗಯ್ಯ ಅವರು ನಿರ್ಣಯಗಳನ್ನು ಮಂಡಿಸಿದರು.

1. ಬಾಲ್ಯವಿವಾಹ, ಭ್ರೂಣಹತ್ಯೆ ಮತ್ತು ಕೌಟುಂಬಿಕ ದೌರ್ಜನ್ಯಗಳನ್ನು ತಡೆಗಟ್ಟಲು ಜಿಲ್ಲಾಡಳಿತ ಟಾಸ್ಕಫೋರ್ಸ ಸಮಿತಿಗಳಿಗೆ ಕಡ್ಡಾಯುವಾಗಿ ಲೇಖಕಿಯುರು ಹಾಗೂ ಹೋರಾಟಗಾರ್ತಿಯರನ್ನು ನೇಮಕ ಮಾಡಬೇಕು.

2. ಮಹಿಳೆಯರ ಮೇಲಿನ ದೌರ್ಜನ್ಯ ಪರಿಶೀಲಿಸಿ ನೀಡಿದ ವರದಿಗೆ ಒತ್ತಡಕ್ಕೆ ಒಳಗಾಗದೇ ತಕ್ಷಣ ನ್ಯಾಯ ಒದಗಿಸಬೇಕು.

3. ದುಡಿಯುವ ಮಹಿಳೆಯರಿಗೆ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಹಿಂಸೆ ತಡೆಗಟ್ಟಲು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಸಮಿತಿ ರಚಿಸಬೇಕು.

4. ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಘಟಕಕ್ಕೆ ಉಚಿತವಾಗಿ ನಿವೇಶನ ಮತ್ತು ಕಟ್ಟಡಕ್ಕೆ ಆರ್ಥಿಕ ನೆರವು ನೀಡಬೇಕು.

5. ಮಂಡ್ಯ ಜಿಲ್ಲೆಯ ಮಹತ್ವದ ಲೇಖಕಿಯರ ಕೃತಿಯ ಸಮಗ್ರ ಸಂಪುಟ ಹಾಗೂ ಎಲ್ಲಾ ಪ್ರಕಾರಗಳ ಕೃತಿ ಸಂಗ್ರಹಿಸಲು ಸ್ಥಳೀಯ ಆಡಳಿತ ಯೋಜನೆ ರೂಪಿಸಬೇಕು.

ಈ ನಿರ್ಣಯಗಳಿಗೆ ಸ್ಥಳದಲ್ಲಿ ಹಾಜರಿದ್ದ ಸ್ಥಳೀಯ ಶಾಸಕರು ಬೆಂಬಲ ಸೂಚಿಸಿದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯಾಧ್ಯಕ್ಷರಾದ ಡಾ. ಆರ್. ಸುನಂದಮ್ಮ ಅವರು, ಕಲೇಸಂನಲ್ಲಿ ನಿರಂತರವಾಗಿ ಕಾರ್ಯಕ್ರಮ ಮಾಡುತ್ತಿದ್ದೇವೆ, ಮುಂದೆಯೂ ಮಾಡುತ್ತೇವೆ. ಇಂತಹ ಕಾರ್ಯಕ್ರಮಗಳು ಸೋದರಿತ್ವ ಕಟ್ಟಲು, ಹೆಣ್ಣು ಮಕ್ಕಳ ಬರವಣಿಗೆ ಪ್ರೋತ್ಸಾಹಿಸಲು, ಅವರನ್ನು ಗುರುತಿಸಲು ಸಹಕಾರಿಯಾಗಿರುತ್ತವೆ. ಪುರುಷರಿಗೆ ನಾವು ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಇನ್ನಿತರ ವೇದಿಕೆಗಳಲ್ಲಿ ಅವಕಾಶ ಕಲ್ಪಿಸುತ್ತಿದ್ದೇವೆ. ಆದರೆ ಈ ರೀತಿಯ ಸಮಾವೇಶ, ವಿಚಾರ ಸಂಕಿರಣ, ಕಮ್ಮಟ, ಗೋಷ್ಠಿಗಳಲ್ಲಿ ಹೆಚ್ಚೆಚ್ಚು ಲೇಖಕಿಯರಿಗೆ ಅವಕಾಶ ಮಾಡುವ ಮೂಲಕ ಅವರಲ್ಲಿ ಸಾಹಿತ್ಯಿಕ ಬಲವರ್ಧನೆ ಮಾಡುವ ಹೊಣೆ ನಮ್ಮದಾಗಿದೆ. ಅದಕ್ಕಾಗಿ ಹೆಚ್ಚೆಚ್ಚು ವೇದಿಕೆ ಸೃಷ್ಟಿಸಬೇಕಿರುವುದರಿಂದ ಮಹಿಳೆಯರನ್ನೇ ಹೆಚ್ಚು ಪ್ರೋತ್ಸಾಹಿಸಿ, ಅವಕಾಶ ನೀಡಲಾಗುತ್ತಿದೆ ಎಂದು ಹೇಳುತ್ತಾ ಕರ್ನಾಟಕ ಲೇಖಕಿಯರ ಸಂಘವು ಲೇಖಕಿಯರನ್ನು ಪ್ರೋತ್ಸಾಹಿಸಲು ಸದಾ ನಿಲ್ಲುತ್ತದೆ ಎಂಬ ಆಶ್ವಾಸನೆ ನೀಡಿದರು.

ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ 12 ಮಹಿಳೆಯರನ್ನು ಈ ಸಮಯದಲ್ಲಿ ಸನ್ಮಾನಿಸಲಾಯಿತು.

ಎರಡು ದಿನಗಳ ಕಾಲ ಮಂಡ್ಯದಲ್ಲಿ ಜಿಲ್ಲಾ ಲೇಖಕಿಯರ ಸಮ್ಮೇಳನ ಯಶಸ್ವಿಯಾಗಿ ಸಂಪನ್ನವಾಯಿತು. ಮಹಿಳೆಯರ ವಿವಿಧ ಸಮಸ್ಯೆಗಳ ಬಗ್ಗೆ ನಡೆದ ಗೋಷ್ಠಿಗಳು, ಮಹಿಳಾ ಸಾಹಿತ್ಯ ಇತ್ಯಾದಿಗಳಿಗೆ ನೂರಾರು ಸಭಿಕರು ಸಾಕ್ಷಿಯಾದರು.

**– ಮಧುರಾ (ಅಲಕಾ) ಕರ್ಣಮ್**



# 14. ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ




ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಜುಲೈ 11 ರಂದು ನಡೆದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಡಾ॥ ವಸುಂಧರಾ ಭೂಪತಿ, ಯಾವುದೇ ಸಂಸ್ಥೆಯ ಚುಕ್ಕಾಣಿ ಹಿಡಿದವರಿಂದ ಆ ಸಂಸ್ಥೆಯ ಉನ್ನತಿ ಅವನತಿಗಳು ಘಟಿಸುತ್ತದೆ. ಸಮರ್ಥ ವ್ಯಕ್ತಿಯಿಂದ ಸಮರ್ಥ ಕಾರ್ಯಕ್ರಮಗಳು ರೂಪುಗೊಳ್ಳಲು ಸಾಧ್ಯ. ಇತ್ತೀಚೆಗೆ ಲೇಖಕಿಯರ ಕಥೆಗಳಲ್ಲಿ ಪ್ರಸ್ತುತ ಸಾಮಾಜಿಕ ತಲ್ಲಣಗಳು ಸಮರ್ಥವಾಗಿ ಮೂಡುತ್ತಿದ್ದು ಆ ಮೂಲಕ ಮಹಿಳಾ ಸಾಹಿತ್ಯ ಮೇಲುಗೈ ಸಾಧಿಸುತ್ತಿರುವುದು ಮಹಿಳೆಯರ ಸಕ್ರಿಯತೆಯನ್ನು ಬಿಂಬಿಸುತ್ತಿದೆ. ಸಾಹಿತ್ಯದಲ್ಲಿ ಇಂದು AIನ ಆತಂಕಕಾರಿ ಬೆಳವಣಿಗೆಯಲ್ಲಿ ಸೃಜನಶೀಲತೆ, ನೈತಿಕತೆ, ಸಾಹಿತ್ಯದ ಪ್ರಶ್ನೆ ಎತ್ತುತ್ತಾ ಸೃಜನಶೀಲ ಲೇಖನಗಳ ಮರುವಿಮರ್ಶೆ ಮಾಡುವಂತೆ ಮಾಡುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾವ್ಯ ವಿಭಾಗದಲ್ಲಿ ಮಾಧವಿ ಭಂಡಾರಿ ಕೆರೆಕೋಣ, ಗದ್ಯ ವಿಭಾಗದಲ್ಲಿ ಶ್ರೀಮತಿ ಬಿ. ಟಿ. ಜಾಹ್ನವಿ, ಸಂಕೀರ್ಣ ವಿಭಾಗದಲ್ಲಿ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ (ಶಿಕ್ಷಣ ಕ್ಷೇತ್ರ) ಅವರ ಸಾಧನೆಗಳಿಗಾಗಿ ಪ್ರಶಸ್ತಿ ನೀಡಲಾಯಿತು.

ಪ್ರಶಸ್ತಿ ಪ್ರದಾನ ಮಾಡಿದ ರಾಣಿ ಸತೀಶ್ ರವರು ಮಾತನಾಡುತ್ತಾ AI ಏನೇ ಮಾಡಿದರೂ ಸ್ತ್ರೀ ಶಕ್ತಿಯ ಮುಂದೆ ನಗಣ್ಯ, ತಾಯ್ತನದ ಶಕ್ತಿಯೇ ಎಲ್ಲಕ್ಕಿಂತ ಮಿಗಿಲು, ಇಂದಿನ ಸಮಾಜದ ವಿಕಾರ, ವಿಕೃತ ವಾತಾವರಣಕ್ಕೆ ಕಡಿವಾಣ ಹಾಕಬೇಕಾಗಿದೆ. ಇದಕ್ಕೆ ಪರಿಹಾರ ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡುವುದು, ಹೆಣ್ಣುಮಕ್ಕಳ ತಾಯ್ತನದ

ಜವಾಬ್ದಾರಿ, ಹದವರಿತ ಅಡುಗೆ, ಹದ ಅರಿತ ಬದುಕು, ಶಂಕರಮ್ಮನವರು ಬಾಳಿ ಬದುಕಿದ ಹಾದಿ, ಇಟ್ಟ ಹೆಜ್ಜೆಗಳು ನಮಗೆ ಸದಾ ಆದರ್ಶಪ್ರಾಯ. ಮಹಿಳೆಯರು ತಪ್ಪುತ್ತಿರುವ ಹೆಜ್ಜೆಗಳನ್ನು ಕಲೇಸಂನ ಲೇಖಕಿಯರ ಲೇಖನಿಗಳಿಂದ ಬದಲಾಯಿಸಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ, ಇಂದು ಹೆಚ್ಚುತ್ತಿರುವ ವಿವಾಹ ವಿಚ್ಛೇದನಕ್ಕೆ ಕಾರಣ ಮಹಿಳಾ ಅಧ್ಯಯನ ಪುರುಷರಿಗೆ ಬೋಧನೆಯಾಗದಿರುವುದು. ಹೆಣ್ಣುಮಕ್ಕಳ ಬದಲಾದ ಜೀವನ ಕ್ರಮದಂತೆ ಕೌಟುಂಬಿಕ ವ್ಯವಸ್ಥೆಗಳು ಪಲ್ಲಟವಾಗಬೇಕು, ಹಾಗೆಯೇ ಹೆಣ್ಣು ಮಕ್ಕಳ ಶ್ರಮಜೀವನದ ಬದುಕನ್ನು ನೋಡುವ ರೀತಿ ಬದಲಾಗಬೇಕು, ಇಂದಿನ ಕೌಟುಂಬಿಕ ಶಿಕ್ಷಣ ಇದನ್ನು ಸಮರ್ಥವಾಗಿ ಮಕ್ಕಳಿಗೆ ತಿಳಿಸದ ಕಾರಣ ಸಮಾಜ ಅಧೋಗತಿಗೆ ತಲುಪುತ್ತಿದೆ. ಮುಂದಿನ ಅವಧಿಯಿಂದ ರೈತ ಮಹಿಳೆಯೊಬ್ಬರಿಗೆ ಈ ಪ್ರಶಸ್ತಿ ನೀಡಲು ಮನು ಬಳಿಗಾರ್‌ರವರನ್ನು ವಿನಂತಿಸಲಾಗಿದೆ. ಸಮಾನತೆ ಎನ್ನುವುದು ಮಾತಿಗಷ್ಟೇ ಸೀಮಿತವಾಗದೆ ಕಾರ್ಯರೂಪಕ್ಕೆ ಬರಬೇಕು. ಇಂತಹ ಹೆಣ್ತನವನ್ನು ಸಂಭ್ರಮಿಸುವ ಕಾರ್ಯಕ್ರಮಗಳು ಇನ್ನೂ ಹೆಚ್ಚಲಿ ಎಂದು ಹೇಳಿದರು.

ಬಳಿಗಾರ್ ಕುಟುಂಬದ ಪರವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷರಾದ ಡಾ. ಮನು ಬಳಿಗಾರ್ ತಮ್ಮ ತಂದೆಯ ಹೆಸರಲ್ಲಿ ಪುಸ್ತಕ ಬರೆದಿದ್ದಕ್ಕಿಂತ ತಾಯಿಯ ಹೆಸರಲ್ಲಿ ಕರ್ನಾಟಕ ಲೇಖಕಿಯರ ಸಂಘದ ಜೊತೆಗೂಡಿ ಇಂತಹ ಒಂದು ಅರ್ಥಪೂರ್ಣ ಕಾರ್ಯಕ್ರಮ ನಡೆಸುತ್ತಿರುವುದು ನಿಜಕ್ಕೂ ಸಾರ್ಥಕತೆ ಮತ್ತು ತಮ್ಮ ತಾಯಿಗೆ ಸಲ್ಲಿಸುತ್ತಿರುವ ಗೌರವ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಳಿಗಾರ್ ಕುಟುಂಬದ ಕುಡಿ, ಡಾ. ಮೇಘಾ ಸಿದ್ದಾರ್ಥ್ ಕೂಡ ಉಪಸ್ಥಿತರಿದ್ದರು.

**– ಮಾನಸ ಚಂದ್ರಿಕಾ ವಿ.ಎಂ.**




**ಮಂಡ್ಯ ಜಿಲ್ಲಾ ಲೇಖಕಿಯರ ಸಮ್ಮೇಳನ**

# 15. ಜಿಲ್ಲಾ ಘಟಕಗಳ ಕಾರ್ಯ ಚಟುವಟಿಕೆ ವರದಿಗಳು

## ಅ. ಮೈಸೂರು ಜಿಲ್ಲಾ ಘಟಕ





ದಿನಾಂಕ 21.01.2026ರಂದು ಲೇಖಕಿಯರ ಟ್ರಸ್ಟ್, ಮೈಸೂರು, ಕರ್ನಾಟಕ ಲೇಖಕಿಯರ ಸಂಘ, ಮೈಸೂರು ಜಿಲ್ಲಾ ಶಾಖೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲೆಯ ಸಹಯೋಗದೊಂದಿಗೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಶ್ರೀಮತಿ ಡಾ. ಆರ್. ಸುನಂದಮ್ಮನವರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಎಚ್. ಆರ್. ಲೀಲಾವತಿ, ಶಶಿಕಲಾ ವಸ್ತ್ರದ, ಮೀನಾ ಮೈಸೂರು ಮುಂತಾದವರು ಈ ಅಭಿನಂದನೆಯಲ್ಲಿ ಪಾಲ್ಗೊಂಡಿದ್ದರು. ಡಾ. ಎಂ. ಎಸ್. ವೇದಾ ಅವರು ಆಪ್ತವಾಗಿ ಅಭಿನಂದನಾ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರಿನ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ಮಡ್ಡೀಕೆರೆ ಗೋಪಾಲ್ ಅವರು ಸಾಹಿತ್ಯ ಮತ್ತು ಬರವಣಿಗೆಯ ಬಗ್ಗೆ ಮಾತನಾಡುತ್ತಲೇ ಸುನಂದಮ್ಮನವರ ಬಗ್ಗೆಯೂ ಹಿತನುಡಿಗಳನ್ನಾಡಿದರು.

ಅಭಿನಂದಿತರಾದ ಶ್ರೀಮತಿ ಸುನಂದಮ್ಮನವರು, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಮಹಿಳೆಯ ಹೆಜ್ಜೆ ಗುರುತು ಮೂಡಬೇಕೆಂದರು. ಭಾಷೆ ಕಟ್ಟುವುದೂ ಕೂಡ ಮಹಿಳೆಯರಿಂದಾಗುತ್ತದೆ. ಮರೆಮಾಚಲಾಗುತ್ತಿರುವ ಮಹಿಳೆಯರ ಪ್ರಭುತ್ವ ಮತ್ತು ಪ್ರಭಾವವನ್ನು ಮುನ್ನೆಲೆಗೆ ತರುವ ಜವಾಬ್ದಾರಿ ಕೂಡಾ ನಮ್ಮದೆಂದು ನುಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಮತಿ ಮಂಜುಳಾ ಮಾನಸಾ ಹೆಣ್ಣಿನ ಮಹತ್ವವನ್ನರಿತು, ಆಕೆಯ ವ್ಯಕ್ತಿತ್ವಕ್ಕೆ ಮನ್ನಣೆ ನೀಡಬೇಕೆಂದರು. ಜಿಲ್ಲಾ ಶಾಖೆಯ ಅಧ್ಯಕ್ಷರಾದ ಶ್ರೀಮತಿ ಉಷಾನರಸಿಂಹನ್ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಚ್. ಎಸ್.

ಮಧುರಾಣಿ ಅಧ್ಯಕ್ಷತೆ ವಹಿಸಿದ ಕವಿಗೋಷ್ಠಿಯಲ್ಲಿ ಮೈಸೂರು ಜಿಲ್ಲೆಯ ಹದಿಮೂರು ಜನ ಕವಯಿತ್ರಿಯರು ಭಾಗವಹಿಸಿ ಕವನಗಳನ್ನು ಪ್ರಸ್ತುತಪಡಿಸಿದರು.

**ಆ. ಚಿತ್ರದುರ್ಗ ಜಿಲ್ಲಾ ಘಟಕ**



15 ಮಾರ್ಚ್ 2026ರಂದು ಚಿತ್ರದುರ್ಗ ಜಿಲ್ಲಾ ಘಟಕದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ರಾಜ್ಯ ಮಟ್ಟದ ಕವಿಗೋಷ್ಠಿಯನ್ನು ಆಯೋಜಿಸಲಾಗಿತ್ತು. ಡಾ. ಕರಿಯಪ್ಪ ಮಾಳಗಿ, ಪ್ರಾಂಶುಪಾಲರು ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ ಇವರು ಉದ್ಘಾಟನೆಯನ್ನು ಮಾಡಿದರು. 'ಸ್ತ್ರೀ ಬರವಣಿಗೆಯಲ್ಲಿನ ಕುಶಲತೆಗಳು' ಈ ಬಗ್ಗೆ ಖ್ಯಾತ ವಿಮರ್ಶಕಿ ಹಾಗೂ ಕವಯತ್ರಿ ತಾರಿಣಿ ಶುಭದಾಯಿನಿಯವರು ಮಾತಾಡಿದರು. ಕವಿಗಳಾದ ಜಬಿವುಲ್ಲಾ ಎಂ. ಅಸದ್‌ರವರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಚಿತ್ರದುರ್ಗ ಜಿಲ್ಲಾ ಘಟಕದ ಅಧ್ಯಕ್ಷರಾದ ಕೆ. ನಿರ್ಮಲ ಮರಡಿಹಳ್ಳಿಯವರು ಪ್ರಾಸ್ತಾವಿಕವಾಗಿ ಮಾತಾಡಿದರು. ಉಪಾಧ್ಯಕ್ಷೆಯಾದ ಡಿ. ಶಬ್ರೀನಾ ಮಹಮದ್ ಅಲಿಯವರು ಕಲೇಸಂ ಚಿತ್ರದುರ್ಗದ ಪುನರ್ ರಚನೆಯ ಬಗ್ಗೆ ತಿಳಿಸಿದರು. ಕಾರ್ಯದರ್ಶಿಯಾದ ದೀಪಿಕಾ ಬಾಬು ಕಾರ್ಯಕ್ರಮವನ್ನು ಆಯೋಜಿಸಿದ್ದರು.



ಸಹಕಾರ್ಯದರ್ಶಿಯಾದ ಡಾ. ಚಾಂದಿನಿ ಖಲೀದ್ ಹಾಗೂ ಖಜಾಂಚಿ ಮೀರಾ ನಾಡಿಗ್ ಸೇರಿದಂತೆ ಅರವತ್ತಕ್ಕೂ ಹೆಚ್ಚು ಕವಯಿತ್ರಿಯರು ಸ್ತ್ರೀ ಸಂವೇದನೆಯ ಕವಿತೆ ವಾಚಿಸುವ ಮೂಲಕ ಕಾರ್ಯಕ್ರಮ ಯಶಸ್ವಿಯಾಯಿತು.

8 ಮಾರ್ಚ್ 2026 ರಂದು ಚಿತ್ರದುರ್ಗ ಜಿಲ್ಲಾ ಘಟಕದ ಸದಸ್ಯೆಯರಿಂದ ಮಹಿಳಾ ದಿನಾಚರಣೆಯ ಪ್ರಯುಕ್ತ ಆಕಾಶವಾಣಿ ಬಾನುಲಿ ಕೇಂದ್ರದಲ್ಲಿ ಕವಿತೆಗಳ ವಾಚನ ಪ್ರಸಾರವಾಯಿತು

## ಇ. ಬೀದರ ಜಿಲ್ಲಾ ಘಟಕ

1. 09–01–2026 ರಂದು, ಕರ್ನಾಟಕ ಲೇಖಕಿಯರ ಸಂಘ ಬೀದರ ಶಾಖೆ ಹಾಗೂ ಶ್ರೀ ಗಂಗಾಧರೇಶ್ವರ ಅಕ್ಕನ ಬಳಗ ಇವರ ಸಂಯುಕ್ತಾಶ್ರಯದಲ್ಲಿ 'ತಾಯಿ ಸಾವಿತ್ರಿ ಬಾಯಿ ಫುಲೆ"ಯವರ ಜನ್ಮ ದಿನೋತ್ಸವ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ 14 ಜನ







ಶಿಕ್ಷಕಿಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಭಾರತಿ ವಸ್ತ್ರದ ಅವರು ಉಪನ್ಯಾಸ ನೀಡಿದರು. ಪುಣ್ಯವತಿ ವಿಸಾಜಿಯವರು ಅಧ್ಯಕ್ಷತೆ ವಹಿಸಿದ್ದರು. ಚಿಕ್ಕದಾಗಿ ಚೊಕ್ಕವಾಗಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಿತು.

**2.** ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತು, ಕರ್ನಾಟಕ ಲೇಖಕಿಯರ ಸಂಘ, ಬೀದರ, ಸಂಯುಕ್ತಾಶ್ರಯದಲ್ಲಿ ನಗರದ ಭೇಟಿ ಸರ್ಕಲ್ ವೃತ್ತದಲ್ಲಿ ಸಾಂಕೇತಿಕವಾಗಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾದ ಕರ್ನಾಟಕ




ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಸಂಸ್ಥೆಯ ಅಧ್ಯಕ್ಷರಾದ ಮಾಲಾ ನಾರಾಯಣರಾವ ಮಹಿಳಾ ಸಬಲತೆಯ ಬಗ್ಗೆ ಮಾತನಾಡಿದರು. ಹಲಗೆ ಬಾರಿಸಿ, ನೃತ್ಯ ಮಾಡಿ, ಘೋಷಣೆ ಹೇಳಿ ಸಂಭ್ರಮದಿಂದ ಆಚರಣೆ ಮಾಡಲಾಯಿತು.

### 3. ವಿಶ್ವ ಮಹಿಳಾ ದಿನಾಚರಣೆ ಹಾಗೂ ಯುಗಾದಿ ಕವಿಗೋಷ್ಠಿ
**25–3–2026**



ಕಲೇಸಂದ ಕೆಲವು ಸದಸ್ಯರು ಬಂದು ಕವನ ವಾಚನ ಮಾಡಿದರು. ಕಲೇಸಂ ಮಾಜಿ ಅಧ್ಯಕ್ಷರಾದ ಲೀಲಾವತಿ ನಿಂಬೂರೆಯವರು ಅಧ್ಯಕ್ಷತೆ ವಹಿಸಿದ್ದರು.

### ಈ. ಬೆಳಗಾವಿ ಜಿಲ್ಲಾ ಘಟಕ



1) ವಿಮರ್ಶಾ ಕಮ್ಮಟ

ಕರ್ನಾಟಕ ಲೇಖಕಿಯರ ಸಂಘ, ಬೆಳಗಾವಿ ಜಿಲ್ಲಾ ಘಟಕದಿಂದ ಕನ್ನಡ ಸಾಹಿತ್ಯ ಭವನ ವಿಶ್ವಸ್ಥ ಮಂಡಳಿಯು ಸಹಯೋಗದೊಂದಿಗೆ 27–1–25 ರಂದು ಒಂದು ದಿನದ ವಿಮರ್ಶಾ ಕಮ್ಮಟವನ್ನು ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಗುರುಪಾದ ಮರಿಗುದ್ದಿ ಹಾಗೂ ಡಾ. ತಾರಿಣಿ ಶುಭದಾಯಿನಿ ಅವರು ಆಗಮಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಗುರುದೇವಿ ಹುಲ್ಲೆಪ್ಪನವರ ಮಠ ನೆರವೇರಿಸಿದರು. 40 ಜನ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕರ್ನಾಟಕ ಲೇಖಕಿಯರ ಸಂಘ, ಬೆಳಗಾವಿ ಜಿಲ್ಲೆಯ ಅಧ್ಯಕ್ಷರಾದ ಡಾ. ಕೆ.ಆರ್. ಸಿದ್ದಗಂಗಮ್ಮ ಅಧ್ಯಕ್ಷತೆ ವಹಿಸಿದ್ದರು ಶ್ರೀ ಆರ್.ಬಿ. ಕಟ್ಟಿ ಗೌ. ಕಾರ್ಯದರ್ಶಿ ಕ. ಸಾ. ಭ. ವಿಶ್ವಸ್ಥ ಮಂಡಳಿ ಇವರು ಸಮಾರೋಪ ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಿದರು.

**2) ಎರಡನೇ ವಾರ್ಷಿಕೋತ್ಸವ :**





15 ಮಾರ್ಚ್ 26 ರಂದು ಕಲೇಸಂ, ಬೆಳಗಾವಿ ಜಿಲ್ಲಾ ಘಟಕದ ಎರಡನೇ ವಾರ್ಷಿಕೋತ್ಸವವನ್ನು ನಾಲ್ಕು ಪುಸ್ತಕಗಳ ಬಿಡುಗಡೆ ಹಾಗೂ ಕವಿಗೋಷ್ಠಿಯನ್ನು ಆಯೋಜಿಸುವ ಮೂಲಕ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಆರ್. ಸುನಂದಮ್ಮ ಆಗಮಿಸಿದ್ದರು. ಅವರು ಡಾ. ನೀತಾ ರಾವ್ ಅವರ ಶಾಪಗ್ರಸ್ತ ದೇವಕನ್ನಿಕೆಯರು, ಶ್ರೀಮತಿ ಸುಧಾ ಪಾಟೀಲರ ವಚನ ಸುಧೆ ಹಾಗೂ ತೊಟ್ಟಿಲು ತೂಗುವ ಕೈ ಹಾಗೂ ಡಾ. ಬಸಮ್ಮ ಗಂಗರಲ್ಲಿ ಮತ್ತು ಡಾ. ಗೀತಾಂಜಲಿಯವರ ಅನುವಾದಿತ ಭೂಗರ್ಭ ಕೃತಿಗಳನ್ನು ಬಿಡುಗಡೆ ಮಾಡಿದರು. ಇಂದಿನ ಸಮಾಜದ ಅನಿವಾರ್ಯ ಭಾಷೆ ಸೋದರಿತ್ವ. ಯುದ್ಧ ಮುಕ್ತ ಸಮಾಜದ ಕಟ್ಟುವಿಕೆಗೆ ಮತ್ತು ಮಾನವೀಯ ತಂತುಗಳ ಬೆಳವಣಿಗೆಗೆ ಸ್ತ್ರೀವಾದದ ಶಕ್ತಿ ಅತ್ಯಗತ್ಯ ಎಂದು ನುಡಿದರು. ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಮಹಿಳೆ ಕುರಿತಾದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಕೆ ಆರ್ ಸಿದ್ಧಗಂಗಮ್ಮ ವಹಿಸಿದ್ದರು. ಶ್ರೀ ಆರ್ ಬಿ ಕಟ್ಟಿಯವರು ಮತ್ತು ಉಪಾಧ್ಯಕ್ಷರಾದ ಜ್ಯೋತಿ ಬಾದಾಮಿ ಉಪಸ್ಥಿತರಿದ್ದರು. 8 ಜನ ಕವಯತ್ರಿಯರು ಕವನ ವಾಚಿಸಿದರು.

**3) ಸರ್ವಸದಸ್ಯರ ಸಭೆ 12/1/26**



ಕಲೇಸಂ ಬೆಳಗಾವಿ ಜಿಲ್ಲಾಘಟಕದ ಸರ್ವಸದಸ್ಯರ ಸಭೆಯನ್ನು 'ಪ್ರಕೃತಿ' ಸಭಾ ಭವನದಲ್ಲಿ ಕೆ ಆರ್ ಸಿದ್ಧಗಂಗಮ್ಮನವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಕಾರ್ಯದರ್ಶಿ ವಾರ್ಷಿಕ ವರದಿ ವಾಚಿಸಿದರು ಹಾಗೂ ಖಜಾಂಚಿ ಡಾ.

ನೀತಾರಾವ್ ಲೆಕ್ಕಪತ್ರಗಳನ್ನು ಮಂಡಿಸಿದರು. ನಂತರ ಸದಸ್ಯರು ಅನೇಕ ಸಲಹೆಗಳನ್ನು ನೀಡಿದರು. ಮುಂದಿನ ವರುಷದ ಕ್ರಿಯಾ ಯೋಜನೆಗಳನ್ನು ಅಧ್ಯಕ್ಷರು, ಸದಸ್ಯರ ಮುಂದಿಟ್ಟು ಸಲಹೆಗಳನ್ನು ಸ್ವೀಕರಿಸಿದರು.

### ಉ. ಚಿಕ್ಕಮಗಳೂರು ಜಿಲ್ಲಾ ಘಟಕ

1. 4 ಮೇ 2025ರಂದು ಚಿಕ್ಕಮಗಳೂರು ಜಿಲ್ಲಾ ಘಟಕದ ಉದ್ಘಾಟನೆಯನ್ನು ಅಂದಿನ ಕಲೇಸಂ ಅಧ್ಯಕ್ಷರಾದ ಡಾ. ಎಚ್.ಎಲ್. ಪುಷ್ಪರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಈ ಕಾರ್ಯಕ್ರಮವನ್ನು ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ವೀಣಾ ನಾಗರಾಜ್ ಹಾಗು ಸಿಇಓ ಉದ್ಘಾಟಿಸಿ ಕರ್ನಾಟಕ ಲೇಖಕಿಯರ ಸಂಘ ಚಿಕ್ಕಮಗಳೂರು ಘಟಕಕ್ಕೆ ಶುಭವನ್ನು ಹಾರೈಸಿದರು ಜೊತೆಗೆ ಶ್ರೀಮತಿ ಮಂಜುಳಾ ಹುಲ್ಲಳ್ಳಿ, ಕಸಾಪ ಅಧ್ಯಕ್ಷರಾದ ಸೂರಿ ಶ್ರೀನಿವಾಸ್, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ನೆಲ್ಲಿಕಟ್ಟೆ ಸಿದ್ಧೇಶ್ ಕಾರ್ಯಕ್ರಮವನ್ನು ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ತಾಲೂಕು ಘಟಕದ ಅಧ್ಯಕ್ಷರುಗಳು, ಸದಸ್ಯರು ಜೊತೆಗೆ ಮೂಲೆ ಮೂಲೆಯಿಂದ ಬಂದ ಕವಿ ಮನಸುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.











2. ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ತಾಲೂಕು ಘಟಕಗಳನ್ನು ಸ್ಥಾಪಿಸುವುದರ ಮೂಲಕ ಚಿಕ್ಕಮಗಳೂರು ಜಿಲ್ಲಾಶಾಖೆಯು ತನ್ನ ಹೊಸ ಛಾಯೆಯನ್ನು ಮೂಡಿಸಿದೆ. ಆ ನಿಟ್ಟಿನಲ್ಲಿ ಚಿಕ್ಕಮಗಳೂರು ಜಿಲ್ಲೆ ಕಳಸದಲ್ಲಿ ಕಳಸ ತಾಲೂಕು ಘಟಕವನ್ನು ಶ್ರೀಮತಿ ಗೀತಾ ಮಕ್ಕಿಮನೆ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಾಯಿತು. ಮೂಡಿಗೆರೆ ತಾಲೂಕು ಘಟಕದ ಅಧ್ಯಕ್ಷರಾಗಿ ಶ್ರೀಮತಿ ಪ್ರೇಮಾ ಪುಣ್ಯಮೂರ್ತಿ ಘಟಕದ ಉದ್ಘಾಟನೆ ನೆರವೇರಿಸಿದರು. ಕಡೂರು ತಾಲೂಕು ಘಟಕದ ಅಧ್ಯಕ್ಷರಾಗಿ ಲತಾ ಧರಣೇಶ್ ರವರು ಆಯ್ಕೆಯಾಗಿದ್ದು ಘಟಕದ ಉದ್ಘಾಟನೆಯನ್ನು ನೆರವೇರಿಸಲಾಯಿತು.

3. ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕರ್ನಾಟಕ ಲೇಖಕಿಯರ ಸಂಘ ಹಾಗೂ ಎಸ್ ಟಿ ಜೆ ಕಾಲೇಜ್ ಇವರ ಸಂಯುಕ್ತಾಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಗೋಷ್ಠಿಯನ್ನು ಆಯೋಜಿಸಲಾಗಿದ್ದು ಸುಮಾರು ಮೂವತ್ತಕ್ಕೂ ಹೆಚ್ಚು ಲೇಖಕಿಯರು ತಮ್ಮ ಕವನವನ್ನು ವಾಚಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಭಾಗಗಳಿಂದ ಬಂದ ಕವಿ ಮನಸ್ಸುಗಳು ಸಾಹಿತ್ಯಾಸಕ್ತರು ಹಾಗೂ ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

4. ಕಡೂರಿನ ಜ್ಞಾನ ಭಾರತಿ ಶಿಕ್ಷಣ ವಿದ್ಯಾಲಯ ಜೊತೆಗೂಡಿ 'ಪುಸ್ತಕ ಮಂಥನ' ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಡೂರಿನ ಸರ್ಕಾರಿ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಪುಷ್ಪ ಭಾರತಿರವರು ಪುಸ್ತಕಗಳ ಓದು ವಿಚಾರದ ಬಗ್ಗೆ ಮಕ್ಕಳಿಗೆ ವಿಶೇಷ ಉಪನ್ಯಾಸವನ್ನು ನೀಡಿದರು.

5. ಚಿಕ್ಕಮಗಳೂರು ಘಟಕದ ಮತ್ತೊಂದು ಹೊಸ ಮೈಲಿಗಲ್ಲು ಆನ್‌ಲೈನ್ ನಲ್ಲಿ ಕವಿಗೋಷ್ಠಿ ಆಯೋಜನೆ. ಯುಗಾದಿಯ ವಿಶೇಷ ಸಂದರ್ಭದಲ್ಲಿ ನವನವೀನತೆಗೆ ಸಾಕ್ಷಿ ಆಗುವಂತೆ ಫೇಸ್ ಬುಕ್ ಪೇಜ್ ಒಂದನ್ನು ತೆರೆದು ರಾಜ್ಯಮಟ್ಟದ ಯುಗಾದಿ ಕವಿಗೋಷ್ಠಿಯನ್ನು ಆಯೋಜಿಸಲಾಗಿತ್ತು. ಈ ಕವಿಗೋಷ್ಠಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 45ಕ್ಕೂ ಅಧಿಕ ಲೇಖಕಿಯರು ತಮ್ಮ ಕವನವನ್ನು ವಾಚನ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಊ. ತುಮಕೂರು ಜಿಲ್ಲಾ ಘಟಕ




ಕರ್ನಾಟಕ ಲೇಖಕಿಯರ ಸಂಘ, ತುಮಕೂರು ಜಿಲ್ಲಾ ಶಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಲೇಖಕಿಯರ ಸಂಘದ ಸದಸ್ಯರು ಅಕ್ಕಮಹಾದೇವಿ ಜೀವನ ಕುರಿತಂತೆ ನಾಟಕವನ್ನು ಪ್ರಸ್ತುತಪಡಿಸಿದರು. ದುಡಿಯುವ ವರ್ಗದ ಹೆಣ್ಣು ಮಕ್ಕಳನ್ನು ಕೇಂದ್ರವಾಗಿರಿಸಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ನೂರುನ್ನೀಸ ಅವರು ಅತಿಥಿಗಳಾಗಿ ಭಾಗವಹಿಸಿ ದುಡಿಯುವ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಆಲಿಸಿ ಪರಿಹಾರ ಸೂಚಿಸಿದ್ದು ಬಹಳ ವಿಶೇಷವಾಗಿದ್ದು, ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಹೆಣ್ಣು ಮಕ್ಕಳೆಲ್ಲ ಸೇರಿ ದುಡಿಯುವ ವರ್ಗದ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಹೊತ್ತ ಸಾಮಾಜಿಕ ನಾಟಕವನ್ನು ಪ್ರದರ್ಶಿಸಿದರು. ಲೇಖಕಿಯರ ಸಂಘದ ಸಾಧಕ ಮಹಿಳೆ ದತ್ತಿ ಪ್ರಶಸ್ತಿಯನ್ನು ಸಮಾಜ ಸೇವಕಿಯಾದ ಚಂದ್ರಕಲಾ ಅವರಿಗೆ ನೀಡಿ ಗೌರವಿಸಲಾಯಿತು.



# ಕಲೇಸಂ ಬೈಲಾ ತಿದ್ದುಪಡಿ

**ಕರ್ನಾಟಕ ಲೇಖಕಿಯರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದತ್ತಿ ಪ್ರಶಸ್ತಿಗಳನ್ನು ವಿತರಿಸಲಾಯಿತು. ಎಸ್.ಜಿ. ಸಿದ್ಧರಾಮಯ್ಯ, ಸುನಂದಮ್ಮ ಮತ್ತಿತರರಿದ್ದರು.**

**ಬೆಂಗಳೂರು:** ಲೇಖಕಿಯರ ಸಂಘಕ್ಕೆ ಶಕ್ತಿ ತುಂಬಲು ಬೈಲಾ ತಿದ್ದುಪಡಿಗೆ ಕರಡು ಸಿದ್ಧವಾ ಇದರಿಂದ ಜಿಲ್ಲಾ ಘಟಕಗಳಿಗೆ ಸ್ವಾಯತ್ತತೆ ದೊರೆಯಲಿದ್ದು, ಸರ್ವಸದಸ್ಯರ ಸಭೆಯಲ್ಲಿ ಉದ್ದೇಶಿತ ತಿದ್ದುಪಡಿಗೆ ಅನುಮೋದನೆ ಸಿಗುವ ನಿರೀಕ್ಷೆಯಿದೆ ಎಂದು ಕರ್ನಾಟಕ ಲೇಖಕಿಯರ ಸಂಘದ (ಕಲೇಸಂ) ಅಧ್ಯಕ್ಷೆ ಆರ್. ಸುನಂದಮ್ಮ ಹೇಳಿದ್ದಾರೆ.

# 16. ಅಭಿನಂದನೆಗಳು

2025ನೆಯ ಸಾಲಿನಲ್ಲಿ ಪ್ರಮುಖ ಪ್ರಶಸ್ತಿಗಳನ್ನು ಪಡೆದ ಸಾಧಕಿಯರನ್ನು ಕಲೇಸಂ ಅಭಿನಂದಿಸುತ್ತದೆ.



**ಅ.** ಡಾ. ಎಸ್.ಜಿ. ಸುಶೀಲಮ್ಮ ಅವರು ಸುಮಂಗಲಿ ಸೇವಾಶ್ರಮದ ಸಂಸ್ಥಾಪಕಿಯಾಗಿ ಸಮಾಜಸೇವೆ ಮಾಡುತ್ತಾ 2026ನೆಯ ಸಾಲಿನ ಭಾರತ ಸರ್ಕಾರದ ಉನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀಗೆ ಭಾಜನರಾಗಿದ್ದಾರೆ. 1975ರಲ್ಲಿ ಬೆಂಗಳೂರಿನ ಚೋಳನಾಯಕನ ಹಳ್ಳಿಯಲ್ಲಿ ಸೇವಾಶ್ರಮ ಸ್ಥಾಪಿಸಿ ಅಸಹಾಯಕ ಮಹಿಳೆಯರಿಗೆ ಸ್ವಯಂ ಉದ್ಯೋಗ, ವಸತಿ ಮತ್ತು ಶಿಕ್ಷಣ ಒದಗಿಸಿ ಮಹಿಳಾ ಸಬಲೀಕರಣವನ್ನು ಸಾಕಾರಗೊಳಿಸಿದ್ದಾರೆ. 200ಕ್ಕೂ ಹೆಚ್ಚು ಅಂಗನವಾಡಿಗಳ ನಿರ್ವಹಣೆ ಮಾಡುತ್ತಾ ಅನಾಥ ಮಕ್ಕಳಿಗೆ ಮತ್ತು ನೂರಾರು ಬಡಕುಟುಂಬಗಳಿಗೆ ಆಸರೆಯಾಗಿದ್ದಾರೆ. ಇವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಣಿ ಕಿತ್ತೂರು ಚೆನ್ನಮ್ಮ ಪ್ರಶಸ್ತಿ ಮತ್ತು ಜಾನಕಿದೇವಿ ಬಜಾಜ್ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. 86ರ ಹರೆಯದಲ್ಲಿಯೂ ಅವರ ಸೇವೆ ಸದ್ದಿಲ್ಲದೆ ನಿರಂತರವಾಗಿ ಸಾಗುತ್ತ ದೀನದಲಿತರಿಗೆ ಮುಡಿಪಾಗಿದೆ.



**ಆ.** ಕರ್ನಾಟಕ ಸರ್ಕಾರದ 2025ನೆಯ ಸಾಲಿನ ಪ್ರತಿಷ್ಠಿತ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಖ್ಯಾತ ಲೇಖಕಿ ಸುಕನ್ಯಾ ಮಾರುತಿಯವರಿಗೆ ಲಭಿಸಿದೆ.



**ಇ.** ಕರ್ನಾಟಕ ಸರ್ಕಾರದ 2025ನೆಯ ಸಾಲಿನ ಪ್ರತಿಷ್ಠಿತ ಅಕ್ಕಮಹಾದೇವಿ ಪ್ರಶಸ್ತಿಗೆ ಖ್ಯಾತ ಹೋರಾಟಗಾರ್ತಿ ಮತ್ತು ಲೇಖಕಿ ಕೆ.ನೀಲಾ ಭಾಜನರಾಗಿದ್ದಾರೆ.



**ಈ.** ಡಾ|| ವಸುಂಧರಾ ಭೂಪತಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2025ನೆಯ ಸಾಲಿನ ಪ್ರತಿಷ್ಠಿತ ಗೌರವ ಪ್ರಶಸ್ತಿ ಲಭಿಸಿದೆ.

# 17. ನುಡಿನಮನ

ನಮ್ಮನ್ನು ಅಗಲಿದ ಗಣ್ಯ ಲೇಖಕಿಯರಿಗೆ ಕಲೇಸಂ ನುಡಿನಮನ ಸಲ್ಲಿಸುತ್ತದೆ.



**ಅ.** ಕಾದಂಬರಿಕಾರ್ತಿ, ಪ್ರಕಾಶಕಿ ಆಶಾ ರಘು ಆವರ್ತ, ವಕ್ಷಸ್ಥಲ ಸೇರಿದಂತೆ ಕಾದಂಬರಿಗಳು, ನಾಟಕಗಳು, ಕಥಾಸಂಕಲನಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಚಡಗ ಪ್ರಶಸ್ತಿ, ಕಲೇಸಂನ ತ್ರಿವೇಣಿ ದತ್ತಿ ಪ್ರಶಸ್ತಿಗಳು ಸಂದಿವೆ.

* * *



**ಆ.** ಕುಲಶೇಖರಿ ಎಂಬ ಕಾವ್ಯನಾಮದಿಂದಲೇ ಖ್ಯಾತರಾಗಿದ್ದ ಉಷಾದೇವಿ ಪಾಟೀಲ ಅವರು ಕಾದಂಬರಿ, ಅನುವಾದ, ಕವನ ಸಂಕಲನ, ನಾಟಕ, ಜೀವನ ಚರಿತ್ರೆ, ಪ್ರವಾಸ ಮುಂತಾದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದರು. ಅವರ ಸಂಶೋಧನಾ ಕೃತಿ "ಈ ಶತಮಾನದ ಕನ್ನಡ ಕವಯಿತ್ರಿಯರು" ಉಲ್ಲೇಖಾರ್ಹವಾಗಿದೆ.

* * *



ಇ. ಕವಯಿತ್ರಿ ಅರುಂಧತಿ ರಮೇಶ್ ಅವರು ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿದ್ದರು. ಮಡಿಲು, ಪರಿಸರ ಕಾವ್ಯ ಸೇರಿದಂತೆ ಹತ್ತು ಕವನ ಸಂಕಲನಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಗೋವಿಂದಪೈ ಸ್ಮಾರಕ ಪ್ರತಿಷ್ಠಾನದ ಕಡೆಂಗೋಡ್ಲು ಶಂಕರಭಟ್ಟ ಪ್ರಶಸ್ತಿ, ಬೇಂದ್ರೆ ಅಡಿಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

* * *



**ಈ.** ಸಿ.ಎನ್. ಮುಕ್ತಾ ಕನ್ನಡದ ಖ್ಯಾತ ಕಾದಂಬರಿಗಾರ್ತಿ. ಮುಕ್ತಾ ಅವರು 65ಕ್ಕೂ ಹೆಚ್ಚು ಕಾದಂಬರಿ, 15ಕ್ಕೂ ಹೆಚ್ಚು ಕಥಾ ಸಂಕಲನ ರಚಿಸಿದ್ದಾರೆ. ಆರ್ಯಭಟ, ತ್ರಿವೇಣಿ, ಅತ್ತಿಮಬ್ಬೆ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳು ಸಂದಿವೆ.

# 18. ನುಡಿ ನಮನ ಕಾರ್ಯಕ್ರಮ

[2–2–26, ಸೋಮವಾರ]

ಲೇಖಕಿ ಆಶಾರಘು ಹಾಗೂ ಕುಲಶೇಖರಿ ಉಷಾದೇವಿ ಅವರಿಗೆ ಕಲೇಸಂ ವತಿಯಿಂದ ನುಡಿನಮನ ಕಾರ್ಯಕ್ರಮವನ್ನು ವಿಜಯನಗರದ ಹಿರಿಯ ನಾಗರಿಕರ ವೇದಿಕೆ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಹಲವು ಹಿರಿಯ ಮತ್ತು ಕಿರಿಯ ಲೇಖಕಿಯರು, ಹಾಗೆಯೇ ಆಶಾರಘು ಅವರ ತಂಗಿ ದೀಪದ ಮಲ್ಲಿ, ಮಗಳು ಉಪಾಸನಾ ಹಾಜರಿದ್ದರು. ಕುಲಶೇಖರಿ ಅವರ ಸೊಸೆ ಸರಿತಾ, ಮಗಳು ಚಿನ್ಮಯಿ ಅವರು ಉಪಸ್ಥಿತರಿದ್ದರು.

ಒಂದು ನಿಮಿಷದ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಂತರ ಲೇಖಕಿಯರ ಸಂಘದ ಸಂಸ್ಥಾಪಕ ಸದಸ್ಯರಾದ ಕುಲಶೇಖರಿ ಅವರ ಸೊಸೆ ಸರಿತಾ, ಕುಲಶೇಖರಿ ಅವರ ಕಿರುಕವಿತೆಗಳನ್ನು ವಾಚಿಸಿದರು.

ಕಲೇಸಂ ಮಾಜಿ ಅಧ್ಯಕ್ಷರಾದ ವಸುಂಧರಾ ಭೂಪತಿ ಅವರು ಉಷಾದೇವಿ ಮತ್ತು ಆಶಾರಘು ಅವರನ್ನು ಕುರಿತು ಮಾತನಾಡುತ್ತಾ ಅವರ ಬರಹ, ಸಾಧನೆ, ವ್ಯಕ್ತಿತ್ವದ ಬಗ್ಗೆ ನೆನಪು ಮಾಡುತ್ತಾ ಸಂತಾಪ ಸೂಚಿಸಿದರು. ಲೇಖಕಿ ಆಶಾರಘು ಅವರ ಉತ್ಸಾಹ, ಆಸಕ್ತಿ, ಅವರ ಅಂತರಂಗದೊಳಗಿನ ವಿಷಾದ ಸ್ಮರಿಸಿದರು. ಪ್ರಕಾಶಕಿಯಾಗಿ ಕ್ರಿಯಾಶೀಲರೂ ಆಗಿದ್ದ ಆಶಾರಘು ತುಸು ಹೆಚ್ಚೆನಿಸುವಷ್ಟು ಭಾವಜೀವಿ, ಸೂಕ್ಷ್ಮ ಮನಸ್ಸಿನ ಅವರು ಪತಿಯ ಅಗಲಿಕೆಯ ನೋವಿಂದ ಹೊರ ಬರಲಾರದೆ ಹೋದರು ಎಂದು ವಿಷಾದಿಸಿದರು. ಅವರ ಕುಟುಂಬಕ್ಕೆ ಸಾಹಿತ್ಯಿಕವಾಗಿ, ಹಾಗೆಯೇ ಸಾಹಿತ್ಯೇತರವಾಗಿಯೂ ಜೊತೆಯಾಗಿ ಅವರೊಂದಿಗಿರುತ್ತೇವೆಂದರು.

ಮಂತಣಿ ಪತ್ರಿಕೆ ಸಂಪಾದಕರಾದ ಸುನಂದ ರು. ಬಸಪ್ಪ ಇಬ್ಬರೂ ಲೇಖಕಿಯರ ಬಗ್ಗೆ ಮಾತನಾಡುತ್ತಾ, ಸರಳತೆ, ಸಜ್ಜನಿಕೆ ಗುಣದವರು ಉಷಾದೇವಿ ಮೇಡಂ. ಮಂತಣಿ ಮಾಸಪತ್ರಿಕೆ ಸದಸ್ಯರಾಗಿದ್ದರು. ಭೌತಿಕವಾಗಿ ಇಲ್ಲವಾದರೂ ಸಾಹಿತ್ಯದ ಮೂಲಕ ಎಂದೆಂದೂ ನಮ್ಮೊಂದಿಗೆ ಇದ್ದಾರೆ. ಸಾವಿನಲ್ಲೂ ಸಾರ್ಥಕತೆ ಮೆರೆದವರೆಂದು ಸಂತಾಪ ಸೂಚಿಸಿದರು. ಆಶಾ ರಘು ಕಥೆ, ಕಾದಂಬರಿ ಬರಹಗಳಲ್ಲಿ, ನಾಟಕಕಾರ್ತಿ, ಪ್ರಕಾಶಕಿ, ಸಂಭಾಷಣಾಕಾರ್ತಿಯಾಗಿ ಮಾನವೀಯ ಸಂಬಂಧಗಳ ಆಳ ಅರಿತವರು. ಸಿನಿಮಾ, ಕಿರುತೆರೆ ಇವುಗಳಲ್ಲಿ ಕೆಲಸ ಮಾಡಿದ್ದ ಕ್ರಿಯಾಶೀಲವಾಗಿದ್ದ ಅವರು ಬರಹದ ಮೂಲಕ ನಮ್ಮೊಂದಿಗೆ ಸದಾ ಹಸಿರಾಗಿರುತ್ತಾರೆ ಎಂದರು.

ಹಿರಿಯ ಲೇಖಕಿಯಾದ ನೇಮಿಚಂದ್ರ ಅವರು ಉಷಾದೇವಿಯವರ ಚಿಂತನೆಯ ನೆಲೆಯನ್ನು ಒಬ್ಬ ಲೇಖಕಿಯು ತನ್ನ ಸಾವಿನ ನಂತರವೂ ಉಳಿದವರ ಬಗ್ಗೆ ಯೋಚಿಸಿರುವುದು ಸಾರ್ಥಕತೆ. ದೇಹದಾನದ ಮೂಲಕ ಅವರು ಸಾವಿಗೂ ಘನತೆ

ತಂದಿತ್ತಿದ್ದಾರೆ. ಹಿರಿ–ಕಿರಿಯರೆನ್ನದೆ ಸರಳ, ಮಾತೃಹೃದಯಿ ಲೇಖಕಿಯಾಗಿದ್ದ ಅವರ ಬದುಕು–ಬರಹ ಎರಡೂ ಒಂದೇ ಆಗಿತ್ತು. ಬಹುದೊಡ್ಡ ಕಾರ್ಯ 248 ಪುಟಗಳ ಕೃತಿ. ಅನೇಕ ಲೇಖಕಿಯರ ಬಗ್ಗೆ ಪರಿಚಯ ಮಾಡುವ ಸಂಗ್ರಹ ಕೃತಿ. ಅದೊಂದು ಅಪೂರ್ವ ಸಾಧನೆ. ತಿರುಮಲಾಂಬ ಅವರಿಂದ 1998ರವರೆಗಿನ ಲೇಖಕಿಯರ ಬಗ್ಗೆ ವಿವರಗಳಿವೆ. ಇದೊಂದು ಅದ್ಭುತ ಕೊಡುಗೆ ಎಂದರು. ಆಶಾರಘು ಚಿಕ್ಕವಯಸ್ಸಿಗೆ ಬದುಕಿನಾಚೆಗೆ ಹೋಗಿದ್ದು ವಿಷಾದ ಎಂದು ಸಂತಾಪ ಸೂಚಿಸಿದರು.

ಆಶಾರಘು ಅವರ ತಂಗಿ ದೀಪಾ, ಇಬ್ಬರೂ ಲೇಖಕಿಯರ ಈ ಸಾವು ಎರಡು ಮಾದರಿಯದ್ದು. ಒಬ್ಬರದು ಪರಿಪೂರ್ಣ ಬದುಕು. ಮತ್ತೊಬ್ಬರದು ಅಪೂರ್ಣ. 86ರ ಉಷಾದೇವಿ 46ರ ಆಶಾರಘು ಸಾವಿನಿಂದ ನಮಗೆಲ್ಲಾ ಒಂದೊಂದು ಪಾಠವಿದೆ. ಅಕ್ಕಾ ಧಾವಂತದಲ್ಲೆ ಹೋಗಿಬಿಟ್ಟಿದ್ದು ಈ ಸಾವಿನ ಬಗ್ಗೆ ಎಲ್ಲರಿಗೂ ಇದೊಂದು ಪಾಠವಾಗಬೇಕು ಎಂದರು. ಅವರ ಸಾಹಿತ್ಯವನ್ನು ಉಳಿಸಿ, ಬೆಳೆಸುತ್ತೇವೆ ತಾವೆಲ್ಲರೂ ನಮ್ಮೊಂದಿಗಿರಬೇಕು ಎಂದು ಕೋರಿದರು.

ಕುಲಶೇಖರಿಯವರ ಮಗಳು, ಅಮ್ಮನ ಗುಣ, ನಡತೆ, ವ್ಯಕ್ತಿತ್ವದ ಬಗ್ಗೆ ಮಾತನಾಡುತ್ತಾ ಅವರಲ್ಲಿನ ಜೀವನೋತ್ಸಾಹ, ಎಲ್ಲವನ್ನು ನಿಭಾಯಿಸುವ ಛಲ, ಎದೆಗಾರಿಕೆಯೇ ನನಗೆ ಮತ್ತು ಮಕ್ಕಳಿಗೆ ಸದಾ ಸ್ಫೂರ್ತಿ ಎಂದು ಹೇಳಿದರು. ಆಶಾರಘು ಅವರ ಮಗಳು ಉಪಾಸನಾ ಮಾತನಾಡಿ ನನ್ನ ಪಾಲಿನ ಬೆಸ್ಟ್ ಅಮ್ಮ. ನಾನು ಅವಳಿಗೆ ಅಮ್ಮನಾಗಿದ್ದೆ. ಅವಳು ನನಗೆ ಗೆಳತಿಯಂತಿದ್ದಳು ಎಂದು ತಿಳಿಸಿದರು.

ಕಲೇಸಂ ಅಧ್ಯಕ್ಷರಾದ ಪ್ರೊ.ಆರ್. ಸುನಂದಮ್ಮ ಅವರು, ಕುಲಶೇಖರಿಯವರು ಈ ಇಳಿವಯಸ್ಸಿನಲ್ಲೂ ಉತ್ಸಾಹದಿಂದ ನಡೆದಾಡುತ್ತಾ ತಾವೆ ಮಾಡಿದ ತಾರಸಿ ತೋಟದಲ್ಲಿ ಬೆಳೆದ ಹೂಗಳನ್ನು ಕೊಟ್ಟಿದ್ದು. ಹಸಿರಿನ ಬಗ್ಗೆ ಅವರ ಆಸಕ್ತಿ, ಜೀವನೋತ್ಸಾಹ, ಕಲಾತ್ಮಕ ವಸ್ತುಗಳ ಬಗೆಗಿನ ಪ್ರೀತಿ, ಅತಿಥಿ ಸತ್ಕಾರ, ಎಲ್ಲರನ್ನು ಪ್ರೀತಿಸುವ ಗುಣ ಸ್ಮರಿಸಿದರು. ಆಶಾರಘು ಅವರ ನೆನಪಲ್ಲಿ ಕಂಬನಿ ಮಿಡಿದರು. ಈ ತರಹದ ಮಾನಸಿಕ ಒತ್ತಡಕ್ಕೆ ಸಿಲುಕಿ ಡಿಪ್ರೆಶನ್ ಗೆ ಒಳಗಾದವರ ಬಗ್ಗೆ ಸೂಕ್ಷ್ಮವಾಗಿ ಅರ್ಥೈಸಿಕೊಂಡು ಅದರಿಂದ ಅವರನ್ನು ಹೊರತರುವ ಪ್ರಯತ್ನ ಮಾಡಬೇಕು. ಇಂಥಾ ಸಾವಿನ ಬಗ್ಗೆ ಕುಹಕ, ತಿರಸ್ಕಾರ ಮಾಡದೆ ಅವರ ಮನಸ್ಥಿತಿಯನ್ನರಿತು ಎಚ್ಚರದಿಂದ ನೋಡಿಕೊಳ್ಳಬೇಕು. ಇಂಥ ಸ್ಥಿತಿಗೆ ಒಳಗಾದವರನ್ನು ಎಲ್ಲರೊಡನೆ ಬೇರೆಯುವಂತೆ ಮಾಡಬೇಕು. ಹಾಗಾಗದೆ ಮೌನಿಯಾಗಿಬಿಟ್ಟಾಗ ಈ ರೀತಿ ಆಗುತ್ತೆ. ಉಪಾಸನಾ ಅಮ್ಮನ ಎಲ್ಲಾ ಕನಸುಗಳನ್ನು ನನಸುಗೊಳಿಸಲಿ, ಅದಕ್ಕಾಗಿ ನಾವು ಮತ್ತು ಕಲೇಸಂ ಎಂದೆಂದೂ ಅವರೊಟ್ಟಿಗೆ ಇರುತ್ತೇವೆ ಎಂದರು.

ಕೃಷ್ಣಾಬಾಯಿ ಸಭೆಗೆ ವಂದಿಸಿದರು. ಕಾರ್ಯಕ್ರಮವನ್ನು ಕಲೇಸಂ ಕಾರ್ಯದರ್ಶಿ ಸುಮಾ ಸತೀಶ್ ನಿರೂಪಿಸಿದರು.

**– ಡಾ. ಟಿ. ಟಿ. ಅನುಸೂಯಾ ಹೊಂಬಾಳೆ**

**KARNATAKA LEKHAKIYARA SANGHA ( R ), BANGALORE**

**BALANCE SHEET AS AT 31ST MARCH, 2026**

| PREVIOUS YEAR (Rs.) | LIABILITIES | DETAILS Rs. | AMOUNT Rs. |
|---|---|---|---|
| 5,27,219.00 | **GENERAL FUND :** | | |
| | Opening Balance | 5,27,219.00 | |
| | Add : Prior Period Adjustment | 35,697.00 | |
| | Add : Excess of Income over Expenditure | 9,28,022.00 | 14,90,938.00 |
| 5,58,071.00 | | | |
| | **BUILDING FUND :** | | |
| | Building fund | | 5,58,071.00 |
| 60,48,584.00 | **PRIZE FUND & ENDOWMENT FUND :** | | |
| | Dattinidhi | | 60,48,584.00 |
| | **CURRENT LIABILITIES:** | | |
| | Advances Received | | 2,21,517.00 |
| **71,33,874.00** | **TOTAL** | | **83,19,110.00** |

| PREVIOUS YEAR (Rs.) | ASSETS | DETAILS Rs. | AMOUNT Rs. |
|---|---|---|---|
| | **FIXED ASSTES:** | | |
| 1,17,241.00 | Building : Opening Balance | 1,17,241.00 | |
| | Less : Depreciation | 11,724.00 | 1,05,517.00 |
| 247.00 | Books : Opening Balance | 247.00 | |
| | Less : Depreciation | 23.00 | 224.00 |
| 3,376.00 | Furniture : Opening Balance | 3,376.00 | |
| | Less : Depreciation | 506.00 | 2,870.00 |
| 65,205.00 | Laptop : Opening Balance | 65,205.00 | |
| | Less : Depreciation | 26,082.00 | 39,123.00 |
| 15,795.00 | Printer : Opening Balance | 15,795.00 | |
| | Less : Depreciation | 6,390.00 | 9,405.00 |
| 34,000.00 | Barewall : Opening Balance | - | |
| | Addition : | 34,000.00 | |
| | Less : Depreciation | 5,100.00 | 28,900.00 |
| | **INVESTMENTS :** | | |
| 49,99,638.00 | State Bank of India FD | 56,49,500.00 | |
| 11,04,095.00 | Canara Bank FD | 11,31,746.00 | |
| 52,138.00 | State Bank of India-Mysore FD | 52,138.00 | |
| 65,487.00 | The Hotel Industrial Co-operative | 65,487.00 | 68,98,841.00 |
| | **CURRENT ASSETS , LOANS AND ADVANCES :** | | |
| | **A.CURRENT ASSETS :** | | |
| 2,020.00 | Cash in Hand | 7,587.00 | |
| | Cash at Bank | | |
| 2,07,725.00 | Canara Bank - 31914 | 9,22,829.00 | |
| 50,968.00 | The Hotel Industrial Co-Operative Bank Ltd | 57,106.00 | |
| 5,50,150.00 | State Bank of India - SB | 1,86,466.00 | 11,73,988.00 |
| 20,430.00 | Income Tax Refund | 20,430.00 | |
| 39,359.00 | TDS Receivable | 39,812.00 | 60,242.00 |
| **71,32,874.00** | **TOTAL** | | **83,19,110.00** |

For KARNATAKA LEKHAKIYARA SANGHA ( R )

Place : Bangalore

Date : 27/07/2026

(President) (Secretary) (Treasurer)

KARNATAKA LEKHAKIYARA SANGHA ( R ), BANGALORE
INCOME AND EXPENDITURE ACCOUNT FOR THE YEAR ENDED 31ST MARCH, 2026

| PREVIOUS YEAR (Rs.) | EXPENDITURE | AMOUNT Rs. | PREVIOUS YEAR (Rs.) | INCOME | AMOUNT Rs. |
|---|---|---|---|---|---|
| | **To SANGHA'S MAINTENANCE CHARGES :** | | | | |
| 13,500.00 | " Salaries | | 66,451.00 | By FD Intrest-Canara Bank | 71,886.00 |
| 1,10,000.00 | " Savithramma Program | | 3,26,989.00 | " Fd intrest-state Bank of India | 3,81,442.00 |
| 10,100.00 | " Travelling And Conveyance | 9,300.00 | 5,499.00 | " Fd intrest-Hotel Industrial | 4,544.00 |
| 7,342.00 | " Building Tax | | 26,202.00 | " Membership Fees | 2,90,004.00 |
| 43.00 | " Bank Charges | 2,572.00 | 13,827.00 | " S B Intrest Received | 17,376.00 |
| 1,00,570.00 | " Printing And Stationery (Invatation And Letter Head) | 17,889.00 | - | " Grant from Govt of Karnataka | |
| - | " Lekaki Magazin Expenses | 95,025.00 | 659.00 | " Intrest on Income Tax Refund | |
| 4,629.00 | " Electricity Charges | 6,017.00 | 2,48,000.00 | " Donation | 4,92,600.00 |
| 1,38,264.00 | " Ankita Prashasti Program | | 1,80,000.00 | " Grant from-kannada Cultural Department | 88,600.00 |
| 2,00,000.00 | " Gadinaadu Pradhikara Program | | 10,00,000.00 | " Grant from-kannada Cultural Department | 2,00,000.00 |
| 17,700.00 | " Audit Fees | 21,700.00 | 2,00,000.00 | " Grant Form - Gadinaada Pradhikara | |
| 14,950.00 | " Annual General Body Meeting | 9,850.00 | - | " Central Sahithya Academy | 5,000.00 |
| 1,29,417.00 | " Annual Prize Distribuation Program | 18,840.00 | - | " Advertisement Receipts | 10,000.00 |
| 1,02,109.00 | " Anupama Niranjana Program | | | | |
| 11,50,221.00 | " Kannada Samskuti Illake Program | | | | |
| 75.00 | " Courier And postage | 424.00 | | | |
| - | " Election Program | 2,46,680.00 | | | |
| 53,175.00 | " Lekaki Magazin | 35,700.00 | | | |
| - | " Rates & Taxes | | | | |
| | " Repairs & Maintenance | 14,519.00 | | | |
| | " Kallarali Hennagi Act Expenses | 62,750.00 | | | |
| | " Cleaning Expenses | 2,688.00 | | | |
| | " Computer Maintenance | 1,000.00 | | | |
| | " Datti Prashasthi | 22,500.00 | | | |
| 11,400.00 | " Indira Ratna Dattinidhi | - | | | |
| 39,500.00 | " Kamala Hampana | - | | | |
| | " Document Uploading Charges | 1,500.00 | | | |
| | " Government Fees | 3,300.00 | | | |
| 38,700.00 | " Nagamani S Rao Dattinidhi Program | - | | | |
| | " Management Expenses | 6,735.00 | | | |
| | " Misc Expenses | 4,614.00 | | | |
| | " Wild Swans Board of International Film Festival | | | | |
| 28,430.00 | " Depreciation | 49,827.00 | | | |
| - | **" Excess of Income Over Expenditure: ( Transferred to General Fund)** | **9,28,022.00** | **1,02,496.00** | **" Excess of Expenditure Over Income : ( Transferred to General Fund)** | |
| **21,70,125.00** | **TOTAL** | **15,61,452.00** | **21,70,123.00** | **TOTAL** | **15,61,452.00** |

For KARNATAKA LEKHAKIYARA SANGHA ( R )

Place : Bangalore

Date : 27/07/2026

(President) (Secretary) (Treasurer)

## KARNATAKA LEKHAKIYARA SANGHA ( R ), BANGALORE
## RECEIPTS AND PAYMENTS ACCOUNT FOR THE YEAR ENDED 31ST MARCH, 2026

| PREVIOUS YEAR (Rs.) | RECEIPTS | AMOUNT Rs. | PREVIOUS YEAR (Rs.) | PAYMENTS | AMOUNT Rs. |
|---|---|---|---|---|---|
| | By Opening Balance | | | | |
| 977.00 | Cash in Hand | 2,020.00 | | **To SANGHA'S MAINTENANCE CHARGES** | |
| 1,72,060.00 | Cash at Bank: Canara Bank | 2,07,725.00 | 1,00,570.00 | Printing & Stationary | 13,758.00 |
| 45,499.00 | Hotel Industrial Co-operative Bank | 50,968.00 | 75.00 | Postage and Courier | |
| 4,53,823.00 | State Bank Of India | 3,56,150.00 | 4,620.00 | Electricity Charges | |
| 13,827.00 | Bank Interest | 17,376.00 | 10,100.00 | Travelling and Conveyance | 2,000.00 |
| 26,202.00 | Membership Fees | 2,90,004.00 | 43.00 | Bank Charges | 2,557.00 |
| 2,76,836.00 | Interest On FD - SBI Bank | 2,91,902.00 | 7,342.00 | Building Tax | |
| - | Grant from Govt of Karnataka | | - | Suspense Account | 1,66,270.00 |
| 52,207.00 | Interest On FD - Canara Bank | 52,213.00 | 13,500.00 | Flat Maintenance Charges | |
| - | Income Tax Refund | | | | |
| 5,499.00 | FD Interest - Hotel Industrialists | 4,544.00 | | **"To LITERARY PROGRAMME"** | |
| 659.00 | Interest on Income Tax Refund | | - | 45th Annual Award Function | |
| | Susheela Somashekar Dattinidhi | | 2,12,109.00 | Savithramma and Anupama Datti Program | |
| 1,00,000.00 | Hampa Nagarajaiah Kamala Dattinidhi | | - | Gadinaadu Pradhikara Programm | |
| 50,000.00 | Leela Kalakoti Dattinidhi | | 1,38,264.00 | Ankita Prashasti Program | |
| 5,00,000.00 | Manu Baligar Dattinidhi | | 17,700.00 | Audit Fee | 21,700.00 |
| 5,000.00 | Pushpa H L Dattinidhi | | 14,950.00 | Annual General Body Meeting | |
| 1,00,000.00 | Sankamma Gangappa Dattinidhi | | 1,29,417.00 | Annual Prize Distribution Program | |
| 1,00,000.00 | Shailaja Nagaraj Dattinidhi | | - | Computer | |
| - | Advertisement Income | 10,000.00 | - | General Body Meeting | |
| - | Sahithya Academy | 5,000.00 | - | Repairs & maintenance | |
| - | Advances Received | 2,21,517.00 | - | Election Program | 2,44,295.00 |
| 57,527.00 | TDS Receivable | 41,520.00 | 53,175.00 | Lekaki Magazine | |
| 2,00,000.00 | Grant From - Gadinaadu Pradhikara | | - | Drama Workshop Ghataprabha | |
| 1,80,000.00 | Grant From Kannada Cultural Department | 88,200.00 | - | H S Parvathi Datti Prashasthi | |
| 10,00,000.00 | Grant From - Karnataka Cultural Department | 2,00,000.00 | 11,400.00 | Indira Ratna Dattanidhi | |
| 2,48,000.00 | Donation for Sammelana | 4,92,600.00 | 39,500.00 | Nadoja Kamala Hampana Dattinidhi | |
| | | | - | Kavi Kavya Samvada | |
| | | | - | Lekakai Publication | 1,30,725.00 |
| | | | - | Leka Loka Manglore | |
| | | | 38,700.00 | Nagamani S Rao Dattanidhi Programme | |
| | | | - | Nataka Rachana Shibira | |
| | | | - | Prashasti Pradan | |
| | | | - | Wild Swan Board of International Film Festival | |
| | | | | **"Karnataka Lekhakiyara Sanghada 8th Sammelana" expenses** | |
| | | | 1,19,888.00 | Mike, Carpet, Special Light, Chairs | |
| | | | 20,060.00 | Flower Decoration | |
| | | | 36,960.00 | Gift Cotton Design Bags | |
| | | | 2,10,630.00 | Mementos | |
| | | | 50,188.00 | Banners/Flex/Posters/Digital Printings | |
| | | | 48,675.00 | Digital Designing | |
| | | | 2,12,500.00 | Food - Savitramma Caterers | |
| | | | 62,760.00 | Drama Production - Jayalakshmi Patil | |
| | | | 2,10,500.00 | Honorarium | |
| | | | 1,40,000.00 | Office Expenses | |
| | | | 30,300.00 | Dry Fruits/Flowers | |
| | | | 7,760.00 | Sammelana President Gift Expenses | |
| | | | | **Gadi Pradhikara-Lekhakiyara Sammelana** | |
| | | | 29,500.00 | Brochur, Certificate & ID Cards Printing | |
| | | | 37,000.00 | Boarding & Lodging | |
| | | | 17,500.00 | Cotton Towels | |
| | | | 19,940.00 | Photography Expense | |
| | | | 1,300.00 | Press Conference Banner Expenses | |
| | | | 7,700.00 | Press Meet Expenses | |
| | | | 14,000.00 | Repair & Maintenance | |
| | | | 8,000.00 | Flower Decoration | |
| | | | 32,500.00 | Travelling Expenses for Lekhakiyara Sammelana | |
| | | | 20,000.00 | Singers Remuneration | |
| | | | 12,560.00 | Miscellenous Expense | 2,900.00 |
| | | | 2,50,000.00 | Fixed Deposit - Canara Bank | 50,000.00 |
| | | | 5,00,200.00 | Fixed Deposit - SBI | 5,20,193.00 |
| | | | 39,359.00 | TDS Receivable | 3,953.00 |
| | | | 40,000.00 | Borewell | |
| | | | 2,019.00 | **Cash in Hand** | 7,587.00 |
| | | | | **Cash at Bank** | |
| | | | 2,07,725.00 | Canara Bank | 9,22,829.00 |
| | | | 50,968.00 | Hotel Industrial Co-Op Bank | 57,106.00 |
| | | | 3,56,150.00 | State Bank of India | 1,86,406.00 |
| **35,88,116** | **TOTAL** | **23,31,739.00** | **35,88,116.00** | **TOTAL** | **23,31,739.00** |

**For KARNATAKA LEKHAKIYARA SANGHA ( R )**

Place: Bangalore
Date: 27/07/2026

(President) (Secretary) (Treasurer)




**ಕಲೇಸಂ, ಬಾಗಲಕೋಟೆ ಜಿಲ್ಲಾ ಶಾಖೆಯ ಸರ್ವ ಸದಸ್ಯರ ಸಭೆ**

# ಮಾತೋಶ್ರೀ ಶಂಕರಮ್ಮ ಪ.ಬಳಿಗಾರ್‌ಪ್ರಶಸ್ತಿ ಪ್ರದಾನ



**ಬೆಂಗಳೂರು:** ಸಾಹಿತ್ಯದಲ್ಲಿ ಇಂದು ಕೃತಕ ಬುದ್ಧಿಮತ್ತೆ ಆತಂಕಕಾರಿಯಾಗಿ ಬೆಳವಣಿಗೆಯಾಗಿದ್ದು, ಸೃಜನಶೀಲತೆ, ನೈತಿಕತೆ, ಸಾಹಿತ್ಯದ ಪ್ರಶ್ನೆ ಎತ್ತುತ್ತಾ ಸೃಜನಶೀಲ ಲೇಖನಗಳ ಮರುವಿಮರ್ಶೆ ಮಾಡುವಂತೆ ಮಾಡುತ್ತಿದೆ ಎಂದು ಹಿರಿಯ ಲೇಖಕಿ ಡಾ.ವಸುಂಧರಾ ಭೂಪತಿ ಆತಂಕ ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕರ್ನಾಟಕ ಲೇಖಕಿಯರ ಸಂಘ ಆಯೋಜಿಸಿದ್ದ 'ಮಾತೋಶ್ರೀ ಶಂಕರಮ್ಮ ಪ.ಬಳಿಗಾರ್‌ಪ್ರಶಸ್ತಿ ಪ್ರದಾನ' ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರ ಕಥೆಗಳಲ್ಲಿ ಪ್ರಸ್ತುತ ಸಾಮಾಜಿಕ ತಲ್ಲಣಗಳು ಸಮರ್ಥವಾಗಿ ತಿಳಿಸುವ ಮೂಲಕ ಮಹಿಳಾ ಸಾಹಿತ್ಯ ಮೇಲುಗೈ ಸಾಧಿಸುತ್ತಿದೆ ಎಂದರು. ಮಾಜಿ ಸಚಿವೆ ರಾಣಿ ಸತೀಶ್ ಮಾತನಾಡಿದರು. ಕಸಾಪ ನಿಕಟ ಪೂರ್ವ ಅಧ್ಯಕ್ಷರಾದ ಡಾ ಮನು ಬಳಿಗಾರ್, ಡಾ. ಮೇಘಾ ಸಿದ್ದಾರ್ಥ ಇದ್ದರು.

**ಪ್ರಶಸ್ತಿ ಪ್ರದಾನ:** ಮಾಧವಿ ಭಂಡಾರಿ ಕೆರೆಕೋಣ (ಕಾವ್ಯ ವಿಭಾಗ), ಬಿ.ಟಿ.ಜಾಹ್ನವಿ (ಗದ್ಯ), ಪ್ರೊ.ವಿಜಯಾ ಬಿ.ಕೋರಿಶೆಟ್ಟಿ (ಶಿಕ್ಷಣ ಕ್ಷೇತ್ರ) ಅವರಿಗೆ ಮಾತೋಶ್ರೀ ಶಂಕರಮ್ಮ ಪ.ಬಳಿಗಾರ್‌ಪ್ರಶಸ್ತಿ ನೀಡಿ ಗೌರವಿಸಲಾಯಿತು.




ಕಲೇಸಂ ವೆಬ್‌ಸೈಟ್ ಉದ್ಘಾಟನೆ




ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ ಪೃಥಾ ಬಿಡುಗಡೆ
(ಕಲೇಸಂ ಇತಿಹಾಸದಲ್ಲಿ ಮೊದಲ ಬಾರಿ)

ಇವರಿಗೆ

..........................................................................................................................

..........................................................................................................................

..........................................................................................................................

ಕರ್ನಾಟಕ ಲೇಖಕಿಯರ ಸಂಘ (ರಿ.), ಬೆಂಗಳೂರು
206, 2ನೇ ಮಹಡಿ, ವಿಜಯ ಮ್ಯಾನ್‌ಶನ್, 2ನೇ ತಿರುವು,
2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.
Website : www.karnatakalekhakiyarasangha.org,
E-mail : lekhaki2012@gmail.com

ಮುದ್ರಣ: ಮುದ್ರಕ್, ಬಸವೇಶ್ವರನಗರ, ಬೆಂಗಳೂರು.